'ಉಲ್ಲಂಘನೆ' ಕಾದಂಬರಿಯಲ್ಲಿ
ಮಾತೃರೂಪಿ ಸಂಸ್ಕೃತಿಯ ಸ್ತ್ರೀ ಕೇಂದ್ರಿತ ಸವಾಲುಗಳು

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್. ಪದವಿಗಾಗಿ
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು
ಹರಿಣಾಕ್ಷಿ ಎಂ.ಡಿ.

ಮಾರ್ಗದರ್ಶಕರು
ಡಾ. ಪಾ.ನ ಮಯ್ಯ

೨೦೦೬

ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ,
ಬಲ್ಮಠ. ಮಂಗಳೂರು - ೫೭೫ ೦೦೧

'ಉಲ್ಲಂಘನೆ' ಕಾದಂಬರಿಯಲ್ಲಿ ಮಾತೃರೂಪಿ ಸಂಸ್ಕೃತಿಯ ಸ್ತ್ರೀ ಕೇಂದ್ರಿತ ಸವಾಲುಗಳು

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್. ಪದವಿಗಾಗಿ
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು
ಹರಿಣಾಕ್ಷಿ ಎಂ.ಡಿ.

ಮಾರ್ಗದರ್ಶಕರು
ಡಾ. ಪಾ.ನ. ಮಯ್ಯ

೨೦೦೬

ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ,
ಬಲ್ಮಠ, ಮಂಗಳೂರು – ೫೭೫ ೦೦೧

ಯೋಗ್ಯತಾ ಪತ್ರ

ಹರಿಣಾಕ್ಷಿ ಎಂ.ಡಿ. ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ – 'ಉಲ್ಲಂಘನೆ' ಕಾದಂಬರಿಯಲ್ಲಿ ಮಾತೃರೂಪಿ ಸಂಸ್ಕೃತಿಯ ಸ್ತ್ರೀ ಕೇಂದ್ರಿತ ಸವಾಲುಗಳು – ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್. ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಡಾ. ಪಾ.ನ. ಮಯ್ಯ
ಸಂಶೋಧನ ಮಾರ್ಗದರ್ಶಕರು
ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ
ಬಲ್ಮಠ, ಮಂಗಳೂರು – ೫೭೫ ೦೦೧

ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ – 'ಉಲ್ಲಂಘನೆ' ಕಾದಂಬರಿಯಲ್ಲಿ ಮಾತೃರೂಪಿ ಸಂಸ್ಕೃತಿಯ ಸ್ತ್ರೀ ಕೇಂದ್ರಿತ ಸವಾಲುಗಳು – ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರದಲ್ಲಿ ಡಾ. ಪಾ. ನ. ಮಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

ಹರಿಣಾಕ್ಷಿ ಎಂ.ಡಿ.
ಸಂಶೋಧಕರು
ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ
ಬಲ್ಮಠ, ಮಂಗಳೂರು. ೫೭೫ ೦೦೧

‘ಉಲ್ಲಂಘನೆ’ ಕಾದಂಬರಿಯಲ್ಲಿ
ಮಾತೃರೂಪಿ ಸಂಸ್ಕೃತಿಯ ಸ್ತ್ರೀ ಕೇಂದ್ರಿತ ಸವಾಲುಗಳು

ಅಧ್ಯಯನದ ವಿವರಗಳು

ಅಧ್ಯಾಯ ೧

ಅಧ್ಯಯನದ ಪರಿಗ್ರಹಿಕೆ

೧.೧ ಅಧ್ಯಯನದ ಉದ್ದೇಶ ಮತ್ತು ಸ್ವರೂಪ

೧.೨ ಅಧ್ಯಯನದ ವ್ಯಾಪ್ತಿ

೧.೩ ಸ್ತ್ರೀವಾದಿ ಅಧ್ಯಯನ

೧.೪ ಮಹಿಳಾ ಅಧ್ಯಯನದ ಬೆಳವಣಿಗೆ

ಅಧ್ಯಾಯ – ೧ ಅಧ್ಯಯನದ ಪರಿಗ್ರಹಿಕೆ

ಸಾಹಿತ್ಯ ಎನ್ನುವುದು ಅನುಭವದ ಅಭಿವ್ಯಕ್ತಿ. ಗತಕಾಲದಲ್ಲಿ ನಡೆದಂತಹ ಬೇರೆ ಬೇರೆ ವಿಚಾರಗಳನ್ನು ಇದು ತನ್ನ ಗರ್ಭದಲ್ಲಿ ಅಡಗಿಸಿಕೊಂಡಿದೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ಸೃಜನಾತ್ಮಕ ಮನಸ್ಸಿನ ಅಭಿವ್ಯಕ್ತಿಯೇ ಸಾಹಿತ್ಯವಾಗಿರುವುದರಿಂದ ಅದು ವರ್ತಮಾನದ ಸಂದರ್ಭದಲ್ಲಿ ಭೂತಕಾಲವನ್ನು ಹಿಡಿಯುತ್ತಾ, ಭವಿಷ್ಯದ ಸಾಧ್ಯತೆಗಳ ಕಡೆಗೆ ಗಮನ ಸೆಳೆಯುತ್ತದೆ. ಸುಮಾರು ಒಂದು ಶತಮಾನ ಕಾಲದ ಇತಿಹಾಸವಿರುವ ಕನ್ನಡ ಕಾದಂಬರಿ ಪ್ರಕಾರವು ಬದುಕಿನ ಸಮಗ್ರ ಒಳನೋಟಗಳನ್ನು ಸೂಕ್ಷ್ಮವಾಗಿ ಅವಲೋಕಿಸುವ ಮತ್ತು ನಿರ್ವಹಿಸುವ ಕೆಲಸವನ್ನು ಮಾಡುತ್ತಲೇ ಬಂದಿದೆ. ಹಾಗಾಗಿ ಕಾದಂಬರಿಗಳು ಸಮಾಜ, ಸಂಸ್ಕೃತಿ ಮತ್ತು ಸಾಹಿತ್ಯದ ಅಸ್ತಿತ್ವದ ಸಂಕಥನಗಳೇ ಆಗಿವೆ.

ಭಾರತದಲ್ಲಿ ಯುರೋಪಿಯನ್‌ರ, ಮುಖ್ಯವಾಗಿ ಬ್ರಿಟಿಷರ ಆಗಮನದ ನಂತರ ನಡೆದ ವ್ಯಾಪಕ ಮುಖಾಮುಖಿಯ ಪರಿಣಾಮಗಳು ಭಾರತೀಯ ಸಂಸ್ಕೃತಿಯಲ್ಲಿ ಕ್ರಾಂತಿಕಾರಕ ಪರಿವರ್ತನೆಯನ್ನುಂಟುಮಾಡಿದವು. ಈ ಮುಖಾಮುಖಿಯ ಸ್ವರೂಪವೇ ದ್ವಂದ್ವಪೂರ್ಣವಾಗಿದ್ದಿತ್ತು. “ವಸಾಹತುವಾದಕ್ಕೆ ಭಾರತೀಯರ ಪ್ರತಿಕ್ರಿಯೆ ಒಂದು ದೃಷ್ಟಿಯಿಂದ ಸಕಾರಾತ್ಮಕವಾಗಿದ್ದರೆ ಇನ್ನೊಂದು ದೃಷ್ಟಿಯಿಂದ ನಕಾರಾತ್ಮಕವಾಗಿದ್ದಿತು. ಸಕಾರಾತ್ಮಕ ಪ್ರತಿಕ್ರಿಯೆಯೆಂದರೆ ಭಾರತೀಯರು ತಮ್ಮ ಸಂಸ್ಕೃತಿಯನ್ನು ಅನ್ಯ ಸಂಸ್ಕೃತಿಯ ಮೌಲ್ಯಗಳ ಬೆಳಕಿನಲ್ಲಿ ಪರೀಕ್ಷಿಸಿದ್ದು. ಇದರಿಂದ ಇತಿಹಾಸಕ್ಕೆ ಚಾಲನೆ ದೊರೆತು ಪರಿವರ್ತನೆಯ ಪ್ರಕ್ರಿಯೆ ವೈಯಕ್ತಿಕ ಹಾಗೂ ಸಾಮಾಜಿಕ ಜೀವನದ ಎಲ್ಲ ಸ್ತರಗಳನ್ನೂ ವ್ಯಾಪಿಸಿಕೊಂಡು ಭಾರತೀಯ ಸಮಾಜದಲ್ಲಿ ಅತ್ಯಂತ ಅರ್ಥಪೂರ್ಣವಾದ ಸಂವಾದ ಹುಟ್ಟಿಕೊಳ್ಳುವುದಕ್ಕೆ ಕಾರಣವಾಯಿತು. ಇದರ ಜೊತೆಗೆ ಅನ್ಯ ಸಂಸ್ಕೃತಿಯ ಸ್ವೀಕೃತಿಯಿಂದಾಗಿ ಸ್ವಸಂಸ್ಕೃತಿಯ ನಾಶದ ಭಯವೂ ಭಾರತೀಯರನ್ನು ಆವರಿಸಿಕೊಂಡಿತು.” (ಅಮೂರ ಜಿ. ಎಸ್., ೨೦೦೬, ಪುಟ ೧೨). ವಸಾಹತುವಾದದ ಪರಿಣಾಮದಿಂದಾಗಿ ಭಾರತೀಯರು ತಮ್ಮ ಸಂಸ್ಕೃತಿಯನ್ನು ತಮಗಾಗಿಯೇ ವ್ಯಾಖ್ಯಾನಿಸಿಕೊಳ್ಳುವಂತಾಯಿತು. “ಹೊಸ ವೈಚಾರಿಕತೆ ತಲೆದೋರಿದಾಗ ಅದನ್ನು ಹೆಚ್ಚು ಕ್ಲಿಷ್ಟವಿಲ್ಲದೆ ಕ್ರಮಬದ್ಧಗೊಳಿಸಬಹುದು, ಆದರೆ ಹೊಸ ಅನುಭವದ ಮಾತು

ಹಾಗಲ್ಲ" ಎಂದು ಡಿ.ಎಚ್. ಲಾರೆನ್ಸ್ ಹೇಳಿದ್ದಾನೆ. (ಅಮೂರ ಜಿ. ಎಸ್., ೨೦೦೬, ಪುಟ ೧೨). ಹೊಸ ಅನುಭವದ ಸಂದರ್ಭದಲ್ಲಿ ನಮ್ಮೆದುರು ಎರಡು ಪರ್ಯಾಯಗಳಿರುತ್ತವೆ. ಒಂದು, ಅದನ್ನು ಸೃಜನಾತ್ಮಕವಾಗಿ ಎದುರಿಸುವುದು, ಇನ್ನೊಂದು ಅದರಿಂದ ತಪ್ಪಿಸಿಕೊಳ್ಳುವುದು. ವಸಾಹತುವಾದದ ಅನುಭವಕ್ಕೂ ಈ ಮಾತು ಚೆನ್ನಾಗಿ ಅನ್ವಯಿಸುತ್ತದೆ. ಭಾರತೀಯ ಸಮಾಜ ರಾಜಕೀಯವಾಗಿ, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ವಸಾಹತುವಾದದ ಆಹ್ವಾನವನ್ನು ಸ್ವೀಕರಿಸಿತು. ಈ ಹಿನ್ನೆಲೆಯಲ್ಲಿ ಭಾರತೀಯ ಕಾದಂಬರಿಯ ಇತಿಹಾಸವನ್ನು ನೋಡಿದಾಗ ಎರಡು ಪ್ರವೃತ್ತಿಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಮೊದಲನೆಯದು ವಾಸ್ತವವಾದ. ಎರಡನೆಯದು ರಮ್ಯವಾದ. ಭಾರತೀಯ ಕಾದಂಬರಿಯ ಕೇಂದ್ರ ಪ್ರವಾಹವನ್ನು ವಾಸ್ತವವಾದವೆಂದೇ ಗುರುತಿಸಬೇಕಾಗುತ್ತದೆ.

ಭಾರತೀಯ ಸಂದರ್ಭದಲ್ಲಿ ಕನ್ನಡ ಕಾದಂಬರಿಯ ಸ್ವರೂಪವನ್ನು ವಿಮರ್ಶಿಸಿದಾಗ ಅದರ ಎರಡು ಲಕ್ಷಣಗಳು ಎದ್ದು ಕಾಣುತ್ತವೆ. ಮೊದಲನೆಯದು, ಪರಿವರ್ತನೆಯ ಪ್ರಕ್ರಿಯೆಯಲ್ಲಿ ಅದು ತೋರುವ ಬಲವಾದ ಆಸ್ಥೆ. ಕಳೆದ ಒಂದು ಶತಮಾನದ ಕನ್ನಡ ಕಾದಂಬರಿಯನ್ನು ಅವಲೋಕಿಸಿದಾಗ ಈ ಪ್ರಕ್ರಿಯೆಯ ಹಲವಾರು ಆಯಾಮಗಳು – ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ಕೌಟುಂಬಿಕ, ವೈಯಕ್ತಿಕ ಹೀಗೆ ಗೋಚರವಾಗುತ್ತದೆ. ಕನ್ನಡ ಸೃಜನಶೀಲ ಮನಸ್ಸು ಎದುರಿಸುತ್ತಿರುವ ಬಹುಮುಖ್ಯ ಸಮಸ್ಯೆಯೆಂದರೆ ನಮ್ಮ ಪರಂಪರೆಯ ಜೊತೆಗೆ ಯಾವ ರೀತಿಯ ಸಂಬಂಧವನ್ನು ಸೃಷ್ಟಿಸಿಕೊಳ್ಳಬಹುದೆಂಬುದು. ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವುದು ಒಂದು ಸಾಧ್ಯತೆಯಾದರೆ, ಬೇರೆ ಬೇರೆ ಸಂಸ್ಕೃತಿಗಳನ್ನು ಸ್ವೀಕರಿಸಿ ಅದರ ಬಗ್ಗೆ ವಿಶೇಷ ಆಸಕ್ತಿಯನ್ನು ವಹಿಸುವುದು ಇನ್ನೊಂದು ಸಾಧ್ಯತೆ.

೨೦ನೆಯ ಶತಮಾನದ ಕಡೆಯಲ್ಲಿ ಕನ್ನಡ ಮನಸ್ಸು ಒಂದು ರೀತಿಯ ಸವಾಲನ್ನೆದುರಿಸುತ್ತಿದೆ. ಪರಂಪರೆಯ ಜೊತೆ ಸೃಷ್ಟಿಸಿಕೊಳ್ಳಬಹುದಾದ ಸಂಬಂಧದ ಸ್ವರೂಪದ ಅನೇಕ ಸಾಧ್ಯತೆಗಳನ್ನು ಅನ್ವೇಷಿಸುತ್ತಿದೆ. ವಸಾಹತುಶಾಹಿಯ

ಪರಿಣಾಮದ ತಲ್ಲಣದಿಂದ ಚೇತರಿಸಿಕೊಳ್ಳುತ್ತಿರುವ ಮನಸ್ಸು ಪರಂಪರೆಯನ್ನು ಹೊಸ ಬೆಳಕು ಆಸಕ್ತಿಗಳಿಂದ ನೋಡುತ್ತಿದೆ. ಪರಂಪರೆಯ ಅತ್ಯುತ್ತಮ ಅಂಶಗಳನ್ನು ಸಮಕಾಲೀನ ಬದುಕಿಗೆ, ಸೃಷ್ಟಿಗೆ ಹಾಯಿಸಿಕೊಳ್ಳುವ ಪ್ರಯತ್ನ ಒಂದು ಕಡೆಗಿದ್ದರೆ, ಪರಂಪರೆಯ ಪ್ರಧಾನ ಧಾರೆಗಿಂತ ಭಿನ್ನ ನೆಲೆಯಲ್ಲಿ ನಿಂತು ಚಿಂತಿಸುವುದು ಈ ಪ್ರಯತ್ನದ ಇನ್ನೊಂದು ಮುಖ.

ಡಾ. ನಾ. ಮೊಗಸಾಲೆಯವರು ತಮ್ಮ ಬೃಹತ್ ಕಾದಂಬರಿ 'ಉಲ್ಲಂಘನೆ'ಯಲ್ಲಿ ದಕ್ಷಿಣ ಕನ್ನಡದ ಬಂಟ ಸಮುದಾಯದ ಒಂದು ಗುತ್ತಿನ ಮನೆಯ ಪರಂಪರೆಯ ಕುರಿತಾದ ನಾನಾ ಅಂಶಗಳನ್ನು ಚಿತ್ರಿಸುತ್ತಾ ಅದು ಹೇಗೆ ವಿಘಟನೆ ಹೊಂದುತ್ತಾ ಹೋಗುತ್ತದೆಯೆನ್ನುವ ವಿಚಾರವನ್ನು ತಿಳಿಸಿಕೊಡುತ್ತಾರೆ. ಈ ಕಾದಂಬರಿಯಲ್ಲಿ ಭೂ ಮಸೂದೆಯ ಕಾರಣದಿಂದ ಉಂಟಾದ ಭೂಮಿಯ ಹಕ್ಕಿನ ಹಸ್ತಾಂತರ ಮತ್ತು ಸರಕಾರದ ಕೈಗಾರಿಕೀಕರಣ ಪ್ರೋತ್ಸಾಹ ನೀತಿಯಿಂದಾಗಿ ಭೂಮಿ ಬಹುರಾಷ್ಟ್ರೀಯ ಕಂಪೆನಿಗಳ ಪಾಲಾಗುವ ವಿಚಾರಗಳು ಒಳಗೊಂಡಿವೆ. ಸಮಾಜದ ಬೇರೆ ಬೇರೆ ಸಮಸ್ಯೆಗಳ ಗಂಭೀರವಾದ ಮಂಥನಗಳು ಇಲ್ಲಿ ನಡೆದಿವೆ. ಗುತ್ತಿನ ವೈಭವ, ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗಬೇಕೆನ್ನುವ ನಿಲುವು ಒಂದು ವರ್ಗದವರದ್ದಾಗಿದ್ದರೆ, ಅದಕ್ಕೆ ಧಕ್ಕೆಯನ್ನುಂಟುಮಾಡುವ ಸಂದರ್ಭಗಳು ಹಲವು.

ಮಾತೃರೂಪಿ ಸಂಸ್ಕೃತಿಯನ್ನು ಮುಂದುವರಿಸಿಕೊಂಡು ಬಂದಿರುವ ಬಂಟ ಜನಾಂಗದಲ್ಲಿ ಮಹಿಳೆಗೆ ವಿಶೇಷವಾದ ಪ್ರಾಶಸ್ತ್ಯವಿದೆ. ತನ್ನ ಮನೆತನದ ಎಲ್ಲಾ ಸಂಸ್ಕೃತಿ, ವೈಭವಗಳನ್ನು ಆಕೆ ಬಹಳ ಚಾಕಚಕ್ಯತೆಯಿಂದ ನಿಭಾಯಿಸಿಕೊಂಡು ಹೋಗುತ್ತಾಳೆ. 'ಉಲ್ಲಂಘನೆ' ಕಾದಂಬರಿಯಲ್ಲಿ ಗುತ್ತಿನ ಯಜಮಾನಿ ತನಗೆ ಎದುರಾಗುವ ಸಮಸ್ಯೆಗಳನ್ನು ಯಾವ ರೀತಿಯಲ್ಲಿ ಎದುರಿಸುತ್ತಾಳೆ ಎನ್ನುವ ಹಿನ್ನೆಲೆಯನ್ನಿಟ್ಟುಕೊಂಡು ನನ್ನ ಅಧ್ಯಯನದ ವಿಧಿ ವಿಧಾನವನ್ನು ರೂಪಿಸಿಕೊಳ್ಳಲಾಗಿದೆ. ಸ್ತ್ರೀವಾದಿ ನೆಲೆಯನ್ನಿಟ್ಟುಕೊಂಡು ಈ ಕಾದಂಬರಿಯ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೧.೧ ಅಧ್ಯಯನದ ಉದ್ದೇಶ ಮತ್ತು ಸ್ವರೂಪ:

ಕರಾವಳಿ ಪ್ರದೇಶಗಳಲ್ಲಿ ವ್ಯಾಪಕವಾಗಿ ಕಾಣಿಸಿಕೊಳ್ಳುವ ಮಾತೃಪ್ರಧಾನ ಸಂಸ್ಕೃತಿಯಲ್ಲಿ ಹೆಣ್ಣು ಕುಟುಂಬದ ಪ್ರಮುಖ ಸ್ಥಾನದಲ್ಲಿರುವವಳು. ಕುಟುಂಬದ ವಂಶ, ಆಸ್ತಿ, ಪರಂಪರೆ ಮತ್ತು ಉತ್ತರಾಧಿಕಾರಗಳು ಅನುವಂಶೀಯವಾಗಿ ತಾಯಿಯಿಂದ ಮಗಳಿಗೆ ಇಳಿದು ಬರುತ್ತದೆ. ಮಕ್ಕಳು ತಾಯಿಯ ಬಳಿ(ಗೋತ್ರ)ಯನ್ನು ಪಡೆದುಕೊಳ್ಳುತ್ತಾರೆ. ಹೆಣ್ಣು ಇಲ್ಲಿ ಪಿತೃವಂಶೀಯ ಕುಟುಂಬದ ಹೆಣ್ಣಿಗಿಂತ ಹೆಚ್ಚಿನ ಅಧಿಕಾರವನ್ನು ಪಡೆದಿರುತ್ತಾಳೆ. 'ಉಲ್ಲಂಘನೆ' ಕಾದಂಬರಿಯು ದಕ್ಷಿಣ ಕನ್ನಡದ ಬಂಟ ಜನಾಂಗದ ಒಂದು ಗುತ್ತಿನ ಮನೆಯ ವಿಘಟನೆಯ ಕತೆಯಾಗಿದೆ. ಬಂಟ ಜನಾಂಗವನ್ನು ಕೇಂದ್ರವಾಗಿಟ್ಟುಕೊಂಡು ದಕ್ಷಿಣ ಕನ್ನಡದಲ್ಲಿ ಕಾಣಿಸಿಕೊಳ್ಳುವ ಬೇರೆ ಬೇರೆ ಜಾತಿ, ಪಂಗಡಗಳ ಕೌಟುಂಬಿಕ ಜೀವನ, ಸಾಂಸ್ಕೃತಿಕ ವಿವರಗಳು, ಇಲ್ಲಿ ಸಾಕಾರಗೊಂಡಿವೆ.

ಮಂಗಳೂರು ಮತ್ತು ಕಾಸರಗೋಡುಗಳ ನಡುವಿನ ಒಂಬತ್ತುಕೆರೆ ಎಂಬ ಗ್ರಾಮದ ಸಾಂತೇರುಗುತ್ತು ಎಂಬ ಕುಟುಂಬವೇ ಈ ಕಾದಂಬರಿಯ ಕೇಂದ್ರ ಪಾತ್ರವಾಗಿದೆ. ಈ ನಿಬಂಧದ ಬೇರೆ ಬೇರೆ ಅಧ್ಯಾಯಗಳು ಒಳಗೊಳ್ಳುವ ಮಾಹಿತಿಗಳು ಮತ್ತು ಅವುಗಳ ವಿಶ್ಲೇಷಣೆಯು ಅಧ್ಯಯನದ ಉದ್ದೇಶಗಳನ್ನು ಸ್ಪಷ್ಟಪಡಿಸುತ್ತವೆ. ಪ್ರಸ್ತುತ ನಿಬಂಧದ ಮೂಲ ಉದ್ದೇಶವು ಡಾ. ನಾ. ಮೊಗಸಾಲೆಯವರ 'ಉಲ್ಲಂಘನೆ' ಕಾದಂಬರಿಯಲ್ಲಿ ಬಂಟ ಜನಾಂಗದ ಮಾತೃರೂಪಿ ಸಂಸ್ಕೃತಿಯಲ್ಲಿ ಹೆಣ್ಣು ಎದುರಿಸುವ ನಾನಾ ರೀತಿಯ ಸವಾಲುಗಳನ್ನು ಶೋಧಿಸುವ ಕಾರ್ಯವಾಗಿದೆ.

ವಸಾಹತುಶಾಹಿಯ ಪ್ರಭಾವವು ನಮ್ಮಲ್ಲಿ ಒಂದು ಬಗೆಯ ಮಾನಸಿಕ ವಿಕೃತಿಯನ್ನುಂಟುಮಾಡಿದೆ. ನಮ್ಮ ನಿಜವಾದ ಸ್ಥಿತಿಯೇನು, ನಮ್ಮಲ್ಲಾಗಿರುವ ಬದಲಾವಣೆಯ ಸ್ವರೂಪವೆಂತಹುದು ಎಂಬ ಬಗ್ಗೆ ನಮ್ಮಲ್ಲಿನ್ನೂ ಗಂಭೀರವಾದ ಚರ್ಚೆ ಆಗಬೇಕಾಗಿದೆ. ಈ ಅರಿವು ಸಾಹಿತ್ಯ ಚಿಂತನೆಯ ಕ್ರಮದ ಮೇಲೂ ಪರಿಣಾಮ ಬೀರಬಲ್ಲದು. ಇದು ಗುತ್ತಿನ ಮೇಲೆ ಉಂಟುಮಾಡಿದ ಪರಿಣಾಮವು ಕೂಡಾ

ಗಮನಾರ್ಹವಾದುದು. ಇದು ಸಾಂಪ್ರದಾಯಿಕವಾದ ಗುತ್ತಿನ ಜೀವನ ವಿಧಾನದಲ್ಲಿ ವಿಶೇಷವಾದ ಬದಲಾವಣೆಯನ್ನು ತಂದೊಡ್ಡಿತು.

ನಾಲ್ಕು ತಲೆಮಾರುಗಳ ಚಿತ್ರಣ ಈ ಕಾದಂಬರಿಯಲ್ಲಿದೆ. ಹಳೆಯ ತಲೆಮಾರಿಗೂ ಹೊಸ ತಲೆಮಾರಿಗೂ ನಿರಂತರವಾಗಿ ಘರ್ಷಣೆಗಳು ನಡೆಯುತ್ತವೆ. ಹಳೆ ತಲೆಮಾರಿಗೆ ಪರಂಪರೆಯನ್ನು ಉಳಿಸಿಕೊಂಡು ಬರಬೇಕೆಂಬ ಕಾಳಜಿಯಿರುತ್ತದೆ. ಹೊಸ ತಲೆಮಾರುಗಳು ಬಾಹ್ಯ ಆಕರ್ಷಣೆಗಳಿಗೆ ಒಳಗಾಗಿ ಬದಲಾವಣೆಗಳನ್ನು ನಿರೀಕ್ಷಿಸುತ್ತಾ ಸಾಗುತ್ತವೆ. ಗುತ್ತಿನ ಸಂಪ್ರದಾಯಗಳು ಇದರಿಂದಾಗಿ ಬದಲಾವಣೆಗೆ ಒಳಗಾಗಬೇಕಾಗುತ್ತವೆ.

ಕಾದಂಬರಿಯಲ್ಲಿ ಮೊದಲಿನ ಮೂರು ತಲೆಮಾರುಗಳ ಚಿತ್ರಣದಲ್ಲಿ ಬಂಟ ಸಂಸ್ಕೃತಿಯಲ್ಲಿ ರೂಢಿಯಲ್ಲಿದ್ದ ಜೀವನಾವರ್ತನದ ಆಚರಣೆಗಳಾದ ಹುಟ್ಟು, ಮದುವೆ ಮತ್ತು ಸಾವುಗಳ ವಿಧಿ ನಿಯಮಗಳು ಎಂತಹ ಸ್ಥಾನ ಮತ್ತು ಘನತೆಯನ್ನು ಹೊಂದಿದ್ದವು ಎಂಬುದಕ್ಕೆ ಸಾಕ್ಷಿಯಾಗುವಂತೆ ವರ್ಣಿತವಾಗಿವೆ. ಇತಿಹಾಸ, ಸಮಾಜಶಾಸ್ತ್ರದ ಪರಿಕರಗಳಿಗೆ ಇಲ್ಲಿಯೇ ಮತ್ತೆ ಬಂಟ ಸಮಾಜದ ಸಾಂಸ್ಕೃತಿಕ ಆಯಾಮಗಳು ಬಂದು ಸೇರಿಕೊಳ್ಳುತ್ತವೆ. ಕಾದಂಬರಿಕಾರರ ಒಟ್ಟು ಜೀವನ ದೃಷ್ಟಿಯನ್ನು ಬಿಂಬಿಸುವಲ್ಲಿ ಅದು ಬೆಂಬಲಕ್ಕೆ ನಿಲ್ಲುತ್ತದೆ.

ಕರ್ನಾಟಕ ಸರಕಾರವು ೧೯೭೦ರ ದಶಕದಲ್ಲಿ ಜ್ಯಾರಿಗೊಳಿಸಿದ ಭೂಮಸೂದೆ ಕಾಯಿದೆಯಿಂದಾಗಿ ಜಮೀನುದಾರಿ ಹಿಡುವಳಿಯ ಗೇಣಿಒಕ್ಕಲುಗಳು ಸ್ವಂತ ಕೃಷಿ ಭೂಮಿಯನ್ನು ಪಡೆದರು. 'ದುಡಿವವನೆ ಹೊಲದೊಡೆಯ' ಎಂಬ ನಿಯಮದಂತೆ ಗುತ್ತಿನ ಒಕ್ಕಲಿನವರೆಲ್ಲಾ ಸ್ವತಂತ್ರರಾದರು. ಇದರಿಂದಾಗಿ ಗುತ್ತಿನ ಕೃಷಿ ಕಾರ್ಯಗಳಿಗೆ ಕೂಲಿಯಾಳುಗಳ ಸಮಸ್ಯೆಯು ಎದುರಾಗುತ್ತದೆ. ಇದು ಗುತ್ತಿನ ಹಿತದೃಷ್ಟಿಯಿಂದ ದೊಡ್ಡ ಸವಾಲಾಗಿ ಪರಿಣಮಿಸುತ್ತದೆ.

ಗಾಂಧಿವಾದದ ಪ್ರಭಾವ ಗುತ್ತಿನ ಮೇಲೆ ವಿಶೇಷವಾದ ಪರಿಣಾಮವನ್ನುಂಟುಮಾಡುತ್ತದೆ. ಅವರ ಸತ್ಯಾಗ್ರಹ ಅಥವಾ ಅಹಿಂಸಾತ್ಮಕ ಹೋರಾಟ, ಸ್ವದೇಶಿ ಆಂದೋಲನ, ಉತ್ಪಾದನೆ ಮತ್ತು ವಿತರಣೆ, ಸರ್ವೋದಯ, ಅಸ್ಪೃಶ್ಯತಾ ನಿವಾರಣೆ ಪರಿಕಲ್ಪನೆಗಳು ಗುತ್ತಿನ ಗಡಿಹಿಡಿಯಬೇಕಾದ ಸಂಕಪ್ಪನ ಚಿಂತನೆಗಳನ್ನೇ ಬದಲಾಯಿಸುತ್ತವೆ.

ಮುಸ್ಲಿಮರು ವ್ಯಾಪಾರ ದೃಷ್ಟಿಯಿಂದ ತುಳುನಾಡಿಗೆ ಪ್ರವೇಶಿಸಿದರು. 'ಬ್ಯಾರಿ' ಎಂದು ಕರೆಯಲ್ಪಡುವ ಇವರು ಗುತ್ತಿಗೆ ಸಮೀಪದಲ್ಲಿಯೇ ಮರದ ಮಾರಾಟ, ಕಲ್ಲುಗಳ ಮಾರಾಟ, ಬೀಡಿಯ ಮಾರಾಟದಲ್ಲಿ ತೊಡಗಿ ದೊಡ್ಡ ಕುಳಗಳಾಗಿ ಬೆಳೆಯುತ್ತಾರೆ. ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ಜನರು ಬೀಡಿ ಕಟ್ಟುವ ಕೆಲಸವನ್ನು ಆರಂಭಿಸುತ್ತಾರೆ. ಚಹಾ–ಕಾಫಿಗಳು ಹಳ್ಳಿಯ ಜನರನ್ನು ಹೆಚ್ಚು ಆಕರ್ಷಿಸುತ್ತವೆ. ಸೇಂದಿ ಕುಡಿಯುವ ಅಭ್ಯಾಸದಲ್ಲೂ ಕೆಲವರು ತೊಡಗಿಕೊಳ್ಳುತ್ತಾರೆ. ವ್ಯಾಪಾರೀಕರಣವು ತನ್ನ ಕಪಿ ಮುಷ್ಠಿಯನ್ನು ಬಲಪಡಿಸಿಕೊಳ್ಳುವುದಕ್ಕೆ ಬ್ಯಾರಿಯು ಸಂಕೇತವಾಗಿ ಮೂಡಿ ಬರುತ್ತಾನೆ.

ಮಂಗಳೂರಿನ ಸುತ್ತ ಮುತ್ತಲಿನ ಪ್ರದೇಶವು ಜಾಗತೀಕರಣದ ಭಾಗವಾದ ವಿಶೇಷ ಆರ್ಥಿಕ ವಲಯವಾಗಿ ಪರಿವರ್ತನೆಗೊಳ್ಳುವ ಮೂಲಕ ಬದಲಾವಣೆಗಳು ಕಂಡುಬರುತ್ತವೆ. ವಿಶೇಷ ಆರ್ಥಿಕ ವಲಯದಿಂದಾಗಿ ಮತ್ತು ವ್ಯಾಪಾರೀಕರಣದಿಂದಾಗಿ ಕೃಷಿಕರು ತತ್ತರಿಸುತ್ತಾರೆ. ಕಾದಂಬರಿಕಾರರು ವಿಕಾಸದ ವಿರೋಧಿಯಲ್ಲ. ತಮ್ಮ ಭೂಮಿಯನ್ನು ಪರಕೀಯರ ದಾಳಿಯಿಂದ ಉಳಿಸಿಕೊಳ್ಳಬೇಕು, ನಮ್ಮದೆನ್ನುವುದನ್ನು ಪ್ರೀತಿಸಬೇಕು ಹಾಗೂ ಕೆಡುಕಿನ ವಿರುದ್ಧ ಸಾಧ್ಯವಾದಷ್ಟು ಹೋರಾಡಬೇಕೆನ್ನುವ ಆಶಯ ಅವರದು. ಹೊಸ ಬದುಕಿನ ಸವಾಲುಗಳು ಮತ್ತು ಅದರ ಆರ್ಥಿಕ ಸಂಕೀರ್ಣತೆಗಳು ಇಂದಿನ ಲೇಖಕನ ಸಮಸ್ಯೆಗಳು. ಮೊಗಸಾಲೆಯವರು ಈ ಸಾಹಿತ್ಯಕ ವಸ್ತುವನ್ನು ನಿಭಾಯಿಸಿರುವ ರೀತಿ ಬಹಳ ವಿಶಿಷ್ಟವಾಗಿದೆ. ಪ್ರಕೃತಿ ಮತ್ತು ಮಾನವನ ಸಂಬಂಧಗಳನ್ನು ಕೇಂದ್ರದಲ್ಲಿರಿಸಿಕೊಂಡೇ ಈ ಕಾದಂಬರಿಯು ಮುಂದುವರಿಯುತ್ತದೆ.

ಬಂಟ ಸಮುದಾಯದ ವಿಶಿಷ್ಟವಾದ ಸಂಪ್ರದಾಯದ ವಿವರಗಳು ಕಾದಂಬರಿಯುದ್ದಕ್ಕೂ ಮೂಡಿಬರುತ್ತವೆ. ಹುಟ್ಟು, ಮದುವೆ, ಸಾವು, 'ಗಡಿಹಿಡಿದು' ಅಧಿಕಾರ ವಹಿಸಿಕೊಳ್ಳುವ ಕಾರ್ಯಕ್ರಮ, ನಾಗನ ಪೂಜೆ, ದೈವವನ್ನು ಪಾತ್ರಿಯ ಮೇಲೆ ಬರುವಂತೆ ಮಾಡುವ ಕಾರ್ಯಕ್ರಮಗಳು ಮನೆತನದ ದೈವ ದೇವತೆಯಾದ 'ಜುಮಾದಿ' ಶಕ್ತಿಗೆ ಕಾಣಿಕೆಗಳನ್ನರ್ಪಿಸುವ ರೀತಿ, ಕಾರಣಿಕಗಳು ಹೀಗೆ ವಿವಿಧ ವಿಚಾರಗಳು ಕಾದಂಬರಿಯಲ್ಲಿ ಕಾಣಸಿಗುತ್ತವೆ.

ಮಾತೃರೂಪಿ ಸಂಸ್ಕೃತಿಯಲ್ಲಿ ಸ್ತ್ರೀಯು ಮುಂಚೂಣಿಯಲ್ಲಿ ಕಾಣಿಸಿಕೊಳ್ಳುತ್ತಾಳೆ. ಅದರಂತೆ ಸಾಂತೇರುಗುತ್ತು ಮನೆತನದ ದೈವಶಕ್ತಿ 'ಜುಮಾದಿ' ಕೂಡಾ ಒಂದು ಸ್ತ್ರೀ ದೈವವೇ ಆಗಿದೆ. ಜೀವನಾವರ್ತದಲ್ಲಿ ಕಂಡು ಬರುವ ಯಾವುದೇ ಸಮಸ್ಯೆಗಳಿಗೆ ಭೂತವನ್ನು ಆರಾಧಿಸುವ ಮೂಲಕ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಎಲ್ಲಾ ಭಾರವನ್ನು 'ಜುಮಾದಿ'ಯ ಮೇಲೆ ಹಾಕಿ ಕಾಲ ಕಾಲಗಳ ಬದಲಾವಣೆಗಳಿಗೆ ಒಗ್ಗಿಕೊಳ್ಳುವುದು ಕಾದಂಬರಿಯ ವೈಶಿಷ್ಟ್ಯವಾಗಿದೆ.

'ಉಲ್ಲಂಘನೆ' ಕಾದಂಬರಿಯು ಬಂಟ ಸಂಸ್ಕೃತಿಯನ್ನು ಮುಖ್ಯವಾಗಿಟ್ಟುಕೊಂಡು ಬರೆದ ಕಾದಂಬರಿಯಾದರೂ ಇಲ್ಲಿ ಆ ಸಂಸ್ಕೃತಿಯೊಂದೇ ಮುಖ್ಯವಾಗದೆ ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ನಾನಾ ಜನಾಂಗಗಳ ಸಂಸ್ಕೃತಿಯೂ ಒಡಮೂಡಿದೆ. ಹಿಂದಿನ ಕಾಲದ ಹಚ್ಚ ಹಸಿರು ಬರಡಾದಾಗ ಹಳೆಯ ಮೌಲ್ಯಗಳು ನಶಿಸಿಹೋಗುವುದರ ಬಗ್ಗೆ ಮೊಗಸಾಲೆಯವರಿಗೆ ತುಂಬಾ ಚಿಂತೆ ಇದೆ. ಪರಿಸರದ ಕುರಿತು ಅಪಾರ ಕಾಳಜಿ ಇದೆ. ಜೀವನ ಮೌಲ್ಯಗಳನ್ನೂ ನಮ್ಮ ಸಂಸ್ಕೃತಿಯನ್ನೂ ಉಳಿಸಿಕೊಂಡು ಅಭಿವೃದ್ಧಿಪರವಾದ ಬದಲಾವಣೆಗಳನ್ನು ಅವರು ನಿರೀಕ್ಷಿಸುತ್ತಾರೆ.

ಕಾದಂಬರಿಯ ಪ್ರಮುಖ ಪಾತ್ರವಾದ ಅಂಬಕ್ಕೆಯು ತನ್ನ ಮನೆತನದ ಗೌರವವನ್ನು, ಪ್ರತಿಷ್ಠೆಯನ್ನು ಹೇಗೆ ಉಳಿಸಿಕೊಳ್ಳುತ್ತಾಳೆ ಎಂಬುದನ್ನು ವಿಶದಪಡಿಸುವುದು, ಜೊತೆಗೆ ಕಾದಂಬರಿಯ ಬೇರೆ ಬೇರೆ ಸ್ತ್ರೀ ಪಾತ್ರಗಳು ಯಾವ ರೀತಿಯ ಸವಾಲುಗಳನ್ನು ಎದುರಿಸುತ್ತಾ ಬದಲಾವಣೆಗೆ ಸ್ಪಂದಿಸುತ್ತವೆ ಎಂಬ ವಿವೇಚನೆಯೇ ಈ ನಿಬಂಧದ ಮುಖ್ಯ ಉದ್ದೇಶ.

೧.೨ ಅಧ್ಯಯನದ ವ್ಯಾಪ್ತಿ:

ಡಾ. ನಾ. ಮೊಗಸಾಲೆಯವರ 'ಉಲ್ಲಂಘನೆ' ಕಾದಂಬರಿಯನ್ನು ಇಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ತುಳುನಾಡಿನಲ್ಲಿ ವಾಸ್ತವ್ಯವಿರುವ ಬೇರೆ ಬೇರೆ ಜನಾಂಗಗಳ ಸಾಂಸ್ಕೃತಿಕ ವಿವರಗಳನ್ನು ಈ ಕಾದಂಬರಿ ಒಳಗೊಂಡಿದೆ. ಈ ಕಾದಂಬರಿಯ ಅಧ್ಯಯನವೆಂದರೆ ಒಂದು ರೀತಿಯಲ್ಲಿ ಬಂಟ ಜನಾಂಗದ

ಅಧ್ಯಯನವೇ ಸರಿ. ತುಳುನಾಡಿನ ಅಥವಾ ಅಖಂಡ ದಕ್ಷಿಣ ಕನ್ನಡದ ಪ್ರಬಲ ಸಮುದಾಯವೊಂದನ್ನು 'ಬಂಟರು' ಎಂಬುದಾಗಿ ಗುರುತಿಸುತ್ತಾರೆ. ಆಳುವ ಅರಸರಾಗಿ, ಪಾಳೆಯಗಾರರಾಗಿ, ಗುತ್ತುಗಳ ಅಧಿಕಾರಸ್ಥರಾಗಿ ಇವರು ಗ್ರಾಮೀಣ ಹಂತದಿಂದಲೇ ಆಡಳಿತದ ಹೊಣೆಗಾರಿಕೆಯನ್ನು ಹೊಂದಿದ್ದವರು. ಸ್ಥಳೀಯ ವರ್ಗಗಳ ಮೇಲೆ ಇವರ ಹಿಡಿತ ಬಲವಾಗಿತ್ತು. ತುಳುನಾಡಿನ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ ಹಾಗೂ ಆರಾಧನಾ ಕ್ಷೇತ್ರಗಳು ಇವರ ಅಂಕೆಯಲ್ಲಿ ಇದ್ದವು. ಭೂಮಸೂದೆ ಕಾಯಿದೆ ಜ್ಯಾರಿಗೆ ಬರುವವರೆಗೂ ಅವರ ಏಕಸ್ವಾಮ್ಯತೆ ಮುಂದುವರಿದಿತ್ತು ಎಂದರೆ ತಪ್ಪಾಗಲಾರದು. ನಗರೀಕರಣ, ಕೈಗಾರಕೀರಣದ ಜೊತೆಗೆ ಭೂಮಸೂದೆಯು ಇವರ ಜೀವನ ಕ್ರಮದಲ್ಲಿ ಮಹತ್ವದ ಬದಲಾವಣೆಯನ್ನುಂಟುಮಾಡಿತು. ಸರಕಾರದ ಕಾನೂನುಗಳು ಇವರ ಹಿಡಿತವನ್ನು ಸಡಿಲಿಸಿತು. ಇದಕ್ಕೆ ಪರ್ಯಾಯವಾದ ನೆಲೆಯನ್ನು ಹುಡುಕಿದ ಬಂಟರ ಜೀವನಾವರ್ತನದಲ್ಲಿ ಬದಲಾವಣೆ ಉಂಟಾಯಿತು. ನಗರ ಸಂಸ್ಕೃತಿಗೆ ಹೊಂದಿಕೊಂಡ ಬಂಟರು ತಮ್ಮ ಪಾರಂಪರಿಕ ಸಂಸ್ಕೃತಿಯಲ್ಲಿ ಬದಲಾವಣೆಯನ್ನು ಮಾಡಿಕೊಂಡರು.

ಹೀಗೆ ನಶಿಸುತ್ತಿರುವ ಬಂಟ ಜನಾಂಗದ ಸಂಸ್ಕೃತಿಯನ್ನು ದಾಖಲಿಸುವ ಹಲವಾರು ಲೇಖನಗಳು ಸಂಶೋಧನ ಕೃತಿಗಳು, ಕಾದಂಬರಿಗಳು ಹುಟ್ಟಿಕೊಂಡವು. ಈ ನಿಟ್ಟಿನಲ್ಲಿ ಇಂದಿರಾ ಹೆಗ್ಗಡೆಯವರ 'ಬಂಟರು ಒಂದು ಸಮಾಜೋ–ಸಾಂಸ್ಕೃತಿಕ ಅಧ್ಯಯನ' ಎಂಬ ಸಂಶೋಧನ ಗ್ರಂಥವು ಗುರುತಿಸುವಂತಹ ಶ್ರೇಷ್ಠ ಕೃತಿ. ಶಿವರಾಮ ಶೆಟ್ಟಿಯವರು 'ಬಂಟರ ಮೂಲ' ಎಂಬ ಕೃತಿಯನ್ನು ೧೯೯೭ರಲ್ಲಿ ಹೊರ ತಂದಿದ್ದಾರೆ. ಪುಣೆ ವಿಶ್ವವಿದ್ಯಾಲಯದ ಹೀರಾ ಅಡ್ಯಂತಾಯರು 'Rural Immigrants in an Urban Setting' ಎಂಬ ಕೃತಿಗೆ ಪಿ.ಹೆಚ್‌ಡಿ. ಪದವಿ ಗಳಿಸಿದ್ದಾರೆ. ಪೀಟರ್ ಜೆ. ಕ್ಲಾಸ್ ಅವರು ಅಮೇರಿಕಾದ ವಿಶ್ವವಿದ್ಯಾಲಯದಿಂದ 'ಬಂಟ ನಾಡವರ ಜಾತಿ ಸಂಕೀರ್ಣ ವ್ಯವಸ್ಥೆ' ಎಂಬ ವಿಷಯದಲ್ಲಿ ಪಿ.ಹೆಚ್‌ಡಿ. ಪದವಿ ಪಡೆದಿದ್ದಾರೆ. ತುಳುವಿನ ಪ್ರಥಮ ಕಾದಂಬರಿ ಎಂಬ ಹೆಗ್ಗಳಿಕೆಗೆ ಪಾತ್ರವಾದ ಶೀನಪ್ಪ ಹೆಗ್ಗಡೆಯವರ 'ಮಿಥ್ಯನಾರಾಯಣ ಕಥೆ'ಯಲ್ಲಿ ಅಂದಿನ ತುಳುನಾಡಿನ, ಅದರಲ್ಲೂ ಬಂಟರ ಕೂಡುಕುಟುಂಬದ ಜೀವನ ಚಿತ್ರಣವಿದೆ. ಇವುಗಳಲ್ಲದೆ ಬೋಳ

ಚಿತ್ತರಂಜನ್‌ದಾಸ್ ಶೆಟ್ಟಿ, ಆನಂದ ಕೃಷ್ಣ, ಹೆಚ್. ನಾಗವೇಣಿ ಮುಂತಾದವರ ಕತೆ-ಕಾದಂಬರಿಗಳಲ್ಲಿ ಬಂಟರ ಜೀವನ ಕ್ರಮದ ಮೇಲ್ನೋಟ ಕಾಣಬರುತ್ತವೆ. ಇತ್ತೀಚೆಗೆ ಡಿ.ಕೆ. ಚೌಟ (ಆನಂದಕೃಷ್ಣ) ಅವರು ತುಳುವಿನಲ್ಲಿ ಬರೆದ 'ಮಿತ್ತಬೈಲ್ ಯಮುನಕ್ಕೆ: ಒಂಜಿ ಗುತ್ತುದ ಕತೆ' ಎಂಬುದು ಬಂಟ ಜನಾಂಗದ ವಿಭಿನ್ನ ಸಂಸ್ಕೃತಿಯನ್ನು ಹೇಳುವ ಬಹಳ ಮುಖ್ಯವೂ ಮಹತ್ವವೂ ಆದ ಕಾದಂಬರಿಯಾಗಿದೆ.

ಮೊಗಸಾಲೆಯವರು ೨೦೦೮ರಲ್ಲಿ ಬರೆದ 'ಉಲ್ಲಂಘನೆ' ಕಾದಂಬರಿಯೂ ದಕ್ಷಿಣ ಕನ್ನಡ ಬಂಟ ಸಮುದಾಯದ ಐತಿಹಾಸಿಕ, ಸಾಂಸ್ಕೃತಿಕ, ಸಾಮಾಜಿಕ ವಿಚಾರಗಳನ್ನೊಳಗೊಂಡ ಒಂದು ಶ್ರೇಷ್ಠವಾದ ಬೃಹತ್ ಕಾದಂಬರಿ. ಈ ಕಾದಂಬರಿಯ ಕುರಿತಾಗಿ ಈವರೆಗೆ ಯಾರೊಬ್ಬರೂ ವಿಸ್ತಾರವಾದ ಅಧ್ಯಯನವನ್ನು ಮಾಡಿಲ್ಲ. ಬಿ. ಜನಾರ್ದನ ಭಟ್ ಮತ್ತು ಜಿ. ಎಂ. ಹೆಗಡೆಯವರು ಈ ಕೃತಿಯ ಬಗ್ಗೆ ಪರಿಚಯಾತ್ಮಕ ನೆಲೆಯ ಬಿಡಿ ಲೇಖನಗಳನ್ನು ಮಾತ್ರ ಬರೆದು ಪ್ರಕಟಿಸಿದ್ದಾರೆ. ಮಾಧವ ಕುಲಕರ್ಣಿಯವರು ಈ ಕಾದಂಬರಿಗೆ ತುಂಬಾ ವಿಸ್ತೃತ, ವಿಮರ್ಶಾತ್ಮಕ ಮುನ್ನುಡಿಯನ್ನು ಬರೆದಿದ್ದಾರೆ.

ದಿನಾಂಕ ೨೧.೦೬.೨೦೦೯ರಂದು ಈ ಕಾದಂಬರಿಯ ಕುರಿತು ಧಾರವಾಡದ ಕನ್ನಡ ಭವನದಲ್ಲಿ ವಿಚಾರ ಸಂಕಿರಣವೊಂದು ನಡೆದಿತ್ತು. ಸಿದ್ದಲಿಂಗ ಪಟ್ಟಣಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮಾಧವ ಕುಲಕರ್ಣಿಯವರು ಮುಖ್ಯ ಅತಿಥಿ ಸ್ಥಾನದಿಂದ ಕಾದಂಬರಿಯ ಕುರಿತಾಗಿ ವಿಸ್ತೃತ ವಿಮರ್ಶಾ ಭಾಷಣ ನೀಡಿದ್ದರು.

ಈ ಕಾದಂಬರಿಯಲ್ಲಿ ಬಂಟ ಜನಾಂಗದ ಕುರಿತಾಗಿ ಮಾತ್ರವಲ್ಲ ದಕ್ಷಿಣ ಕನ್ನಡ ಜಿಲ್ಲೆಯ ಬೇರೆ ಬೇರೆ ಜಾತಿಗಳ ಜನರ ಬದುಕಿನಲ್ಲಿ ಸರಕಾರದ ಕಾನೂನುಗಳು ಮತ್ತು ಆಧುನಿಕತೆಯ ಪ್ರವೇಶದಿಂದ ಉಂಟಾದ ಬದಲಾವಣೆಯ ಚಿತ್ರಣವಿದೆ. ಈ ನಿಬಂಧದಲ್ಲಿ ಕಾದಂಬರಿಯಲ್ಲಿ ಕಂಡುಬರುವ ಬಂಟ ಜನಾಂಗದ ಮಾತೃರೂಪಿ ಸಂಸ್ಕೃತಿಯ ಸ್ತ್ರೀ ಕೇಂದ್ರಿತ ಸವಾಲುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಆರು ಅಧ್ಯಾಯಗಳ ಮೂಲಕ ಕಾದಂಬರಿಯನ್ನು ಅರ್ಥೈಸಿಕೊಳ್ಳುವ, ಭೂತ ಮತ್ತು ವರ್ತಮಾನಗಳನ್ನು ಒಂದಕ್ಕೊಂದು

ಮುಖಾಮುಖಿಗೊಳಿಸುವ ಪ್ರಯತ್ನ ಮಾಡಲಾಗಿದೆ. ಕಾಲಚಕ್ರದೊಂದಿಗೆ ಒಂಬತ್ತುಕೆರೆಯ ಸಾಂತೇರುಗುತ್ತು ಹೆಜ್ಜೆಗಳನ್ನಿಡುತ್ತಾ ಹೋಗುವ ಸಂದರ್ಭಗಳಲ್ಲಿ ಎದುರಾದ ವೈರುಧ್ಯಗಳನ್ನು ನಿಭಾಯಿಸಿಕೊಂಡು ಹೋದ ಪರಿಯನ್ನು ವಿಶ್ಲೇಷಿಸುವ ಜೊತೆಗೆ ಮಾತೃರೂಪಿ ಸಂಸ್ಕೃತಿಯನ್ನು ಉಳಿಸುವ ಧ್ಯೇಯ ಮತ್ತು ಶಕ್ತಿ ಸ್ತ್ರೀ ಶಕ್ತಿಯಾಗಿದೆ ಎಂಬುದನ್ನು ಕೂಡಾ ಇಲ್ಲಿ ಪರಿಭಾವಿಸಲಾಗಿದೆ.

೧.೩ ಸ್ತ್ರೀವಾದಿ ಅಧ್ಯಯನ:

ಸುಮಾರು ಮೂರು ದಶಕಗಳಿಂದೀಚೆಗೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಸ್ತ್ರೀವಾದಿ ಪರಿಕಲ್ಪನೆ ಬೆಳೆದು ಬರುತ್ತಿದೆ. ಸಾಹಿತ್ಯ ವಿಮರ್ಶಾ ವಿಧಾನವಾಗಿ ಸ್ತ್ರೀವಾದಿ ವಿಮರ್ಶೆ ತನ್ನದೇ ಆದ ಸ್ಪಷ್ಟ ಕವಲುದಾರಿಯನ್ನು ನಿರ್ಮಾಣ ಮಾಡುವಂತಹ ಗಂಭೀರ ಚಿಂತನೆ ನಡೆದಿದೆ.

ಮಹಿಳಾ ಸ್ವಾತಂತ್ರ್ಯವನ್ನು ಅಮೇರಿಕಾದ ಪ್ರಖ್ಯಾತ ಮಹಿಳಾ ವಿಮೋಚನಾವಾದಿ ಮಾರ್ಗರೆಟ್ ಫುಲರ್ "ಮಹಿಳೆಗೆ ಬೇಕಾಗಿರುವುದು ಸ್ವೇಚ್ಛೆಯಲ್ಲ, ಆಳುವ ಅಧಿಕಾರವಲ್ಲ. ಆಕೆಗೆ ಅವಶ್ಯವಿರುವುದು ಸಹಜವಾಗಿ ಬೆಳೆಯುವ ಅವಕಾಶ. ಸ್ವಂತದ ಬುದ್ಧಿಯನ್ನು ಉಪಯೋಗಿಸುವ ಅವಕಾಶ; ಒತ್ತಡ ದಬ್ಬಾಳಿಕೆಗಳಿಂದ ಮುಕ್ತವಾದ ಬದುಕನ್ನು ಹೊಂದುವ ಅವಕಾಶ" ಎಂದು ವ್ಯಾಖ್ಯಾನಿಸಿದಳು. (ನರಹಳ್ಳಿ ಬಾಲಸುಬ್ರಹ್ಮಣ್ಯ, ೧೯೯೮, ಪುಟ ೨೩). ಈ ವ್ಯಾಖ್ಯಾನ ಇಂದು ಒಂದು ಪ್ರಮುಖ ಚಳುವಳಿಯಾಗಿ ಜಗತ್ತಿನಾದ್ಯಂತ ಎಲ್ಲರ ಗಮನ ಸೆಳೆಯುತ್ತಿದೆ. ಮಹಿಳಾ ಪ್ರಜ್ಞೆ (Women's Consciousness) ಸಮಗ್ರತೆಗಾಗಿ ಹುಡುಕಾಟ (The Search for Wholeness), ಆಧುನಿಕ ಮಹಿಳೆ (The New Woman), ದುಃಖಾಭಿವ್ಯಕ್ತಿ (Speak in Bitterness), ಸ್ತ್ರೀತ್ವ (Feminism) ಮೊದಲಾದ ಪರಿಕಲ್ಪನೆಗಳ ಮೂಲಕ ಚರ್ಚೆ ವಾಗ್ವಾದಗಳು ನಡೆದು ಸಂಸ್ಕೃತಿ, ಇತಿಹಾಸ, ರಾಜಕಾರಣ ಇವುಗಳ ಹಿನ್ನೆಲೆಯಲ್ಲಿ ಮಹಿಳೆಯನ್ನು ವ್ಯಾಖ್ಯಾನಿಸುವ ಅರ್ಥಪೂರ್ಣ ಪ್ರಯತ್ನ ನಡೆಯುತ್ತಿದೆ.

೧೮ನೆಯ ಶತಮಾನದ ವೇಳೆಗೆ ಇಂದು ನಾವು ಸ್ತ್ರೀವಾದಿ ವಿಮರ್ಶೆಯೆಂದು ಕರೆಯಬಹುದಾದ ವಿಮರ್ಶಾ ಪದ್ಧತಿಯನ್ನು 'Vindication of the Rights of

Woman' ಎಂಬ ಪುಸ್ತಕವನ್ನು ಬರೆದ ಮೇರಿ ವೊಲ್‌ಸ್ಟೋನ್ ಕ್ರಾಫ್ಟ್ ಬಳಸುತ್ತಿದ್ದಳು. ಮಹಿಳಾ ಓದುಗರು ತಮ್ಮನ್ನು ತಾವು ಕ್ಷುಲ್ಲಕ, ಅಸಹಾಯಕ ಎಂದು ನಂಬುವಂತಹ ಸ್ತ್ರೀ ಚಿತ್ರಣಗಳನ್ನು ನೀಡುವ ಜನಪ್ರಿಯ 'ಭಾವುಕ' ಕಾದಂಬರಿಗಳನ್ನು ಆಕೆ ಕಟುವಾಗಿ ವಿಮರ್ಶಿಸಿದಳು. ಈ ಶತಮಾನದಲ್ಲಿ ಈ ಚರ್ಚೆ ವರ್ಜಿನಿಯಾ ವೂಲ್ಫ್ ಮತ್ತು ಸಿಮೊನ್ ದ ಬುವಾ ಅವರಲ್ಲಿ ಪ್ರಖರವಾಗಿ ಕಾಣಿಸಿಕೊಂಡಿತು.

"ಕಾಲ್ಪನಿಕವಾಗಿ ಮಹಿಳೆಗೆ ಅತ್ಯಂತ ಮಹತ್ವದ ಸ್ಥಾನವಿದೆ. ಆದರೆ ವಾಸ್ತವಿಕವಾಗಿ ಅವಳು ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟಿದ್ದಾಳೆ. ಕಾವ್ಯದಲ್ಲಿ ಮೊದಲಿನಿಂದ ಕಡೆಯವರೆಗೂ ಅವಳೇ ವ್ಯಾಪಿಸಿರುತ್ತಾಳೆ. ಆದರೆ ಚರಿತ್ರೆಯಿಂದ ಮಾತ್ರ ಗೈರುಹಾಜರಾಗಿರುತ್ತಾಳೆ. ಕಾಲ್ಪನಿಕ ಬರೆಹಗಳಲ್ಲಿ ಆಕೆ ರಾಜ ಮಹಾರಾಜರನ್ನು, ವಿಜಯಿಗಳನ್ನು ಆಳುತ್ತಿರುತ್ತಾಳೆ. ನಿಜ ಜೀವನದಲ್ಲಿ ತನ್ನ ತಂದೆ ತಾಯಿಗಳ ಬಲವಂತಕ್ಕೆ ಅವಳ ಬೆರಳಿಗೆ ಉಂಗುರ ತೊಡಿಸಿದ ಯಾವುದೇ ಹುಡುಗನ ಆಳಾಗಿದ್ದಾಳೆ. ಸಾಹಿತ್ಯದಲ್ಲಿನ ಕೆಲವು ಪಾತ್ರಗಳಲ್ಲಿ ಅತ್ಯಂತ ಸ್ಫೂರ್ತಿದಾಯಕ ಶಬ್ದಗಳನ್ನು ಗಾಢ ಚಿಂತನೆಗಳನ್ನು ಆಡುವ ಆಕೆ ನಿಜ ಜೀವನದಲ್ಲಿ ಓದಲಾರದ, ಮಾತು ಬಾರದ ಮೂಢೆಯಾಗಿದ್ದಾಳೆ. ಕೇವಲ ತನ್ನ ಗಂಡನ ಆಸ್ತಿಯಾಗಿದ್ದಾಳೆ". (ನರಹಳ್ಳಿ ಬಾಲಸುಬ್ರಹ್ಮಣ್ಯ, ೧೯೯೮, ಪುಟ ೨೪).

೧೯೨೯ರ ವೇಳೆಗೆ ಪ್ರಕಟವಾದ "A Room of One's Own" ಕೃತಿಯಲ್ಲಿ ವೂಲ್ಫ್ ಮಹಿಳೆಯ ಬಗ್ಗೆ ಅನೇಕ ಕಟು ಸತ್ಯಗಳನ್ನು ದಿಟ್ಟವಾಗಿ ಹೇಳುತ್ತಾಳೆ. ಸ್ತ್ರೀವಾದಿ ಚಳುವಳಿಯಲ್ಲಿ ಇಂತಹುದೇ ಇನ್ನೊಂದು ಮಹತ್ವದ ಕೃತಿ ೧೯೪೯ರಲ್ಲಿ ಪ್ರಕಟವಾದ ಸಿಮೋನ್ ದ ಬುವಾಳ "The Second Sex". ಆಕೆಯ ಪ್ರಕಾರ "ಸ್ತ್ರೀಯು ಮೂಲತಃ ರೂಪಿಸಲ್ಪಟ್ಟವಳು. ಹೆಣ್ಣು ನಿರ್ದಿಷ್ಟ ಸಾಮಾಜಿಕ ಪ್ರಕ್ರಿಯೆಗಳಿಂದ 'ಆಗುತ್ತಾಳೆ'ಯೇ ವಿನಹ ಯಾರೂ 'ಹೆಣ್ಣಾಗಿ'ಯೇ ಹುಟ್ಟುವುದಿಲ್ಲ. ಸ್ತ್ರೀತ್ವವನ್ನು ಅವಳಿಗೆ ಕೊಡಲಾಗುತ್ತದೆ". (ನರಹಳ್ಳಿ ಬಾಲಸುಬ್ರಹ್ಮಣ್ಯ, ೧೯೯೮, ಪುಟ ೨೪). ಈ ಬಗೆಯ ಚಿಂತನೆ ಲಿಂಗಪ್ರಭೇದ ಮತದ ಪ್ರಭಾವಶಾಲಿ ಅಧಿಕಾರ ಶಕ್ತಿಯನ್ನು ಪ್ರಶ್ನಿಸುವ ನೈತಿಕ ಧೀಮಂತಿಕೆಯನ್ನು ಹೆಣ್ಣಿಗೆ ನೀಡಿತು. ನಂತರದಲ್ಲಿ

ಆಲಿಸನ್ ಜಾಗರ್ (Feminist Politics and Human Nature (1983), ಜರ್ಮೇನ್ ಗ್ರಿಯಲ್ (The Female Eunuch), ಕೇಟ್ ಮಿಲ್ಲೆಟ್ (Sexual Politics), ಇವಾ ಫಿಜಸ್ (Patriarchal Attitudes) ಮೊದಲಾದವರು ಈ ವಾಗ್ವಾದವನ್ನು ಬೆಳೆಸಿದವರಲ್ಲಿ ಪ್ರಮುಖರು.

ಭಾರತೀಯ ಮಹಿಳಾ ಸಾಹಿತ್ಯದಲ್ಲಿ 'ಆಧುನಿಕ ಮಹಿಳೆ' (The New Woman)ಯ ಪರಿಕಲ್ಪನೆ, ಸಂವೇದನೆ ಅಮೃತಾ ಪ್ರೀತಮ್, ಕಮಲಾದಾಸ್, ಶಶಿ ದೇಶಪಾಂಡೆ ಮೊದಲಾದವರಲ್ಲಿ ಮೊದಲಿಗೆ ಕಾಣಿಸಿಕೊಂಡಿತು. ಇವರ ಬರವಣಿಗೆಗಳಲ್ಲಿ ಆತ್ಮ ವಿಶ್ಲೇಷಣೆಗಿಂತ ತಾವು ಜಾಗೃತರೆಂದು ತೋರಿಸಿಕೊಳ್ಳುವ ಎಚ್ಚರ ಪ್ರಜ್ಞಾಪೂರ್ವಕ ಕೆಲಸ ಮಾಡಿದೆ ಎನ್ನಿಸಿದರೂ ಮುಕ್ತ ಮನೋಭಾವದ ನಿಸ್ಸಂಕೋಚ ಅಭಿವ್ಯಕ್ತಿ ಅವರ ವೈಶಿಷ್ಟ್ಯವಾಗಿದೆ.

ಪಶ್ಚಿಮದ ಪ್ರಭಾವವನ್ನು ಭಾರತದ ರಾಷ್ಟ್ರೀಯವಾದಿ ರಾಜಕಾರಣ ಮೇಲ್ನೋಟಕ್ಕೆ ವಿರೋಧಿಸಿದರೂ ಒಂದು ರೀತಿಯ ರಾಜೀಸೂತ್ರವನ್ನು ಅದು ಅನುಸರಿಸಿತು. ಜೀವನದ ಭೌತಿಕ ಅಗತ್ಯಗಳಲ್ಲಿ ಪಾಶ್ಚಿಮಾತ್ಯ ನಾಗರಿಕತೆಯ ಆಧುನಿಕತೆಗಳನ್ನು ಅಳವಡಿಸಿಕೊಂಡು, ಅಧ್ಯಾತ್ಮಿಕ ನೆಲೆಯಲ್ಲಿ ಭಾರತೀಯತೆಯ ಅನನ್ಯತೆಯನ್ನು ಕಾಯ್ದುಕೊಳ್ಳುವ ಹೊಂದಾಣಿಕೆಯ ಸೂತ್ರವನ್ನು ಕಂಡುಕೊಂಡಿತು. ಪರಿಣಾಮವಾಗಿ ಭೌತಿಕ-ಅಧ್ಯಾತ್ಮಿಕ ಪರಿಕಲ್ಪನೆ ಹೊರಗೆ-ಒಳಗೆ ಎಂದು ವಿಭಜಿತವಾಗಿ ಸರಳ ಪರಿಹಾರ ಕಂಡುಕೊಂಡಿತು. ಭೌತಿಕ ಕ್ಷೇತ್ರ ಮನುಷ್ಯನ ಹೊರಜಗತ್ತಿಗೆ ಸಂಬಂಧಿಸಿದ್ದು. ನಮ್ಮನ್ನು ಪ್ರಭಾವಿಸುವ, ರೂಪಿಸುವ ಕೆಲವೊಮ್ಮೆ ನಾವು ಹೊಂದಿಕೊಳ್ಳಲೂಬೇಕಾಗಿ ಬರುವ ಬಾಹ್ಯ ಸಂಗತಿ ಅದು. ಆದರೆ ಬದುಕಿನಲ್ಲಿ ಬಹಳ ಮುಖ್ಯವಾದುದು ನಮ್ಮ ಒಳಗು, ಒಳಗಿನ ಅಧ್ಯಾತ್ಮಿಕತೆ. ಇಲ್ಲಿ ನಾವು ಪ್ರಭಾವಗಳಿಗೆ ಒಳಗಾಗದೆ ನಮ್ಮ ಅನನ್ಯತೆ ಕಾಯ್ದುಕೊಳ್ಳಬೇಕು. ಹೀಗೆ ಒಳಗೆ ಬದಲಾಗದೆ ಹೊರಗೆ ಹೊಂದಾಣಿಕೆ ಮಾಡಿಕೊಳ್ಳಬಹುದೆನ್ನುವ ಪರಿಕಲ್ಪನೆ ಕೊನೆಗೆ ಮನೆ-ಹೊರಗೆ ಎಂಬ ರೂಪ ತಾಳಿ ಮನೆ ಸ್ತ್ರೀ ಪ್ರತಿನಿಧಿಸುವ ಕ್ಷೇತ್ರವೆಂದೂ, ಹೊರಗೆ ಎಂಬುದು ಪುರುಷನ ಜಗತ್ತೆಂದೂ ವಿಭಜಿತವಾಯಿತು. ಹೀಗಾಗಿ ಹೊರಗಿನ ಅಂದರೆ ಗಂಡಿನ ಜಗತ್ತಿನಲ್ಲಿ ಆಧುನಿಕತೆಯ ಬದಲಾವಣೆಗಳು

ಆಗಬಹುದು ಎಂಬ ನಂಬಿಕೆ ರೂಢಿಗೆ ಬಂದಿತು. ಗೃಹವೇ ನಮ್ಮ ರಾಷ್ಟ್ರೀಯ ಸಂಸ್ಕೃತಿಯ ಮುಖ್ಯ ನೆಲೆ. ಇದನ್ನು ಉಳಿಸಿಕೊಳ್ಳಬೇಕಾದವರು ಗೃಹಿಣಿಯರು.ಹೀಗಾಗಿ ಇವರು ಪಾಶ್ಚಾತ್ಯೀಕರಣಕ್ಕೆ ಅಥವಾ ಆಧುನಿಕ ಪ್ರಭಾವಕ್ಕೆ ಒಳಗಾಗಬಾರದು, ಹಾಗೆಯೇ ಉಳಿಯಬೇಕು ಎಂಬ ನಿಲುವು ಪ್ರಧಾನವಾಗಿ, - ಸ್ತ್ರೀವಾದಿ ಚಳುವಳಿ ಸಹಜವಾಗಿ ಹಿನ್ನಡೆ ಪಡೆಯಿತು. ಇಂದಿಗೂ ಈ ಬಗ್ಗೆ ಸಾಕಷ್ಟು ವಾದ ವಿವಾದಗಳು ನಡೆಯುತ್ತಿದ್ದರೂ ಮಹಿಳೆಯಲ್ಲಾಗುವ ಆಧುನಿಕ ಬದಲಾವಣೆಗಳನ್ನು ನಮ್ಮ ಸಮಾಜ ಮುಕ್ತವಾಗಿ ಸ್ವೀಕರಿಸುವುದಿಲ್ಲವೆಂಬುದನ್ನು ನಾವು ಗಮನಿಸಬೇಕು. ಮದುವೆಯಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ಈ ಸಂಗತಿ ಮತ್ತಷ್ಟು ಸ್ಪಷ್ಟವಾಗಿ ನಮ್ಮ ಅನುಭವಕ್ಕೆ ಬರುತ್ತದೆ.

ಆಧುನೀಕರಣದ ಪ್ರಕ್ರಿಯೆಗೆ ನಮ್ಮ ಪುರುಷರು ಸ್ಪಂದಿಸಿರುವ ಬಗೆಗಳನ್ನು ನೋಡಿದರೆ ಹೊಸತನ ಆವಿಷ್ಕಾರಗಳೆಲ್ಲಕ್ಕೂ ಪುರುಷರು ಪ್ರತಿನಿಧಿಗಳಾಗಿದ್ದರೆ, ಹಳೆಯ, ಸಾಂಸ್ಕೃತಿಕ ಮೌಲ್ಯಗಳ ಗಟ್ಟಿತನಕ್ಕೆ ಸ್ತ್ರೀಯರು ಪ್ರತೀಕಗಳಾಗಿರುವುದನ್ನು ಗುರುತಿಸಬಹುದು. ಆಧುನಿಕ ಮಹಿಳಾ ಬರಹಗಾರರು ಸಾಂಪ್ರದಾಯಿಕ, ಸಾಂಸ್ಕೃತಿಕ ಮೌಲ್ಯಕ್ಕೆ ಪ್ರತೀಕವಾಗುವ ಸ್ತ್ರೀ ಮಾದರಿಗಳಿಗೆ ಬದಲಾಗಿ ಕುಟುಂಬ, ದಾಂಪತ್ಯ, ವಿವಾಹ, ಸಾಮಾಜಿಕ ಮೌಲ್ಯ, ಮಾನವೀಯ ಸಂಬಂಧಗಳು ವಿಚ್ಛಿದ್ರವಾಗುತ್ತಿರುವ ಸ್ಥಿತ್ಯಂತರ ಕಾಲದ ಸ್ತ್ರೀ ಪ್ರತೀಕಗಳನ್ನು ಹೆಚ್ಚಾಗಿ ಸೃಷ್ಟಿಸುತ್ತಿದ್ದಾರೆ ಎಂಬ ಸೂಕ್ಷ್ಮ ನೋಟವನ್ನು ಸ್ತ್ರೀವಾದಿ ಅಧ್ಯಯನ, ವಿಮರ್ಶೆ ವಿಶ್ಲೇಷಣೆಗಳು ದೊರಕಿಸಿಕೊಟ್ಟಿವೆ.

ಕನ್ನಡದ ಸಂದರ್ಭದಲ್ಲಿ ಚಾರಿತ್ರಿಕ ಅನಿವಾರ್ಯತೆಯಿಂದಾಗಿ ಸ್ತ್ರೀವಾದವು ಪ್ರವೇಶಿಸಿದೆ. ಅಂತಾರಾಷ್ಟ್ರೀಯ ಸ್ತ್ರೀವಾದಿ ತಾತ್ವಿಕತೆಗಳಲ್ಲಿ ಇಲ್ಲಿನ ಪರಿಸರಕ್ಕೆ ಅನ್ವಯಿಸಲು ಸಾಧ್ಯವಿರುವಂತಹ ಅಂಶಗಳನ್ನು ಎತ್ತಿಕೊಂಡು, ಸ್ಥಳೀಯವಾದ ಸ್ತ್ರೀಯರ ಸಾಂಸ್ಕೃತಿಕ ಸ್ಥಿತಿ ಗತಿಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾ ಅದು ಬೆಳೆಯುತ್ತಿದೆ. ಸ್ತ್ರೀವಾದವು ಸ್ತ್ರೀಪರವಾದದ್ದೂ ಅಲ್ಲ, ಪುರುಷ ವಿರೋಧಿಯಾದದ್ದೂ ಅಲ್ಲ. ಅದು ಲಿಂಗ ಪ್ರಭೇದ ವಿರೋಧವಾದುದು. ಹೀಗಾಗಿ ಸ್ತ್ರೀವಾದಿ ಸಿದ್ಧಾಂತ ಅಥವಾ ಅಧ್ಯಯನ ಎಂದರೆ ಮಹಿಳಾ ಅಧ್ಯಯನದಲ್ಲಿ ಇದಕ್ಕೆ ಬದಲಾಗಿ ಒಂದು ಸಂಸ್ಕೃತಿಯ ಲಿಂಗಪ್ರಭೇದ ಪರಿಕಲ್ಪನೆಗಳೇನು? ಆ ಪ್ರಕ್ರಿಯೆಗಳ ಪ್ರತಿಫಲವೇನು?

ಎನ್ನುವ ಅಧ್ಯಯನವಾಗಿದೆ. ಸಂಸ್ಕೃತಿಯೊಂದನ್ನು ಲಿಂಗ ಭೇದದ ಪರಿಪ್ರೇಕ್ಷ್ಯದಲ್ಲಿಟ್ಟು ಅಧ್ಯಯನ ಮಾಡುವುದು ಸ್ತ್ರೀವಾದದ ಉದ್ದೇಶವಾಗಿದೆ.

"ಪಾಶ್ಚಿಮಾತ್ಯ ಮಹಿಳೆಯರ ಬಂಡಾಯವು ತೀಕ್ಷ್ಣವಾದ ಕೋಪವಾಗಿ, ಆಸ್ಫೋಟನಾಕಾರಿಯಾಗಿ, ಇಬ್ಸನ್‌ನ 'ನೋರಾ'ಳ ಮಾದರಿಯಲ್ಲಿ ಪ್ರಕಟವಾಗುತ್ತದೆ. ಆದರೆ ಭಾರತೀಯ ಕಲ್ಪನೆಯ ಕಥಾ ಸಾಹಿತ್ಯದಲ್ಲಿ ಮಹಿಳೆಯ ಭಾವಾಭಿವ್ಯಕ್ತಿಯು ಉರಿವ ಕ್ರೋಧವಾಗುವುದಕ್ಕಿಂತ ಹೆಚ್ಚಾಗಿ ಯಾತನೆ, ನಿರಾಶೆ, ನೋವಿನ ರೂಪದಲ್ಲಿ ಕಾಣಿಸುತ್ತದೆಂಬ ಸುಧೀರ್ ಕಾಕರ್ ಅವರ ವಿಚಾರವನ್ನು ಕನ್ನಡಕ್ಕೂ ವಿಸ್ತರಿಸಲು ಸಾಧ್ಯವಿದೆ" (ಸುಮಿತ್ರಾ ಬಾಯಿ, ೧೯೯೯, ಪುಟ ೧೦೩). ಸ್ತ್ರೀ ಪುರುಷರನ್ನು ಸಮಾನ ಸಖಿ-ಸಖರಂತೆ ಕಲ್ಪಿಸಿಕೊಂಡ ಈ ಸಾಮಾಜಿಕ ಆದರ್ಶ ಮಹಿಳಾ ಬರೆಹದ್ದು ಮಾತ್ರವಲ್ಲ, ಇಂತಹ ಸಮಾನ ಸ್ತ್ರೀ-ಪುರುಷ ಸಂಬಂಧಗಳುಳ್ಳ ವ್ಯವಸ್ಥೆಯ ಆಶಯವೇ ಇಲ್ಲಿನ ಸ್ತ್ರೀವಾದಿ ಚಿಂತನೆಗೂ ಪ್ರೇರಕವಾಗಿರುವುದನ್ನು ಕಾಣಬಹುದು. ಅಲ್ಲದೆ ಸ್ತ್ರೀ ಸಂಸ್ಕೃತಿಯನ್ನು ಕಟ್ಟುವಿಕೆಯ ಪ್ರಯತ್ನವೂ ಇದಾಗಿದೆ.

೧.೪ ಮಹಿಳಾ ಅಧ್ಯಯನದ ಬೆಳವಣಿಗೆ:

ಅಂತರಾಷ್ಟ್ರೀಯ ಮಹಿಳಾ ಚಳುವಳಿ (International Women's Movement) ಹಾಗೂ ಸಂಯುಕ್ತ ರಾಷ್ಟ್ರಗಳ ಮಹಿಳಾ ದಶಕಗಳ ಘೋಷಣೆಗಳ ಗುರಿಯ ಮಾರ್ಗದರ್ಶನದಲ್ಲಿ ಭಾರತೀಯ ಮಹಿಳಾ ವಿಮೋಚನಾ ಹೋರಾಟಗಳು ನಡೆದಿವೆ. ಈ ಪ್ರಯತ್ನಗಳು ಮುಖ್ಯವಾಗಿ, ಮಹಿಳೆಯರ ಬದುಕನ್ನು ಸೂಕ್ಷ್ಮಾತಿಸೂಕ್ಷ್ಮ ಸ್ತರದ ಆಳವಾದ ಅಧ್ಯಯನಕ್ಕೆ ಒಳಪಡಿಸಬೇಕಾದ ಸಾಧನೋಪಾಯಗಳ ಬಗ್ಗೆ ಚರ್ಚಿಸುತ್ತಾ ಬಂದಿವೆ. ಇದರೊಂದಿಗೆ, ಮಹಿಳೆಯರೊಂದಿಗೆ, ಮಹಿಳೆಯರ ಬಗೆಗೆ, ಮಹಿಳೆಯರಿಗೋಸ್ಕರ ಕೆಲಸ ಮಾಡುವ ಗಮನಾರ್ಹ ಕ್ರಿಯಾಶೀಲ ಮಹಿಳೆಯರು ರೂಪಿಸಿಕೊಳ್ಳುವ ವಿಭಿನ್ನ ತಾತ್ವಿಕ, ವೈಚಾರಿಕತೆಗಳ ಪರಿಚಯ, ವಿಶ್ಲೇಷಣೆಯನ್ನು ಕೂಡ ಮಾಡಲಾಗಿದೆ. ಹೀಗೆ ಭಾರತೀಯ ಸಂದರ್ಭದಲ್ಲಿ ಕೆಲಸ ಮಾಡುವ ಸ್ತ್ರೀವಾದಿಗಳು ತಮ್ಮದೇ ಆದ

ತಾತ್ವಿಕತೆಯ ಆಧಾರದ ಮೇಲೆ ಸ್ತ್ರೀವಾದಿ ಸಿದ್ಧಾಂತವನ್ನು ಕಟ್ಟಿಕೊಳ್ಳುವ ಬಗೆಗಳು ಮಹಿಳಾ ಅಧ್ಯಯನದ ಪ್ರಮುಖ ವಿಷಯಗಳಾಗಿವೆ.

ಭಾರತದಲ್ಲಿ ಮಹಿಳಾ ಕ್ರಿಯಾಶೀಲ ಅನುಭವದ ನಿರೂಪಣೆಯನ್ನು ಸಂಗ್ರಹಿಸುವ ಯತ್ನವು ಮಹಿಳಾ ಅಧ್ಯಯನದ ಪ್ರಮುಖ ಕಾರ್ಯವಾಗಿ ಪ್ರಕಟಗೊಂಡಿತು. ಗಾಂಧಿವಾದ, ಮಾರ್ಕ್ಸ್‌ವಾದ, ಸಮಾಜವಾದ ಹಾಗೂ ಮುಸ್ಲಿಂ, ಕ್ರಿಶ್ಚಿಯನ್ ಧರ್ಮದ ಹಿನ್ನೆಲೆಯಲ್ಲಿ ತಮ್ಮದೇ ಆದ ತಾತ್ವಿಕತೆಯನ್ನು ಕಟ್ಟಿಕೊಂಡು ಅನೇಕ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಅವರ ಕಾರ್ಯವಿಧಾನ, ಮೌಲ್ಯಕಲ್ಪನೆ, ಸಂಘರ್ಷಗಳು ಮುಂತಾದವು ಏಕಕಾಲಕ್ಕೆ ಮಹಿಳಾ ಅಧ್ಯಯನದ ವಿಷಯವೂ, ಸಮಾಜಕಾರ್ಯ ಶಿಕ್ಷಣದ ಪ್ರಾಯೋಗಿಕ ಮಾದರಿಯೂ ಆಗುತ್ತದೆ.

೧೯೭೫-೧೯೮೫ರ ದಶಕವನ್ನು ಮಹಿಳಾ ದಶಕವೆಂದು ಘೋಷಿಸಿದ ಪರಿಣಾಮವಾಗಿ, ಭಾರತದಲ್ಲಿ ಕೂಡ ಮಹಿಳೆಯರ ಸ್ಥಿತಿಗತಿಗಳ ವಾಸ್ತವವನ್ನು ಕುರಿತ ಅಧ್ಯಯನವು ಚಾಲನೆಗೊಂಡಿತು. ಮಹಿಳಾ ದನಿಗಳಿಗೆ ಸ್ಪಂದಿಸುವುದರ ಪರಿಣಾಮವಾಗಿ ಸಂಶೋಧನೆ ಮತ್ತು ವಿಮರ್ಶಾ ಬರೆಹಗಳು ವ್ಯಾಪಕಗೊಂಡವು. ಬದುಕಿನ ಬೇರೆ ಬೇರೆ ವಲಯದ ಸ್ಥಿತಿ ಗತಿಗಳ ಬಗೆಗೆ ತೀವ್ರವಾದ, ಗುಣಾತ್ಮಕವಾದ ಶೋಧಗಳು ನಡೆದವು. ಕೈಗಾರಿಕೀಕರಣ, ಹೊಸ ತಂತ್ರಜ್ಞಾನ ಹಾಗೂ ಹೊಸ ಮಾರುಕಟ್ಟೆ ವಿಧಾನಗಳ ಪರಿಣಾಮಗಳನ್ನು ವಿಶ್ಲೇಷಿಸಲಾಯಿತು. ಸಾಂಪ್ರದಾಯಿಕ ವೃತ್ತಿಗಳಾದ ಕೃಷಿ, ಕರಕುಶಲ ಕಲೆ ಅಥವಾ ಕೂಲಿ ಕೆಲಸಗಳಲ್ಲಿ ತೊಡಗಿರುವ ಮಹಿಳೆಯರು ಹೊಸ ತಂತ್ರಜ್ಞಾನ ಹಾಗೂ ಆಧುನಿಕ ಉತ್ಪಾದನಾ ಸಂಘಟನೆಗಳಿಂದ ಹೇಗೆ ಬದಲಾವಣೆಗೆ ಸ್ಪಂದಿಸುತ್ತಾರೆ ಎಂಬ ವಿಚಾರವನ್ನು ಅಧ್ಯಯನದ ಮೂಲಕ ತಿಳಿದುಕೊಳ್ಳಲು ಸಾಧ್ಯವಾಯಿತು.

ಸಾಮಾನ್ಯವಾಗಿ 'ಮಹಿಳಾ ವಿಷಯಗಳು', 'ಮಹಿಳಾ ಅಧ್ಯಯನ' ಹಾಗೂ 'ಸ್ತ್ರೀ ವಾದ'ಗಳನ್ನು ಪರ್ಯಾಯವಾಗಿ ಬಳಸಲಾಗುತ್ತದೆ. ಹಾಗಿದ್ದರೂ ಅವು ಒಂದೇ ಅಲ್ಲ. 'ಮಹಿಳಾವಾದ'ವನ್ನು ಕುರಿತ ಪ್ರಸ್ತಾಪಗಳು ಸಾಂಪ್ರದಾಯಿಕ ನೆಲೆಯಲ್ಲಿ ಪ್ರಕಟವಾಗಬಹುದು. ಇಲ್ಲವೆ, ಸ್ತ್ರೀವಾದಿ ನೆಲೆಯಲ್ಲಿ ಪ್ರಕಟವಾಗಬಹುದು. ಮಹಿಳೆಯು ಪುರುಷ ರೂಪಿಸಿಕೊಟ್ಟ ಸಂಸ್ಕೃತಿಯ ಪ್ರತಿನಿಧಿ, ಶಿಕ್ಷಕಿ, ಪೋಷಕಿ

ಹಾಗೂ ವಾಹಕಿ ಎಂದೇ ಪರಿಗಣಿತಳಾಗಿದ್ದಾಳೆ ಮತ್ತು ತನಗಾಗಿ ಸಿದ್ಧಪಡಿಸಿದ ಈ ಪಾತ್ರವನ್ನು ಎಲ್ಲಾ ಜವಾಬ್ದಾರಿಗಳೊಂದಿಗೆ ನಿರ್ವಹಿಸುವುದರಲ್ಲಿಯೇ ಕೃತಕೃತ್ಯ ಭಾವವನ್ನು ಅನುಭವಿಸುತ್ತಾಳೆ. ಎಷ್ಟೋ ಸಂದರ್ಭಗಳಲ್ಲಿ ತನ್ನ ಬಗ್ಗೆ ಆಲೋಚನೆಯೇ ಮಾಡದೆ ತೊಂದರೆಗಳನ್ನೂ ಎದುರಿಸಬೇಕಾಗುತ್ತದೆ.

ಮಹಿಳಾ ಅಧ್ಯಯನವೆಂದರೆ ಮಹಿಳೆಯರ ಕುರಿತಾದ ವಿಷಯಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಪ್ರಸ್ತಾಪಿಸುವ ಕ್ರಮವೇ ಆಗಿದೆ. ಕುಟುಂಬ ವ್ಯವಸ್ಥೆಯ ವಿಶ್ಲೇಷಣೆ, ಲಿಂಗಾಧಾರಿತ ಸಂಬಂಧ(Gender Relations)ಗಳ ಅಧ್ಯಯನದ ಮೂಲಕ ಈ ವ್ಯವಸ್ಥೆಯ ಪುನರ್ ಮೌಲ್ಯಮಾಪನಕ್ಕೆ ಬೇಕಾದ ಜ್ಞಾನವನ್ನು ಮಹಿಳಾ ಅಧ್ಯಯನವು ಒದಗಿಸುತ್ತದೆ.

ಶೈಕ್ಷಣಿಕ ವಲಯದಲ್ಲಿ ಮಹಿಳಾ ಅಧ್ಯಯನವು ಇಂದು ತನ್ನದೇ ಆದ ಸ್ಥಾನವನ್ನು ಪಡೆದಿದೆ. ಸ್ನಾತಕ ಹಾಗೂ ಸ್ನಾತಕೋತ್ತರ ಶಿಕ್ಷಣದಲ್ಲಿ ಬೇರೆ ಬೇರೆ ಜ್ಞಾನ ಶಾಖೆಗಳ ಜೊತೆಯಲ್ಲಿ ಮಹಿಳಾ ಅಧ್ಯಯನವು ಕೂಡಾ ಅಭ್ಯಸಿಸಲು ಯೋಗ್ಯವಾದ ವಿಷಯವೆಂದು ಮಾನ್ಯವಾಗಿದೆ. ಇತಿಹಾಸ, ಮನಃಶಾಸ್ತ್ರ, ಮಾನವಶಾಸ್ತ್ರ, ಭಾಷಾ ಅಧ್ಯಯನ ವಿಷಯಗಳ ವಿಶಿಷ್ಟ ಭಾಗವಾಗಿ ಮಹಿಳಾ ಅಧ್ಯಯನವು ಜಾರಿಯಲ್ಲಿದೆ. ಸ್ತ್ರೀವಾದಿ ವಿದ್ವಾಂಸರು ಮಹಿಳಾ ಅಧ್ಯಯನಕ್ಕೆ ವಿಶಿಷ್ಟವಾದ ವೈಧಾನಿಕತೆಯನ್ನು ರೂಪಿಸಿಕೊಂಡರು. ಅತ್ಯಂತ ಕುತೂಹಲಕಾರಿಯಾದ ಫಲಿತಗಳು ಇಂತಹ ವಿಶಿಷ್ಟ ಅಧ್ಯಯನದಿಂದ ಮೂಡಿವೆ. ಸಾಂಪ್ರದಾಯಿಕ ನಿಯಮಾವಳಿಗಳ ಶಿಷ್ಟಾಚಾರವನ್ನು ಕೈ ಬಿಟ್ಟು ಮುಕ್ತವಾದ ಅಧ್ಯಯನ ಜಾಲವನ್ನು ವಿವಿಧ ಜ್ಞಾನ ಶಾಖೆಗಳ ನಡುವೆ ಕಲ್ಪಿಸಲು ಮಹಿಳಾ ಅಧ್ಯಯನ ಸಹಕಾರಿಯಾಗಿದೆ.

ಅಧ್ಯಾಯ ೨

ತುಳುನಾಡಿನ ಕುಟುಂಬ ವ್ಯವಸ್ಥೆ

೨.೧ ಮಾತೃರೂಪಿ ಕುಟುಂಬ ವ್ಯವಸ್ಥೆ

೨.೨ ಪಿತೃರೂಪಿ ಕುಟುಂಬ ವ್ಯವಸ್ಥೆ

೨.೩ ಬಂಟ ಜನಾಂಗ ಮತ್ತು ಕುಟುಂಬ ವ್ಯವಸ್ಥೆ

ಅಧ್ಯಾಯ – ೨ ತುಳುನಾಡಿನ ಕುಟುಂಬ ವ್ಯವಸ್ಥೆ.

ತುಳುನಾಡಿನಲ್ಲಿ ಕೃಷಿಯಾಧಾರಿತ ಕುಟುಂಬಗಳು ವಿಶಿಷ್ಟವಾದ ಹಿನ್ನೆಲೆಯನ್ನು ಪಡೆದಿವೆ. ಆದ್ದರಿಂದ ಕೌಟುಂಬಿಕ ಚಟುವಟಿಕೆಗಳು ಸದಾ ಕೃಷಿ ಮತ್ತು ಕೃಷಿ ಸಂಬಂಧಿ ವಿಷಯಗಳ ಸುತ್ತ ಆವರಿಸಿಕೊಂಡಿರುವುದು ಸ್ಪಷ್ಟವಾಗಿದೆ. ಕೃಷಿ ಸಂಸ್ಕೃತಿ ಮತ್ತು ಕುಟುಂಬ ಸಂಸ್ಕೃತಿಗಳು ಪರಸ್ಪರ ಅವಿಭಜಿತವೆನ್ನುವಂತೆ ಬೆಸೆದುಕೊಂಡಿರುವುದನ್ನು ನಾವು ಗಮನಿಸಬಹುದಾಗಿದೆ.

ಮೂಲತಃ ಕುಟುಂಬವೆನ್ನುವುದು ಸಮಾಜದ ಅತ್ಯಂತ ಕನಿಷ್ಠ ಘಟಕವಾಗಿದ್ದು ಕೂಡಿ ಉಂಬ ವ್ಯವಸ್ಥೆಯ ಪ್ರತೀಕವೆನಿಸಿದೆ. ಗಂಡು–ಹೆಣ್ಣು ಮಕ್ಕಳ ಸಹಿತ ಇಲ್ಲವೇ ರಹಿತವಾಗಿ, ತಮ್ಮ ಕುಟುಂಬದ ಇತರ ಸದಸ್ಯರೊಡನೆ ಇಲ್ಲವೇ ಪ್ರತ್ಯೇಕವಾಗಿ ನಿರ್ದಿಷ್ಟ ಸೂರಿನಲ್ಲಿ ವಾಸಿಸುವುದೇ ಕುಟುಂಬದ ಚಿತ್ರಣ. ಇದರಲ್ಲಿ ಕುಟುಂಬದ ಪ್ರತಿಯೋರ್ವ ಸದಸ್ಯನೂ ನಿಗದಿತ ಹಕ್ಕು ಮತ್ತು ಬಾಧ್ಯತೆಗಳೊಡನೆ, ಪರಸ್ಪರ ಬಾಂಧವ್ಯಗಳೊಡನೆ ಬದುಕುವುದನ್ನು ಗುರುತಿಸಬಹುದು. ಕುಟುಂಬವು ವ್ಯಕ್ತಿಯೊಬ್ಬನಿಗೆ ಸಾಮಾಜಿಕ ಭದ್ರತೆ ನೀಡುವುದರೊಂದಿಗೆ ಧಾರ್ಮಿಕ, ಸಾಂಸ್ಕೃತಿಕ ಮತ್ತು ಭಾವನಾತ್ಮಕ ನೆಲೆ, ಸೆಲೆಗಳನ್ನು ಒದಗಿಸುತ್ತದೆ. ಒಟ್ಟಾರೆಯಾಗಿ ಒಂದು ಕೂಡು ಬಾಳುವಿಕೆಯ ವ್ಯವಸ್ಥೆಯೇ ಕುಟುಂಬವಾಗಿದೆ.

ಕುಟುಂಬ ತನ್ನ ಸದಸ್ಯರ ಮೂಲಭೂತ ಅಗತ್ಯಗಳನ್ನಲ್ಲದೆ ಒಂದು ರೀತಿಯ ಪರಸ್ಪರ ಸಂಬಂಧ ಮತ್ತು ಏಕತೆಯ ಭಾವನೆಗಳನ್ನು ಒದಗಿಸುತ್ತದೆ; ಕಷ್ಟ–ತೊಂದರೆಗಳು ಬಂದಾಗ ತನ್ನ ಸದಸ್ಯರಿಗೆ ರಕ್ಷಣೆಯನ್ನು ನೀಡುತ್ತದೆ. ಇಲ್ಲಿ ವ್ಯಕ್ತಿಯೋರ್ವ ಸಂತಸ–ದುಃಖ, ರಾಗ–ದ್ವೇಷಗಳ ಅನುಭವಗಳನ್ನು ಮೊದಲಿಗೆ ಪಡೆಯುತ್ತಾನೆ; ಸಮಾಜದಲ್ಲಿ ತಾನು ಹೇಗೆ ಬದುಕಬೇಕೆನ್ನುವ ತಿಳಿವಳಿಕೆಯನ್ನು ತರಬೇತಿಯನ್ನು ಪಡೆಯುತ್ತಾನೆ. ಆಯಾ ಸಮಾಜದ ಸಾಂಸ್ಕೃತಿಕ, ನೈತಿಕ ಮತ್ತು ಅಧ್ಯಾತ್ಮಿಕ ಮೌಲ್ಯಗಳನ್ನು ಪೀಳಿಗೆಯಿಂದ ಪೀಳಿಗೆಗೆ ಇದು ವರ್ಗಾಯಿಸುತ್ತದೆ ಎಂದು ಟಾಲ್ಕಟ್ ಪಾರ್ಸನ್ಸ್ ಮತ್ತು ರಾಬರ್ಟ್ ಎಫ್. ಬೇಲ್ಸ್ (೧೯೫೫) ಅಭಿಪ್ರಾಯ ಪಡುತ್ತಾರೆ.

ಕುಟುಂಬ ಒಂದು ಚಲನಶೀಲ ಸಂಸ್ಥೆ. ಇದು ಒಂದು ಪ್ರಕ್ರಿಯೆ. ಇದರ ಮುಖ್ಯ ಲಕ್ಷಣಗಳೆಂದರೆ, ಲೈಂಗಿಕ ಸಂಬಂಧ, ವಿವಾಹದ ಮಾದರಿ, ಮತ್ತದಕ್ಕೆ ಸಂಬಂಧಿಸಿದ ನೀತಿ ನಿಯಮಗಳ ನಿರ್ವಹಣೆ, ಮನೆತನ ಮತ್ತು ವಂಶವನ್ನು ನಿರ್ದಿಷ್ಟಪಡಿಸುವಿಕೆ, ಆರ್ಥಿಕ ಅವಕಾಶಗಳ ಹಂಚಿಕೆ, ಮಕ್ಕಳನ್ನು ಪಡೆಯುವ ಮತ್ತು ಪಾಲನೆ-ಪೋಷಣೆಗೆ ಸಂಬಂಧಿಸಿದ ನಿಯಮಗಳು ಮತ್ತು ಸಾಮಾನ್ಯ ವಾಸ ಸ್ಥಳಗಳು ಎಂದು ಮೆಕೈವರ್ ಮತ್ತು ಪೇಜ್ ಹೇಳುತ್ತಾರೆ.

ಲಿಂಗಾಧಾರದಲ್ಲಿ ಅವಲೋಕಿಸಿದರೆ ಕುಟುಂಬವು ಮಹಿಳೆಗೆ ಹೆಚ್ಚು ಪ್ರಮುಖವಾಗುತ್ತದೆ. ಸಾಮಾಜಿಕವಾಗಿ ಮಹಿಳೆಯೊಬ್ಬಳ ಬಹುತೇಕ ಚಟುವಟಿಕೆಗಳು ಕುಟುಂಬವೊಂದರ ಚೌಕಟ್ಟಿನಲ್ಲಿ ಮತ್ತು ಅದರ ಆಣತಿಯಂತೆ ಜರುಗುತ್ತವೆ. 'ಹೆಣ್ಣು ಒಲೆಗೆ, ಗಂಡು ಹೊಲಕ್ಕೆ', ಎಂಬ ಪ್ರಾಚೀನ ಬಳಕೆಯ ಜನಪದೋಕ್ತಿಯು ಕುಟುಂಬವೊಂದು ಹೆಣ್ಣನ್ನು ಬಂಧಿಸಿಡುವ ಪರಿಯನ್ನು ಬಿತ್ತರಿಸುತ್ತದೆ.

೨.೧ ಮಾತೃರೂಪಿ ಕುಟುಂಬ ವ್ಯವಸ್ಥೆ:

ಹೋರಾಟ ಮತ್ತು ತಿರುಗಾಟಗಳ ಹಿನ್ನೆಲೆಯಲ್ಲಿ ಮೂಡಿಬಂದ ಕುಟುಂಬ ವ್ಯವಸ್ಥೆಯು ಬಹುತೇಕ ಮಾತೃ ಪ್ರಧಾನವಾಗಿಯೇ ಇರುವುದು ಐತಿಹಾಸಿಕವಾಗಿ ಕಂಡುಬರುತ್ತದೆ. ಮುಸ್ಲಿಂ ಸಮುದಾಯದ ಚರಿತ್ರೆಯನ್ನು ಗಮನಿಸಿದಾಗ ಮಹಮ್ಮದ್ ಪೂರ್ವ ಕಾಲದಲ್ಲಿ ನಾಲ್ಕು ವಿಧದ ಮದುವೆಗಳು ಪ್ರಮುಖವಾಗಿ ಗೋಚರಿಸುತ್ತವೆ. ಅವುಗಳೆಂದರೆ ಬೀನಾ (Beena), ಬಾಲ್ (Baal), ಮೂತಾ (Muta) ಮತ್ತು ಕೋಂಕ್ಯುಬಿನೇಜ್ (Concubinage). ಇವುಗಳ ಪೈಕಿ ಮೊದಲನೆಯದು ಸ್ತ್ರೀ ಕೇಂದ್ರಿತವಾದ ವಿವಾಹ ವ್ಯವಸ್ಥೆಯಾಗಿತ್ತು. ಇಲ್ಲಿ ಮದುವೆ ಮತ್ತು ಕುಟುಂಬ ನಿರ್ವಹಣೆಯ ವಿಚಾರದಲ್ಲಿ ಸ್ತ್ರೀಯದ್ದೇ ನಿರ್ಣಾಯಕ ಪಾತ್ರ. ಜನರು ಗುಡಾರ (Tent)ಗಳಲ್ಲಿ ವಾಸಮಾಡುತ್ತಿದ್ದರು ಮತ್ತು ಗಂಡು ಸದಾ ಅಲೆಮಾರಿಯಾಗಿಯೇ ಇರುತ್ತಿದ್ದ ಆ ಕಾಲ ಘಟ್ಟದಲ್ಲಿ ಹೆಣ್ಣು ಗುಡಾರದ ಒಡತಿಯಾಗಿದ್ದಳು. ತನ್ನ ಗುಡಾರಕ್ಕೆ ಗಂಡೊಬ್ಬನನ್ನು ಆಹ್ವಾನಿಸುವುದು, ಅವನೊಂದಿಗೆ ಸಂಸಾರ ನಡೆಸುವುದು,

ಇಷ್ಟ ಬಂದಾಗ ಅವನನ್ನು ಹೊರಹಾಕುವುದು, ಜನಿಸಿದ ಮಕ್ಕಳನ್ನು ತನ್ನೊಂದಿಗೆ ಇರಿಸಿಕೊಳ್ಳುವುದು ಮುಂತಾದವುಗಳು ಆಕೆಯ ವಿವೇಚನೆಗೆ ಬಿಟ್ಟ ವಿಚಾರಗಳಾಗಿತ್ತು. ಇಲ್ಲಿ ಕುಟುಂಬದ ವಾಹಕಿಯಾಗಿ ಮಹಿಳೆ ಪಾತ್ರ ನಿರ್ವಹಿಸುತ್ತಾಳೆ. ಹಾಲಿ ಸಮಾಜದಲ್ಲಿ ಸಾಮಾನ್ಯವಾಗಿ ಚಾಲ್ತಿಯಲ್ಲಿರುವಂತೆ ವಿವಾಹೋತ್ತರದಲ್ಲಿ ಹೆಣ್ಣು ತನ್ನ ಹುಟ್ಟಿದ ಮನೆಯನ್ನು ತೊರೆಯುವ ಪರಿಪಾಠ ಮಾತೃಪ್ರಧಾನ ಕುಟುಂಬದಲ್ಲಿಲ್ಲ. ಬದಲಾಗಿ ಗಂಡು ತನ್ನ ಹುಟ್ಟಿದ ಮನೆಯನ್ನು ಬಿಟ್ಟು ಹೆಂಡತಿ ಮನೆ ಸೇರುತ್ತಾನೆ. ಮಕ್ಕಳು ತಾಯಿಯ ಮೂಲ ಕುಟುಂಬದ ಅಂಶಗಳನ್ನೇ ಅನುವಂಶಿಕವಾಗಿ ಪಡೆಯುತ್ತಾರೆ. ಇಲ್ಲಿ ಸ್ತ್ರೀಯು ತನ್ನ ಕುಟುಂಬದ ಸಮಸ್ತ ಚರ, ಸ್ಥಿರ ಆಸ್ತಿಗಳ ಒಡತಿಯಾಗಿದ್ದರೂ ವ್ಯಾವಹಾರಿಕವಾಗಿ ಆಕೆಯ ಸಹೋದರ ಇಲ್ಲವೇ ಸೂಕ್ತ ಪುರುಷರ ಸಹಾಯವನ್ನು ಪಡೆಯುತ್ತಾಳೆ.

ಕೇರಳದ ನಾಯರ್ ಜನಾಂಗದಲ್ಲಿ 'ತರವಾಡು' ಎಂಬ ಅವಿಭಕ್ತ ಮಾತೃಪ್ರಧಾನ ಕುಟುಂಬ ಬಳಕೆಯಲ್ಲಿದ್ದು, ಅದರ ಮುಖ್ಯಸ್ಥೆಯಾದವಳು (ಕರ್ತೃ) ಹೊರಗಿನ ವ್ಯವಹಾರಕ್ಕಾಗಿ 'ಕಾರ್ನವನ್' ಎಂಬ ತನ್ನ ಆಯ್ಕೆಯ ಪುರುಷನೊಬ್ಬನನ್ನು ನೇಮಿಸಿಕೊಳ್ಳುತ್ತಾಳೆ. ಇಂತಹ ವ್ಯವಸ್ಥೆಯಲ್ಲಿ ಮೀನುಗಾರಿಕೆ, ಬೇಟೆ, ವ್ಯಾಪಾರ ಮುಂತಾದವುಗಳು ಪುರುಷರ ಉಸಾಬರಿಗೆ ಸೇರಿದರೆ ಮಹಿಳೆ ಕೃಷಿ, ಹೈನುಗಾರಿಕೆಗಳಂತಹ ವ್ಯವಹಾರಗಳನ್ನು ನಿಭಾಯಿಸುತ್ತಾಳೆ.

ಇಲ್ಲಿ ಆಸ್ತಿಯು ಹೆಣ್ಣು ಮಕ್ಕಳಿಗೆ, ಅದರಲ್ಲೂ ಹಿರಿಯ ಮಗಳಿಗೆ ವಿಶೇಷ ಅಧಿಕಾರದೊಂದಿಗೆ ದೊರೆಯುತ್ತದೆ. ಹೆಣ್ಣೊಬ್ಬಳು ಇಲ್ಲಿ ತನ್ನ ಕೌಟುಂಬಿಕ ಆಸ್ತಿಯನ್ನು ಪಡೆಯುವ ಪರಿಪಾಠ ಆಕೆಗೆ ಆರ್ಥಿಕ ಭದ್ರತೆಯನ್ನೂ ಒದಗಿಸುತ್ತದೆ. ಜೊತೆಗೆ ಆಕೆ ಕುಟುಂಬದಲ್ಲಿನ ವೃದ್ಧ ಮಾತಾ ಪಿತೃಗಳ ಆರೈಕೆ, ಸಾಂಪ್ರದಾಯಿಕ ಆಚರಣೆಗಳು ಮುಂತಾದ ವಿಷಯಗಳಿಗೆ ಜವಾಬ್ದಾರಳಾಗುತ್ತಾಳೆ. ವಿವಾಹ ನಂತರವೂ ಮನೆಯಲ್ಲೇ ಉಳಿಯುವ ಹೆಣ್ಣು ಮಕ್ಕಳ ಕೈಗೆ ಕುಟುಂಬದ ಅಧಿಕಾರ ಸಿಗುವಂತಹ ಈ ಕೌಟುಂಬಿಕ ವ್ಯವಸ್ಥೆ ಮಾತೃಪ್ರಧಾನವಾಗಿರುವಂತೆಯೇ, ಮಾತೃ ಸ್ಥಳೀಯವೂ ಆಗಿದೆ.

೨.೨ ಪಿತೃರೂಪಿ ಕುಟುಂಬ ವ್ಯವಸ್ಥೆ:

ಭಾರತದಲ್ಲಿ ವ್ಯಾಪಕವಾಗಿ ಪಿತೃ ರೂಪಿ ಕುಟುಂಬ ವ್ಯವಸ್ಥೆ ಕಂಡುಬರುತ್ತದೆ. ಹೈದಿ ಹಾರ್ಟಮನ್ ಎಂಬ ಸ್ತ್ರೀವಾದಿ ಮಹಿಳೆ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ತನ್ನ The Unhappy Marriage of Marxism and Feminism ಪುಸ್ತಕದಲ್ಲಿ ಹೀಗೆ ವಿವರಿಸುತ್ತಾರೆ – “A set of social relations between men which have a material base and which though heirarchical, establish or create interdependence and solidarity among men that enable them to dominate women” (ಶ್ರೀಮತಿ ಎಚ್. ಎಸ್., ೨೦೦೦, ಪುಟ ೪೮)

ಹೆಸರಿಗೆ ತಕ್ಕಂತೆಯೇ ಪಿತೃ ರೂಪಿ ಕುಟುಂಬ ವ್ಯವಸ್ಥೆಯು ಪುರುಷ ಕೇಂದ್ರಿತವಾಗಿದೆ. ಇಲ್ಲಿ ಗಂಡು ಮಗನನ್ನು ಪಡೆಯುವುದು ಜೀವನದ ಮೂಲ ಗುರಿಗಳಲ್ಲಿ ಒಂದಾಗಿರುತ್ತದೆ. ಗಂಡು ಮಗು ಪಡೆದರಷ್ಟೇ ಮೋಕ್ಷ ಪ್ರಾಪ್ತಿ ಎಂಬ ನಂಬಿಕೆಯಿದೆ. ತಂದೆಯ ಚಿತೆಗೆ ಅಗ್ನಿಸ್ಪರ್ಶವೀಯಲು ಗಂಡುಮಗನಿಗಷ್ಟೇ ಸಾಂಪ್ರದಾಯಿಕ ಹಕ್ಕು ಇದೆ. ಚಿತೆಗೆ ಬೆಂಕಿ ನೀಡುವ ಮೂಲಕ ಗಂಡುಮಗನು ತನ್ನ ತಂದೆಯನ್ನು ‘ಪುತ್’ ಎಂಬ ನರಕದಿಂದ ಪಾರು ಮಾಡಿ ಸ್ವರ್ಗಕ್ಕೆ ಸೇರಿಸುತ್ತಾನೆ ಎನ್ನುವ ನಂಬಿಕೆ ಇದೆ. (ಶ್ರೀಮತಿ ಎಚ್. ಎಸ್., ೨೦೦೦, ಪುಟ ೪೯)

ಮಾತೃ ರೂಪಿ ಕುಟುಂಬದಲ್ಲಿ ಹೆಣ್ಣಿಗೆ ವಿಶೇಷ ಸ್ಥಾನ ಮಾನಗಳಿರುವಂತೆ ಪಿತೃ ರೂಪಿ ಕುಟುಂಬದಲ್ಲಿ ಗಂಡಿಗೆ ವಿಶೇಷ ಸ್ಥಾನ ಮಾನಗಳು ಮೀಸಲಾಗಿವೆ. ಸಾಂಪ್ರದಾಯಿಕವಾಗಿ ಇಲ್ಲಿ ಹೆಣ್ಣಿನ ಆಗಮನವು ಸಂತಸದ ವಿಚಾರವೇನೂ ಆಗಿರುವುದಿಲ್ಲ. ಯಾವತ್ತಿದ್ದರೂ ಪರರ ಮನೆ ಸೇರಬೇಕಾದವಳೆಂಬ ಭಾವನೆ ಇಲ್ಲಿ ಬೇರೂರಿರುವುದನ್ನು ಕಾಣಬಹುದು. ಆಕೆಗೆ ನೀಡುವ ಶಿಕ್ಷಣ, ಆಹಾರ, ಸ್ವಾತಂತ್ರ್ಯ, ಆಸ್ತಿ ಹಕ್ಕು, ಸಾಮಾಜಿಕೀಕರಣದ ಅವಕಾಶ ಮುಂತಾದವುಗಳಲ್ಲಿ ಇವುಗಳನ್ನು ಗನಿಸಬಹುದು.

ಮಗಳೆಂದರೆ ಆಕೆಯ ಪ್ರೀತಿ, ದುಡಿಮೆಗಳನ್ನು ಇನ್ನೊಂದು ಮನೆಗೆ ಮೀಸಲಾಗಿಟ್ಟವಳು ಎಂದೇ ವ್ಯಾಖ್ಯಾನಿಸಲಾಗುತ್ತದೆ. ಅವಳನ್ನು ಸಲಹುವುದೆಂದರೆ ಇತರರ ಹಿತ್ತಿಲಲ್ಲಿನ ಗಿಡಕ್ಕೆ ನೀರು, ಗೊಬ್ಬರ ಹಾಕಿದಂತೆ ಎಂದು

ಅರ್ಥೈಸಲಾಗುತ್ತದೆ. ಮಗಳನ್ನು ಬೆಳೆಸಿ ಇನ್ನೊಂದು ಮನೆಗೆ ವಿವಾಹ ಮೂಲಕ ವರ್ಗಾಯಿಸಿಬಿಡುವುದು ತಂದೆಯಾದವನ ಕರ್ತವ್ಯವೆಂದು ಭಾವಿಸಲಾಗುತ್ತದೆ. ಆಕೆಗೆ ಸಿಗಬಹುದಾದ ಒಂದೇ ಒಂದು ಸಂಸ್ಕಾರವೆಂದರೆ ಅದು ವಿವಾಹ ಮಾತ್ರವಾಗಿರುತ್ತದೆ. ಆ ಮೂಲಕ ಆಕೆ ಇನ್ನೊಂದು ಮನೆಗೆ ಹೊಂದಾಣಿಕೆಯನ್ನು ಸಾಧಿಸುತ್ತಾಳೆ. ತಾನು ಹುಟ್ಟಿದ ಮನೆಯಲ್ಲಿ ತನಗೆ ಯಾವುದೇ ಹಕ್ಕುಗಳಿಲ್ಲವೆಂದು ಆಕೆ ಮಾನಸಿಕವಾಗಿ ಒಪ್ಪಿಕೊಳ್ಳುವಂತೆ ಮಾಡಲಾಗುತ್ತದೆ. (ನರಹಳ್ಳಿ ಬಾಲಸುಬ್ರಹ್ಮಣ್ಯ (ಸಂ), ೧೯೯೮, ಪುಟ ೨೪).

೨.೩ ಬಂಟ ಜನಾಂಗ ಮತ್ತು ಕುಟುಂಬ ವ್ಯವಸ್ಥೆ:

ಬಂಟ ಜನರು: ಹಿಂದೆ ನಾಡವರು ಮತ್ತು ಬಂಟರು ಭಿನ್ನ ಸಮುದಾಯ ಎಂದು ಪರಿಗಣಿಸಲ್ಪಟ್ಟಿತ್ತು. ಇಪ್ಪತ್ತೊಂದನೆಯ ಶತಮಾನದಲ್ಲಿ ಇವರು ಮತ್ತೆ ಒಂದು ವರ್ಗವಾಗಿ ಗುರುತಿಸಲ್ಪಡುತ್ತಾರೆ. ಅದುವರೆಗೆ ಒಕ್ಕಲಕುಲು, ಒಕ್ಕೆಲ್ಮೆರ್, ಸೆಟ್ರು ಎಂದು ಜಾತಿ ಸೂಚಕವಾಗಿ ಕರೆಯುತ್ತಿದ್ದ ಅವರನ್ನು ತುಳುನಾಡಿನ ತುಳುವೇತರರು 'ಬಂಟರು' ಎಂದು ಕರೆಯುವುದನ್ನು ರೂಢಿಸಿಕೊಂಡರು. ಏಳನೆಯ ಶತಮಾನದಲ್ಲಿ ಬನವಾಸಿ ಹಾಗೂ ಬಾರ್ಕೂರುಗಳನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಮಯೂರವರ್ಮನು ಒಂದು ನವಿಲನ್ನು ಕೊಂದನು. ಜೈನ ಧರ್ಮದಲ್ಲಿ ಪ್ರಾಣಿಹತ್ಯೆಗೆ ನಿಷೇಧವಿದ್ದುದರಿಂದ ಅನೇಕ ಜೈನರು ರಾಜನ ವಿರುದ್ಧ ಸಿಡಿದು ನಿಂತರು. ಆಗ ರಾಜರು ಮುಖಂಡರ ಸಭೆಯನ್ನು ಕರೆದು "ಪ್ರಾಣಿ ಹತ್ಯೆಯು ಜೈನ ಧರ್ಮಕ್ಕೆ ವಿರುದ್ಧವಾದರೂ, ರಾಜಧರ್ಮಕ್ಕೆ ವಿರುದ್ಧವಲ್ಲ. ತಾನು ರಾಜನಾದುದರಿಂದ ಪ್ರಾಣಿ ಹತ್ಯೆ ಮಾಡಿದ್ದು ತಪ್ಪಲ್ಲ" ಎಂದು ಸಾಧಿಸುತ್ತಾನೆ. ಆಗ ಜೈನರಲ್ಲಿ ಎರಡು ಗುಂಪುಗಳಾಗಿ, ಅದೇ ಊರಿನ ಮುಖಂಡರೆಲ್ಲ ರಾಜನ ಪಕ್ಷ ವಹಿಸಿದರು. ಈ ಐತಿಹ್ಯ, ನಾಡವರು ಮೂಲತಃ ಜೈನರಾಗಿದ್ದು , ಅವರು ಮಯೂರವರ್ಮನ ಕಾಲಕ್ಕೆ ಜೈನ ಧರ್ಮದಿಂದ ಸಿಡಿದು ಬೇರೆಯಾದರು ಎನ್ನುವುದನ್ನು ಸೂಚಿಸುವುದರ ಜೊತೆಗೆ ಈ ಘಟನೆ ನಡೆದದ್ದು ದಕ್ಷಿಣ ಕನ್ನಡದ ಬಾರ್ಕೂರಿನಲ್ಲಿ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ. (ಇಂದಿರಾ ಹೆಗ್ಗಡೆ, ೨೦೦೪, ಪುಟ ೬)

ಉತ್ತರ ಕನ್ನಡ ಜಿಲ್ಲೆಯಲ್ಲಿ ನಾಡವರು ಆ ಮೂಲ ಹೆಸರನ್ನು ಹಾಗೆಯೇ ಉಳಿಸಿಕೊಂಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಟ ಯಾನೆ ನಾಡವರು ಎಂದು ಕರೆದುಕೊಳ್ಳಲು ಇಷ್ಟ ಪಡುತ್ತಿದ್ದರು. ಕಾಸರಗೋಡು, ಪುತ್ತೂರು, ಬಂಟ್ವಾಳ, ಬೆಳ್ತಂಗಡಿ, ಸುಳ್ಯ, ಕಾರ್ಕಳ, ಮಂಗಳೂರು, ಉಡುಪಿ, ಕುಂದಾಪುರ – ಈ

ಪ್ರದೇಶಗಳಲ್ಲಿ ಬಂಟರು ಇಪ್ಪತ್ತನೆಯ ಶತಮಾನದ ಕೊನೆಯವರೆಗೂ ತಮ್ಮ ಪ್ರಾಬಲ್ಯವನ್ನು ಮೆರೆದಿದ್ದರು. ಆ ಬಳಿಕ ಅವರ ಜೀವನ ವಿಧಾನದಲ್ಲಿ ಅನೇಕ ರೀತಿಯ ಬದಲಾವಣೆಗಳು ಕಂಡು ಬಂದವು.

ಬಾರಗರು: ಬಂಟ ಜನಾಂಗವನ್ನು ಒಂದು ರೂಢಿಯನ್ವಯ 'ಬಾರಗರು' ಎಂದೂ ಕರೆಯುತ್ತಾರೆ.ಭೂತಾರಾಧನೆಯ ಸಂದರ್ಭದಲ್ಲಿ ಭೂತವು ಅವರನ್ನು 'ಬಾರೆಗೆರೆ' ಎಂದು ಸಂಬೋಧಿಸುತ್ತದೆ. ತುಳುನಾಡಿನಲ್ಲಿ ಬಂಟ ಸಮಾಜದವರು ಸಾಂಪ್ರದಾಯಿಕವಾಗಿ ಭತ್ತದ ಬೇಸಾಯವನ್ನು ಪ್ರಧಾನ ವೃತ್ತಿಯಾಗಿ ಸ್ವೀಕರಿಸಿಕೊಂಡವರು. 'ಬಾರಗ' ಎಂಬ ಶಬ್ದ ಬಾರ್+ಮಗ ಎಂದರೆ 'ಭತ್ತ'+'ಮಗ' ಅಂದರೆ 'ಆ ವಂಶದವ' ಎಂಬ ಅರ್ಥ. ಅಂದರೆ 'ಭತ್ತದ ವಂಶದವರು' ಎಂದಾಗುತ್ತದೆ. ಬಂಟರು ಸಾಂಪ್ರದಾಯಿಕವಾಗಿ ಭತ್ತದ ಬೇಸಾಯವನ್ನು ಮಾಡುವ ಕಾರಣದಿಂದ ಅವರಿಗೆ 'ಬಾರಗರು' ಎಂಬ ಹೆಸರು ಬಂದಿರಬೇಕೆಂಬುದು ವಿವೇಕ ರೈಯವರ ಅಭಿಪ್ರಾಯ. (ವಿವೇಕ ರೈ, ೧೯೮೫, ಪುಟ ೧೭೪)

ಯೋಧ ಮೂಲ ಬಂಟರು: 'ಬಂಟ' ಎಂಬ ಪದವನ್ನು ಕಾರ್ಯ ಸೂಚಕವಾಗಿ ಹಿಂದೆ ಬಳಸುತ್ತಿದ್ದರು. ತುಳು ಜನಪದದಲ್ಲಿ ಕಾಣಿಸಿಕೊಳ್ಳುವ ತುಳುನಾಡಿನ ವೀರರಾದ ಕೋಟಿ–ಚೆನ್ನರ ಪಾಡ್ದನವನ್ನು 'ಬಂಟೆರೆ ಸಂಧಿ' ಎಂದು ಕರೆಯುತ್ತಾರೆ. ಜಾತಿಯಲ್ಲಿ ಅವರು ಬಿಲ್ಲವರು. ಆದರೆ ಅವರ ಶೌರ್ಯಕ್ಕಾಗಿ ಅವರನ್ನು 'ಬಂಟೆರ್' ಎಂದು ಪಾಡ್ದನದಲ್ಲಿ ಹೇಳಿದ್ದಾರೆ. 'ಬಂಟ' ಎಂಬ ಪದವು ಅಂಕದ ವೀರರಿಗೆ ಅನ್ವಯವಾಗುತ್ತದೆ. ತುಳುನಾಡಿನಲ್ಲಿ ಪ್ರಸಿದ್ಧವಾಗಿರುವ 'ಕೋಳಿ ಅಂಕ' ಜಾನಪದ ಕ್ರೀಡೆಯಲ್ಲಿ ಗೆದ್ದ ಕೋಳಿಯನ್ನು 'ಬಂಟ' ಎಂದು ಕರೆಯುತ್ತಾರೆ. ಕನ್ನಡ

ಅರ್ಥಕೋಶದ ಪ್ರಕಾರ ‘ಬಂಟ’ ಪದವು ‘ಭಟ’ ಪದದಿಂದ ನಿಷ್ಪನ್ನಗೊಂಡಿದೆ. ‘ಬಂಟ’ ಅಂದರೆ ವೀರ, ಶೂರ, ಪರಾಕ್ರಮಿ, ಯೋಧ, ಸೈನಿಕ ಎಂಬ ಅರ್ಥವಿದೆ. ‘ಬಂಟರು ಮೂಲತಃ ಯೋಧ ಜನಾಂಗದವರಾಗಿದ್ದಾರೆ’ ಎನ್ನುತ್ತಾರೆ ಇತಿಹಾಸಕಾರರು. ವಿದ್ವಾಂಸರ ಪ್ರಕಾರ ಬಟರಿ ಕುಲ ಅಂದರೆ ಯೋಧರ ಕುಲ. ಸೈನಿಕರಾಗಿ, ಸೇನಾಪತಿಗಳಾಗಿ, ದಂಡನಾಯಕರಾಗಿ, ಮಹಾದಂಡನಾಯಕರಾಗಿದ್ದ ವೀರರೇ ಮುಂದೆ ಅರಸರಾಗಿಯೂ ಆಳಿದ ಉದಾಹರಣೆಗಳು ಇತಿಹಾಸದಲ್ಲಿ ಕಾಣಸಿಗುತ್ತವೆ. ಬಂಟರು ಸ್ವಜನ ರಕ್ಷಣೆ ಹಾಗೂ ಸ್ವರಕ್ಷಣೆಗಾಗಿ ಯುದ್ಧ ತರಬೇತಿ ಕೇಂದ್ರಗಳನ್ನು ಹೊಂದಿದ್ದರು. ಈ ತರಬೇತಿ ಕೇಂದ್ರಗಳನ್ನು ಗರಡಿ ಮನೆಗಳೆಂದು ಕರೆಯುತ್ತಾರೆ. ಪ್ರತಿ ಸೀಮೆಗೆ ಒಂದರಂತೆ ಗರಡಿಮನೆಗಳಿದ್ದವು.

“ಬಂಟರು ಬಂಟ ಕತ್ತಿಯನ್ನು ಹೊಂದಿದ್ದರು. ಬಂಟ ಕತ್ತಿಯೆಂದರೆ ವಿಶಿಷ್ಟ ರೀತಿಯಲ್ಲಿ ಬಾಗಿದ ಕತ್ತಿ. ಶೌರ್ಯ ಪರಾಕ್ರಮ ದ್ಯೋತಕವಾದ ಕತ್ತಿಯಿದು ಎಂದು ತುಳು ನಿಘಂಟುವಿನಲ್ಲಿ ತಿಳಿಸಲಾಗಿದೆ. ಈಗಲೂ ಬಂಟರ ಚಾವಡಿ ದೈವ, ಸೀಮೆ ದೈವಗಳ ಭಂಡಾರಗಳಲ್ಲಿ ಈ ಕತ್ತಿಯನ್ನು ಕಾಣಬಹುದು. ಈ ಭಂಡಾರಗಳಲ್ಲಿ ಖಡ್ತಲೆ, ಕಿರುವಾಲು ಬಾಕು, ಸುರಿಯ, ಬಿಲ್ಲು ಬಾಣ, ಕತ್ತಿಗಳು, ಗುರಾಣಿಗಳು ಮುಂತಾದ ಯುದ್ಧಾಸ್ತ್ರಗಳಿವೆ. ಇವೆಲ್ಲ ಈಗ ದೈವಗಳ ಭಂಡಾರವಾಗಿವೆ” (ಇಂದಿರಾ ಹೆಗ್ಗಡೆ, ೨೦೦೪ ಪುಟ ೮೯)

ಜಮೀನ್ದಾರರಾಗಿ ಬಂಟರು: ಬಂಟರು ಜಮೀನ್ದಾರರಾಗಿ ಸಮಾಜದಲ್ಲಿ ಗುರುತಿಸಲ್ಪಡುತ್ತಿದ್ದರು. ಇವರು ಭೂಮಿಯನ್ನು ಗೇಣಿಗೆ ಕೊಡುತ್ತಿದ್ದರು. ಮನೆಯ ಖರ್ಚಿಗೆ ಎಂದು ಭೂಮಿಯ ಸ್ವಲ್ಪ ಭಾಗವನ್ನು ಇಟ್ಟುಕೊಳ್ಳುತ್ತಿದ್ದರು. ಈ ಭೂಮಿಯನ್ನು ಮೂಲದಾಳುಗಳು ಹಾಗೂ ಕೃಷಿ ಕಾರ್ಮಿಕರಿಂದ ಸಾಗುವಳಿ ಮಾಡಿಸುತ್ತಿದ್ದರು. ಈ ಕೃಷಿ ಕಾರ್ಮಿಕರ ಪೂರ್ಣ ಜವಾಬ್ದಾರಿಯನ್ನು ಜಮೀನ್ದಾರರೇ ಹೊರುತ್ತಿದ್ದರು. ಈ ಮನೆಗಳನ್ನು ‘ಬುಡು ಒಕ್ಕಲು’ ಎನ್ನುತ್ತಿದ್ದರು. ಗೇಣಿಗೆ ಭೂಮಿ ಪಡೆದು ವ್ಯವಸಾಯ ಮಾಡುವವರನ್ನು ‘ಗೇಣಿ ಒಕ್ಕಲು’ ಎಂದು ಕರೆಯುತ್ತಿದ್ದರು. ಬಂಟರ ಆಸ್ತಿ ಅಭಿವೃದ್ಧಿ ಹೊಂದಲು, ಪಾಳೆಯಗಾರಿಕೆಯಲ್ಲಿ ಅವರ ಬಲ ಹೆಚ್ಚಲು,

ಮೂಲದಾಳುಗಳೇ ಕಾರಣರಾಗಿದ್ದರು. ಅಂದಿನ ಕಾಲದಲ್ಲಿ ಇಬ್ಬರು ಪಾಳೆಯಗಾರರ ನಡುವಿನ ಕಲಹ ಅಂದರೆ ಅವರಿಬ್ಬರ ಮೂಲದಾಳುಗಳ ನಡುವಿನ ಹೋರಾಟ ಆಗುತ್ತಿತ್ತು. ಸೋಲು ಗೆಲುವು ಇವರದೇ ಆಗುತ್ತಿತ್ತು. ಒಡೆಯನ ಮನೆಯ ಮೂಲಕ ಅವರು ಗುರುತಿಸಲ್ಪಡುತ್ತಿದ್ದರು. ತಮ್ಮ ಒಡೆಯನ ಮನೆಯ ಆಸ್ತಿ ಅಭಿವೃದ್ಧಿ ಹೊಂದಿದರೆ ತಾವು ಅಭಿವೃದ್ಧಿ ಹೊಂದಿದೆವು ಎಂದು ತಿಳಿಯುತ್ತಿದ್ದರು ಮತ್ತು ಸಂತಸಪಡುತ್ತಿದ್ದರು. ಒಡೆಯನಿಗಾಗಿ ಮತ್ತೊಬ್ಬರ ಪಾಳೆಯಗಾರಿಕೆಯನ್ನು ಕಸಿಯಲು ಹವಣಿಸುತ್ತಿದ್ದರು. ಸಾಮಾನ್ಯವಾಗಿ ಕೆಳ ಹಂತದ ಎಲ್ಲಾ ವರ್ಗದವರು ಬಂಟರ ಮನೆಗಳಲ್ಲಿ ಊಳಿಗಕ್ಕೆ ನಿಲ್ಲುತ್ತಿದ್ದರು.

ತುಳುನಾಡಿನಲ್ಲಿ ಎಲ್ಲಾ ಬಂಟರೂ ಒಂದೇ ಸಂಪ್ರದಾಯವನ್ನು ಆಚರಿಸುವುದಿಲ್ಲ. ನಾಡವರ ಕ್ರಮ ತೀರಾ ಭಿನ್ನವಾಗಿದೆ. ಗ್ರಾಮದಿಂದ ಗ್ರಾಮಕ್ಕೆ, ಸೀಮೆಯಿಂದ ಸೀಮೆಗೆ ಸಂಪ್ರದಾಯಗಳಲ್ಲಿ ಭಿನ್ನತೆಯಿದೆ. ಎಲ್ಲ ಸಂಪ್ರದಾಯಗಳು ಗ್ರಾಮ ಮುಖಂಡನ ಮೇಲೆ ಅವಲಂಬಿತವಾಗುತ್ತವೆ. ಆತ ವಿಶಾಲ ಮನೋಭಾವದವನಾಗಿದ್ದರೆ ಮಡಿ ಮೈಲಿಗೆಗಳ ಸಂಪ್ರದಾಯಗಳು ಸಡಿಲಗೊಳ್ಳುತ್ತಿತ್ತು.

ಗುತ್ತಿನ ಮನೆ: ಗುತ್ತು ಎಂದರೆ ತುಳುನಾಡಿನ ಪ್ರತಿಷ್ಠಿತ ಕುಟುಂಬಗಳ ಮೂಲ ಮನೆ. ಗ್ರಾಮದ ಆಡಳಿತ ಹಾಗೂ ಆರಾಧನಾ ಸಂಪ್ರದಾಯಗಳಲ್ಲಿ ಪ್ರಮುಖ ಹೊಣೆಗಾರಿಕೆ ಹೊತ್ತ ಮನೆ. ಗುತ್ತುಗಳು ಬಂಟರು ವಾಸ ಮಾಡುತ್ತಿದ್ದ ಮನೆಗಳು. ಪೂರ್ವ ಪರಂಪರೆಯಿಂದ ಮಾತೃವಂಶೀಯವಾಗಿ ಇದರ ಅನುಭೋಗ್ಯದ ಅಧಿಕಾರ ಹರಿದು ಬಂದಿದೆ. ಈಗಲೂ ಗುತ್ತುಗಳು ಬಂಟರ ಪ್ರತಿಷ್ಠೆಯ ಸಂಕೇತಗಳಾಗಿವೆ. ಸೀಮೆ ಅರಸರ ಅನಂತರ ಮೊದಲ ಗೌರವ, ಮರ್ಯಾದೆ ಕ್ರಮವಾಗಿ ಗುತ್ತುಗಳಿಗೆ ಸಲ್ಲುತ್ತವೆ. ತುಳುನಾಡಿನಲ್ಲಿ ಅನೇಕ ಗುತ್ತುಗಳಿವೆ. ಒಂದು ಸೀಮೆಗೆ ನಾಲ್ಕು ಪ್ರಧಾನ ಗುತ್ತುಗಳು ಇರುತ್ತವೆ. ಇವುಗಳನ್ನು ‘ಸೀಮೆ ಗುತ್ತು’ ಎಂದೋ ‘ರಾಜಗುತ್ತು’ ಎಂದೋ ಕರೆಯಲಾಗುತ್ತದೆ. ಇವುಗಳಿಗೆ ಪೂರಕವಾಗಿ ‘ಮಾಗಣೆಗುತ್ತು’ಗಳೂ ಇರುತ್ತವೆ. ಮಾಗಣೆಗಳಿಗೆ ‘ಒತ್ತುಗುತ್ತು’ಗಳು ಇರುತ್ತವೆ. ಮುಖ್ಯ ಗುತ್ತಿನ ಸಹೋದರ ಗುತ್ತುಗಳಾಗಿ ‘ಸತ್ತುಗುತ್ತು’ಗಳು ಇರುತ್ತವೆ.

ಬಾಕಿಮಾರು ಗದ್ದೆ: ಬಂಟರ ಪೂರ್ವ ಪರಂಪರೆಯ ಮನೆಗಳ ಮುಂದೆ ವಿಶಾಲ ಗದ್ದೆಯಿರುತ್ತದೆ. ಇದನ್ನು 'ಬಾಕ್ಯಾರ್' ಅಥವಾ 'ಬಾಕಿಮಾರು' ಎಂದು ಕರೆಯುತ್ತಾರೆ. ತುಳುವ ಪರಂಪರೆಯಲ್ಲಿ ಬಾಕ್ಯಾರ್‌ಗೆ ತನ್ನದೇ ಆದ ಮಹತ್ವ ಇದೆ. ಈ ಗದ್ದೆಗಳ ಕನಿಷ್ಟ ವೈಶಾಲ್ಯ ಒಂದೂವರೆ ಎಕರೆ ಆದರೆ ಗರಿಷ್ಟ ಹತ್ತು ಎಕರೆಗಳು. ಈ ಗದ್ದೆಗಳು ಆಯಾ ಪರಂಪರೆಯ ಮನೆಗಳ ಧಾರ್ಮಿಕ ಮತ್ತು ಭಾವನಾತ್ಮಕ ಸಂಬಂಧಗಳೊಂದಿಗೆ ಬೆಸೆದುಕೊಂಡಿವೆ. ಅರಮನೆಗಳಂತೆ ಕಾಣುವ ಗುತ್ತು ಮನೆಗಳ ಮೊಗಸಾಲೆಯ ಎದುರು ಕಾಣುವ ವಿಶಾಲ ಗದ್ದೆ ಆ ಗುತ್ತಿನ ಗತ್ತನ್ನು ವೈಭವೀಕರಿಸುತ್ತದೆ.

೨.೩ ಬಂಟ ಜನಾಂಗದ ಕುಟುಂಬ ವ್ಯವಸ್ಥೆ:

ಬಂಟ ಜನಾಂಗದಲ್ಲಿ ಮಾತೃ ರೂಪಿ (Matrilineal Family) ಕುಟುಂಬ ವ್ಯವಸ್ಥೆ ರೂಢಿಯಲ್ಲಿದೆ. ಹೆಣ್ಣಿಗೆ ಇಲ್ಲಿ ಪರಮಾಧಿಕಾರವಿದೆ. ತಂದೆಗಿಂತ ತಾಯಿ ಹೆಚ್ಚಿನ ಪ್ರಾಧಾನ್ಯವನ್ನು ಪಡೆಯುತ್ತಾಳೆ. ಈ ವ್ಯವಸ್ಥೆಯಲ್ಲಿ ವಂಶದ ಮೂಲವನ್ನು ತಾಯಿಯ ತವರಿನ ಸಂಬಂಧಾತ್ಮಕ ನೆಲೆಯಿಂದ ಗುರುತಿಸಲಾಗುತ್ತದೆ. ಕುಟುಂಬದ ಎಲ್ಲ ವಿಷಯ ವ್ಯವಹಾರಗಳಲ್ಲಿಯೂ ಸ್ತ್ರೀಗೆ ಪ್ರಾಮುಖ್ಯ ಇರುತ್ತದೆ. ಮಕ್ಕಳು ತಾಯಿಯ ವಂಶಕ್ಕೆ ಸೇರುತ್ತಾರೆ. ತಾಯಿ, ಅವಳ ಸಹೋದರ, ಸಹೋದರಿಯರು, ಅವರ ಮಕ್ಕಳು ಮತ್ತು ರಕ್ತ ಸಂಬಂಧಿಗಳು ಮಾತೃಪ್ರಧಾನ ಕುಟುಂಬಕ್ಕೆ ಸೇರುತ್ತಾರೆ. ಈ ಕುಟುಂಬ ಪದ್ಧತಿಯಲ್ಲಿ ಸ್ತ್ರೀಯು ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಹೆಚ್ಚಿನ ಪಾತ್ರ ವಹಿಸುತ್ತಾಳೆ. ಸ್ತ್ರೀಗೆ ಆಸ್ತಿಯ ಮೇಲಿನ ಹಕ್ಕಿರುತ್ತದೆ. ಉತ್ತರಾಧಿಕಾರವು ಸ್ತ್ರೀ ಕುಲವನ್ನೇ ಅನುಸರಿಸಿ ಬರುತ್ತದೆ. ಇದರಿಂದಾಗಿ ಮಕ್ಕಳನ್ನು ಮಾತೃವಂಶೀಯರೆಂದೇ ಕರೆಯುತ್ತಾರೆ. ಸಾಮಾನ್ಯವಾಗಿ ಆಸ್ತಿಯು ತಾಯಿಯಿಂದ ಹೆಣ್ಣು ಮಕ್ಕಳಿಗೆ ವರ್ಗಾವಣೆಗೊಳ್ಳುತ್ತದೆ. ಹಿರಿಯ ಮಗಳು ಆಸ್ತಿಯ ವಾರಸುದಾರಳಾಗುತ್ತಾಳೆ. (ಕವಿತಾ ರೈ, ೨೦೦೫, ಪುಟ ೭೦-೭೧.)

"ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಹಿರಿಮಗನ ಹಿರಿಮಗ ಪಟ್ಟದ ಉತ್ತರಾಧಿಕಾರಿಯಾಗುತ್ತಾನೆ. ಮಾತೃಪ್ರಧಾನತೆಯಲ್ಲಿ ಪಟ್ಟದ ಅರಸನ

ಸಹೋದರಿಯರ ಗಂಡುಮಕ್ಕಳಲ್ಲಿ ವಯಸ್ಸಿನಲ್ಲಿ ಯಾರು ಹಿರಿಯವನಿರುತ್ತಾನೋ ಅವನಿಗೆ ಪಟ್ಟ ಆಗುತ್ತದೆ. ಕಿರಿಯ ಸಹೋದರಿಯ ಮಗನಿಗೆ ಹಿರಿಯ ಸಹೋದರಿಯ ಮಗನಿಗಿಂತ ಹೆಚ್ಚು ವಯಸ್ಸು ಆಗಿದ್ದರೆ ಕಿರಿಯ ಸಹೋದರಿಯ ಮಗನು ಪಟ್ಟದ ಉತ್ತರಾಧಿಕಾರಿಯಾಗುತ್ತಾನೆ. ಆದರೆ ಆಗ ಅವನ ತಾಯಿ ಪಟ್ಟದಬ್ಬೆ ಆಗುವುದಿಲ್ಲ. ಹಿರಿಯ ಸಹೋದರಿಯೇ ಪಟ್ಟದಬ್ಬೆ ಆಗುತ್ತಾಳೆ. ಅರ್ಥಾತ್ 'ಗುರ್ಕಾರ್ದಿ' ಆಗುತ್ತಾಳೆ". (ಇಂದಿರಾ ಹೆಗ್ಗಡೆ. ೨೦೦೪, ಪುಟ ೨೧೨). ಕುಟುಂಬದಲ್ಲಿ ಯಾರು ವಯಸ್ಸಿನಲ್ಲಿ ಹಿರಿಯರಾಗಿತ್ತಾರೋ ಅವರೇ ಪಟ್ಟದ ಅರಸ (ಗುರ್ಕಾರ) ಮತ್ತು ಪಟ್ಟದಬ್ಬೆ (ಗುರ್ಕಾರ್ದಿ) ಆಗುತ್ತಾರೆ. ಈ ಪಟ್ಟದಬ್ಬೆ ಗುರ್ಕಾರನ ತಾಯಿಯೂ ಆಗಿರಬಹುದು, ತಾಯಿಯ ಅಕ್ಕನೂ ಆಗಿರಬಹುದು. ತನ್ನ ಹಿರಿಯಕ್ಕ ಅಕ್ಕ ಆದರೆ ಆಕೆ ಪಟ್ಟದ ಸಹೋದರಿಯಾಗುತ್ತಾಳೆ. ಆಕೆ ತಂಗಿಯೂ ಆಗಿರಬಹುದು. ಅಥವಾ ತತ್ಸಮಾನ ಸಹೋದರ ಸಂಬಂಧಿ ಮಹಿಳೆಯಾಗಿರಬಹುದು.

ಮಾತೃರೂಪಿ ಸಂಸ್ಕೃತಿಯಲ್ಲಿ ಕುಟುಂಬದ ಹಿರಿಯ ಹೆಣ್ಣಿಗೇ ಮೊದಲ ಗೌರವ. ಮದುವೆ, ಸೀಮಂತ ಮುಂತಾದ ಶುಭ ಸಂದರ್ಭಗಳಲ್ಲಿ ಈಕೆಯೇ ಮೊದಲಿಗೆ ಸೇಸೆ ಇಡುವ ಗೌರವ ಪಡೆಯುತ್ತಾಳೆ. ಆಕೆ ವಿಧವೆಯಾದರೂ ಈ ಗೌರವ ಆಕೆಗಿದೆ. 'ಮಾತೃ ದೇವೋ ಭವ' ಎಂಬ ಮಾತಿನಂತೆ ಇಲ್ಲಿ ಮಾತೆಗೆ ಹೆಚ್ಚಿನ ಗೌರವವಿರುವುದು ಗಮನಾರ್ಹವಾದುದು. ಹೆಣ್ಣಿನ ಸ್ಥಾನ ಮಾನಕ್ಕೆ ಸಂಬಂಧ ಪಟ್ಟಂತೆ ಇಂದಿರಾ ಹೆಗ್ಗಡೆಯವರು ತಮ್ಮ ಸಂಶೋಧನ ಗ್ರಂಥದಲ್ಲಿ ಒಂದು ಗುತ್ತಿನಲ್ಲಿ ೨೦ನೆ ಶತಮಾನದಲ್ಲಿ ನಡೆದ ಘಟನೆಯನ್ನು ಪ್ರಸ್ತಾಪಿಸುತ್ತಾರೆ. ಸವಣೂರು ಗುತ್ತಿನಲ್ಲಿ ೨೦ನೆ ಶತಮಾನದ ಆದಿಯಲ್ಲಿ ಕುಞಕ್ಕ ಎಂಬ ಹಿರಿಯಬ್ಬೆ ದೈವದ ವಸಯದ ಪ್ರಸಾದ (ದೈವ ಮಾಧ್ಯಮದ ಕೈಯಿಂದ ಯಜಮಾನರು ಇಡೀ ಕುಟುಂಬದ ಪ್ರತಿನಿಧಿಯಾಗಿ ಪಡೆಯುವ ಕೊಡಿಬಾಳೆ ಎಲೆ ಪ್ರಸಾದ) ಪಡೆಯುತ್ತಿದ್ದರು. ಇಲ್ಲಿಯ ಕೊಡಿ ಏರುವ (ಧ್ವಜಾರೋಹಣ) ಸಂದರ್ಭದಲ್ಲಿ ಬರ್ಕೆಯ ಮಹಿಳೆ ಹಾಜರಿರಬೇಕು. ಈ ಅಧಿಕಾರ ಪಾರಂಪರಿಕವಾಗಿ ಬಂದುದು. ಒಮ್ಮೆ ಮಹಿಳೆಯ ಅನುಪಸ್ಥಿತಿಯಲ್ಲಿ ಕೊಡಿಯನ್ನು ದೇವಳದಲ್ಲಿಯ ಸಂಬಧಪಟ್ಟವರು ಏರಿಸಿದಾಗ ಬರ್ಕೆಯ ಹಿರಿಯಬ್ಬೆ ಏರಿಸಿದ ಕೊಡಿಯನ್ನು ಇಳಿಸಿ

ಮತ್ತೆ ಏರಿಸಿದರೆಂದು ಬರ್ಕೆಯವರು ಹೇಳುತ್ತಾರೆ. ಒಂದು ಬಾರಿ ಬಿಟ್ಟರೆ ಮತ್ತೆ ಆ ಗೌರವ ಕೈ ತಪ್ಪುತ್ತದೆ. ಒಂದು ಕುಟುಂಬದಲ್ಲಿ ಮನೆಯ ಹಿರಿಯಬ್ಬೆ ಧಾರ್ಮಿಕ ಅಧಿಕಾರವನ್ನು ಕೂಡಾ ಪಡೆಯುತ್ತಿದ್ದಳು ಎಂಬುದನ್ನು ನಾವಿಲ್ಲಿ ತಿಳಿಯಬೇಕು. ಆದರೆ ಈಚಿನ ವರ್ಷಗಳಲ್ಲಿ ಮಹಿಳೆಯರನ್ನು ಆರಾಧನಾ ಸ್ಥಳಗಳಲ್ಲಿ ದೂರ ಇಡಲಾಗಿದೆ. (ಇಂದಿರಾ ಹೆಗ್ಗಡೆ, ೨೦೦೪, ಪುಟ ೨೧೩)

ಒಂದು ವಂಶದಲ್ಲಿ ಜವಾಬ್ದಾರಿಯುತ ಸಹೋದರ ವರ್ಗ ಇಲ್ಲದೆ ಹೋದಾಗ ಹಾಗೂ ಹಿರಿಯ ಹೆಣ್ಣು ಜವಾಬ್ದಾರಿ ನಿರ್ವಹಿಸಲು ಸೋತಾಗ ಅಂತಹ ಆಸ್ತಿ ಪಾಲಾಗುತ್ತದೆ. ಆಗ ಆಯಾ ಹೆಣ್ಣುಮಕ್ಕಳು ಬೇರೆ ಪಾಲು ಪಡೆದು ತನ್ನ ಗಂಡನ ಬೆಂಬಲದಿಂದ ತನ್ನ ಪಾಲಿನಲ್ಲಿ ಬೇರೆಯೇ ಮನೆ ಕಟ್ಟಿಸಿ ಗಂಡನೊಂದಿಗೆ ಬಾಳುತ್ತಾರೆ. ಅಂತಹವರ ಗಂಡ ತನ್ನ ಮನೆಯಲ್ಲಿ ಹಿರಿ ಮಗನಾಗಿ ಇರದಿದ್ದ ಸಂದರ್ಭದಲ್ಲಿ ಈ ರೀತಿ ಇರಲು ಅವಕಾಶ ಲಭ್ಯವಾಗುತ್ತದೆ. ಒಂದು ವಂಶದ ಹಿರಿಯ ಗಂಡು ಆ ವಂಶದ ಯಜಮಾನನಾಗಿ, ನಿರ್ದೇಶಕನಾಗಿ ಇರುವುದರಿಂದ ಉಳಿದ ಅವನ ಸಹೋದರರು ಇಲ್ಲಿ ಪ್ರಮುಖರಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ತನ್ನ ಹೆಂಡತಿಗೆ ದೊರೆತ ಭೂಮಿಯಲ್ಲಿ ಅವರು ಜೀವನ ಮಾಡುತ್ತಾರೆ. ಆದರೂ ತನ್ನ ತಾಯಿಮನೆಯ ನಿರಂತರ ಸಂಪರ್ಕದಲ್ಲಿ ಇರುತ್ತಾರೆ. ಅಲ್ಲಿ ಇರುವ ಹಿರಿಯಣ್ಣನಿಗೆ ಬೆಂಬಲವಾಗಿ ನಿಲ್ಲುತ್ತಾರೆ. ಹೆಣ್ಣು ಸಂತಾನದ ಮಕ್ಕಳು ಗಂಡಾಗಲಿ, ಹೆಣ್ಣಾಗಲಿ, ಅವರು ಆಸ್ತಿಗೆ ಹಾಗೂ ಇತರ ಸಾಂಪ್ರದಾಯಿಕ ಆಚರಣೆಗಳಿಗೆ ಉತ್ತರಾಧಿಕಾರಿಗಳು. ಆ ತಲೆಮಾರಿನ ನಂತರ ಹೆಣ್ಣು ಮಕ್ಕಳು ಉತ್ತರಾಧಿಕಾರಿಗಳಾಗುತ್ತಾರೆ.

ಸಾಮಾನ್ಯವಾಗಿ ಪರಂಪರೆಯಂತೆ ಆಸ್ತಿಯು ಮಹಿಳೆಯ ಹೆಸರಿನಲ್ಲಿ ಇದ್ದರೂ ಸಾಮಾಜಿಕ ವ್ಯವಸ್ಥೆ ಪುರುಷ ಪ್ರಧಾನವಾಗಿತ್ತು. ದೈನಂದಿನ ಜವಾಬ್ದಾರಿಗಳು ಆಡಳಿತಾತ್ಮಕ ವಿಚಾರಗಳು ಎಲ್ಲವೂ ಪುರುಷ ಪ್ರಧಾನವಾಗಿರುತ್ತವೆ. (ಇಂದಿರಾ ಹೆಗ್ಗಡೆ, ೨೦೦೪, ಪುಟ ೨೧೫)

ಮಹಿಳೆಯರ ಸ್ಥಾನಮಾನದ ಕುರಿತಾಗಿ ಹೇಳುವುದಾದರೆ ಬಂಟ ಸಮುದಾಯದಲ್ಲಿ ಒಂದೇ ರೂಢಿಗತ ನಿಯಮಗಳು ಇಲ್ಲ. ಆಯಾ ಗುತ್ತು ಬೀಡುಗಳ ಆಡಳಿತ ಅಧಿಕಾರಿಗಳು ಇಚ್ಛೆ ಪಟ್ಟಂತೆ ಬದಲಾಗುತ್ತಾ ಇರುತ್ತವೆ.

ಗುತ್ತಿನ ನಡಾವಳಿಗಳನ್ನು ಆ ಗ್ರಾಮದ ಜನರು ಅನುಸರಿಸುತ್ತಾರೆ. ಒಂದು ಗುತ್ತಿನ, ಗ್ರಾಮದ ಮಹಿಳೆಯರ ಸ್ಥಾನಮಾನಗಳು ಆ ಗುತ್ತಿನ ಯಜಮಾನನ ನಡವಳಿಕೆಯ ಮೇಲೆ ನಿರ್ಧಾರವಾಗುತ್ತವೆ.

ಕುಟುಂಬದ ಸ್ವರೂಪ: ಬಂಟ ಜನಾಂಗದಲ್ಲಿ ಒಬ್ಬಳು ಹೆಣ್ಣಿನ ಹೆಣ್ಣು ಮತ್ತು ಗಂಡು ಮಕ್ಕಳು ಎಲ್ಲರೂ ಆ ತಾಯಿಯ ಕುಟುಂಬ ಆಗುತ್ತಾರೆ. ಅಂದರೆ ಒಬ್ಬ ತಾಯಿಯ ಹೆಣ್ಣು ಮಕ್ಕಳ ಸಂತಾನದ ಮೂಲಕ ಗುರುತಿಸಿಕೊಳ್ಳುವ ಎಲ್ಲಾ ರಕ್ತ ಸಂಬಂಧಿಗಳು 'ಕುಟುಂಬ'ವೆಂದು ಪರಿಗಣಿತವಾಗುತ್ತವೆ. ತಲೆತಲೆಮಾರುಗಳಲ್ಲಿ ಹೆಣ್ಣು ಮಕ್ಕಳ ಮೂಲಕ ಮುಂದುವರಿದುಕೊಂಡು ಬಂದಿದ್ದ ಒಟ್ಟು ಸದಸ್ಯರು ಕುಟುಂಬದವರು ಆಗುತ್ತಾರೆ. ಇಂತಹ ಸದಸ್ಯರು ಅನಿವಾರ್ಯ ಕಾರಣಗಳಿಂದಾಗಿ ಇತರ ಪ್ರದೇಶಗಳಿಗೆ ವಲಸೆ ಹೋಗಿ ನೆಲಸಿ ಅಲ್ಲಿಯೇ ಅವರ ಸಂಖ್ಯೆ ವೃದ್ಧಿಸಿದರೂ ಅವರು ಕೂಡಾ ಮೂಲ ಕುಟುಂಬದ ಜತೆ ಗುರುತಿಸಿಕೊಳ್ಳುತ್ತಾರೆ. ಮನೆಗೆ ಮದುವೆಯಾಗಿ ಬಂದ ಸೊಸೆ (ಮಗನ ಮಡದಿ) ಈ ಕುಟುಂಬದ ಸದಸ್ಯೆ ಆಗುವುದಿಲ್ಲ. ಅದೇ ರೀತಿ ಮಗಳ ಗಂಡ ಅಳಿಯನೂ ಹೆಂಡತಿಯೂ ಕುಟುಂಬಕ್ಕೆ ಸೇರುವುದಿಲ್ಲ. ಮಗಳ ಗಂಡನಿಗೂ ಮಗನ ಹೆಂಡತಿಗೂ ಈ ಮನೆಯ ಯಾವ ಅಧಿಕಾರಗಳೂ ದತ್ತವಾಗುವುದಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ ಸ್ತ್ರೀ ಕೇಂದ್ರಿತವಾದ ಮಾತೃರೂಪಿ ಸಂಸ್ಕೃತಿಯನ್ನು ಹೊಂದಿರುವ ಬಂಟ ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನ ಪುರುಷ ಕೇಂದ್ರಿತ ಸಮಾಜಕ್ಕಿಂತ ತೀರಾ ಭಿನ್ನವಾಗಿದೆ. ಇಲ್ಲಿ ಹೆಣ್ಣಿನ ಹುಟ್ಟು ಮತ್ತು ಬದುಕು ಅತ್ಯಂತ ಅಗತ್ಯದ ಹಾಗೂ ಗೌರವದ ಸಂದರ್ಭವಾಗಿದ್ದು, ನಿರ್ಬಂಧವಿಲ್ಲದ ಸಹಜ ಮುಕ್ತ ಸ್ಥಿತಿಯದಾಗಿರುತ್ತದೆ. ಹೆಣ್ಣಿಗೆ ಒದಗಿರುವ ಆಸ್ತಿ, ವಂಶ, ಪರಂಪರೆ ಹಾಗೂ ಕುಟುಂಬದ ಉತ್ತರಾಧಿಕಾರತ್ವದ ಜೊತೆಗೆ ಬಂಧು ಸಮಾಜದಲ್ಲಿ ಲಭ್ಯವಾಗುವ ಸಮಷ್ಟಿ ಪ್ರಜ್ಞೆ ಹಾಗೂ ಸಾಮಾಜಿಕೀಕರಣಗಳು ಹೆಣ್ಣು ಶಕ್ತಿಯ ಮೂಲದ್ರವ್ಯವಾಗಿವೆ.

ಅಧ್ಯಾಯ ೩

ಡಾ. ನಾ. ಮೊಗಸಾಲೆ: ವ್ಯಕ್ತಿ – ಅಭಿವ್ಯಕ್ತಿ – ವೃತ್ತಿ – ಪ್ರವೃತ್ತಿ

೩.೧ ಕಾದಂಬರಿಕಾರ – ಡಾ. ನಾ. ಮೊಗಸಾಲೆ

೩.೨ ‘ಉಲ್ಲಂಘನೆ’ ಕಾದಂಬರಿಯ ಹಿನ್ನೆಲೆ, ಭೌಗೋಳಿಕ ವ್ಯಾಪ್ತಿ ಮತ್ತು ಆಶಯ

ಅಧ್ಯಾಯ ೩. ಡಾ. ನಾ. ಮೊಗಸಾಲೆ: ವ್ಯಕ್ತಿ – ಅಭಿವ್ಯಕ್ತಿ – ವೃತ್ತಿ – ಪ್ರವೃತ್ತಿ:

ಮೊಗಸಾಲೆಯವರು ೧೯೪೪ ಆಗಸ್ಟ್ ೨೭ರಂದು ಈಗ ಕೇರಳಕ್ಕೆ ಸೇರಿರುವ ಕಾಸರಗೋಡು ಜಿಲ್ಲೆಯ 'ಕೋಳ್ಯೂರು' ಎಂಬ ಕುಗ್ರಾಮದಲ್ಲಿ ಜನಿಸಿದರು. ಕೋಳ್ಯೂರು, ಕನ್ಯಾನ ಮತ್ತು ಉಡುಪಿಯಲ್ಲಿ ತಮ್ಮ ಅಧ್ಯಯನಗಳನ್ನು ಪೂರೈಸಿದ ಇವರು, ೧೯೬೫ರಿಂದ ಕಾರ್ಕಳ ತಾಲೂಕಿನ ಕಾಂತಾವರ ಎಂಬ ಹಳ್ಳಿಯಲ್ಲಿ ಆಯುರ್ವೇದ ವೈದ್ಯರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ೧೯೬೭ರಲ್ಲಿ ಕಾಂತಾವರದ ಕನ್ಯೆ ಪ್ರೇಮಲತಾರನ್ನು ಒಲಿದು ವಿವಾಹವಾದರು. ನಿರಂಜನ, ಸುದರ್ಶನ ಮತ್ತು ಪ್ರಸನ್ನರೆಂಬ ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳ ತುಂಬು ಸಂಸಾರ ಇವರದು.

ಕಾಂತಾವರ ಕ್ಷೇತ್ರಕ್ಕೆ ಮೊಗಸಾಲೆಯವರು ನೀಡಿರುವ ಕೊಡುಗೆ ಅಪೂರ್ವವಾದುದು. ಸಾಹಿತ್ಯ, ವೈದ್ಯಕೀಯ ಮತ್ತು ಸಾಹಿತ್ಯ ಸಂಘಟನೆಗಳಿಗೆ ಕಾಂತಾವರವನ್ನೇ ಕೇಂದ್ರವನ್ನಾಗಿಸಿ, ಇಡೀ ಕರ್ನಾಟಕಕ್ಕೇ ಈ ಪ್ರದೇಶವನ್ನು ಪರಿಚಯಿಸಿದವರು ಇವರು. ಅಯಸ್ಕಾಂತದಂತೆ ನಾಡಿನ ಮೂಲೆ ಮೂಲೆಗಳಿಂದ ಗಣ್ಯರನ್ನು ಈ ಪ್ರದೇಶಕ್ಕೆ ಆಕರ್ಷಿಸಿದವರು. ೧೯೬೫ರಲ್ಲಿ 'ಮಣ್ಣಿನ ಮಕ್ಕಳು' ಕಾದಂಬರಿಯ ಮೂಲಕ ಸಾಹಿತ್ಯ ಲೋಕಕ್ಕೆ ಪ್ರವೇಶಮಾಡಿದ ಇವರು ಬೇರೆ ಬೇರೆ ವಸ್ತುಗಳನ್ನೊಳಗೊಂಡಂತೆ ಹದಿನೈದು ಕಾದಂಬರಿಗಳನ್ನು ಬರೆದಿದ್ದಾರೆ. 'ಉಲ್ಲಂಘನೆ' ಎಂಬುದು ಅವರು ಬರೆದ ಇತ್ತೀಚಿನ ಕಾದಂಬರಿ. ೨೦೦೪ರಲ್ಲಿ ಪ್ರಕಟಗೊಂಡ ಈ ಕಾದಂಬರಿಯು ಶಿವಮೊಗ್ಗದ ಕರ್ನಾಟಕ ಸಂಘದ ೨೦೦೪ರ ಸಾಲಿನ 'ಕುವೆಂಪು ಕಾದಂಬರಿ ಪ್ರಶಸ್ತಿ'ಯನ್ನು ಪಡೆದುಕೊಳ್ಳುವ ಮೂಲಕ ತನ್ನ ಹಿರಿಮೆಯನ್ನು ಸಾರಿದೆ. ಇವರ 'ನನ್ನದಲ್ಲದ್ದು' ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಲಭಿಸಿದೆ. ಮಾತ್ರವಲ್ಲದೆ ಅವರ ಇತರ ಕೃತಿಗಳಿಗೆ ಬೇರೆ ಬೇರೆ ಬಹುಮಾನಗಳನ್ನು ಪಡೆದುಕೊಂಡಿದ್ದಾರೆ. ಎಂಟು ಕವನ ಸಂಕಲನಗಳು ನಾಲ್ಕು ಕಥಾಸಂಕಲನಗಳು ಮಾತ್ರವಲ್ಲದೆ ವೈದ್ಯಕೀಯಕ್ಕೆ ಸಂಬಂಧಪಟ್ಟ ಐದು ಕೃತಿಗಳನ್ನು ರಚಿಸಿದ್ದಾರೆ. ಅವರ 'ಅರೋಗ್ಯ ಅನಾರೋಗ್ಯದ ನಡುವೆ' ಕೃತಿಗೆ ಗುಲ್ಬರ್ಗದ ಡಾ. ಪಿ.ಎಸ್. ಶಂಕರ ಪ್ರತಿಷ್ಠಾನದ ಶ್ರೇಷ್ಠ ವೈದ್ಯ ಸಾಹಿತ್ಯ ಪ್ರಶಸ್ತಿಯು ೨೦೦೧ರಲ್ಲಿ ಲಭಿಸಿದೆ. ಒಂಭತ್ತು

ಸಂಪಾದನ ಕೃತಿಗಳನ್ನೂ, ನೂರಾರು ಬಿಡಿ ಲೇಖನಗಳನ್ನೂ ಬರೆದಿರುವ ಮೊಗಸಾಲೆಯವರು 'ಪ್ರಜಾಪ್ರಭುತ್ವ', 'ಕನ್ನಡ ಜನಾಂತರಂಗ', 'ಕರಾವಳಿ ಅಲೆ' ಪತ್ರಿಕೆಗಳಲ್ಲಿ ವೈದ್ಯಕೀಯ ಅಂಕಣಕಾರರಾಗಿಯೂ ಪ್ರಸಿದ್ಧಿ ಪಡೆದಿದ್ದಾರೆ. 'ಬಯಲಬೆಟ್ಟ' (೨೦೦೫) ಎಂಬುದು ಇವರ ಆತ್ಮಚರಿತ್ರೆಯನ್ನೊಳಗೊಂಡ ಕೃತಿ. ಈ ಕೃತಿಯನ್ನು ಮತ್ತು 'ತೊಟ್ಟಿ' ಕಾದಂಬರಿಯನ್ನು ಮಂಗಳೂರು ವಿಶ್ವವಿದ್ಯಾನಿಲಯವು ಪಠ್ಯವಾಗಿ ಕೂಡಾ ಮಾನ್ಯ ಮಾಡಿದೆ.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಮೊಗಸಾಲೆಯವರು ಕಡೆಂಗೋಡ್ಲು ಪ್ರಶಸ್ತಿ, ಉಗ್ರಾಣ ಪ್ರಶಸ್ತಿ, ಬಿ.ಎಚ್. ಶ್ರೀಧರ ಪ್ರಶಸ್ತಿ, ದಿನಕರ ದೇಸಾಯಿ ಪ್ರಶಸ್ತಿ, ಪೆರ್ಲ ಪ್ರಶಸ್ತಿಗಳನ್ನೂ ಪಡೆದುಕೊಂಡಿದ್ದಾರೆ. ಇವರ ಅನೇಕ ಕವನಗಳು ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಿಗೆ ಅನುವಾದಗೊಂಡಿವೆ. ೧೯೯೫ರಲ್ಲಿ 'ಮೊಗಸಾಲೆ' ಮತ್ತು ೨೦೦೭ರಲ್ಲಿ 'ಅಯಸ್ಕಾಂತಾವರ' ಎಂಬ ಅಭಿನಂದನ ಗ್ರಂಥಗಳ ರೂಪದಲ್ಲಿ ಮೊಗಸಾಲೆಯವರಿಗೆ ಅವರ ಅಭಿಮಾನಿಗಳಿಂದ ಗೌರವ ಸಂದಿದೆ.

ಮೊಗಸಾಲೆಯವರು ೧೯೬೬ರಲ್ಲಿ ಕಾಂತಾವರದಲ್ಲಿ ಹುಟ್ಟುಹಾಕಿದ 'ರೈತ ಯುವಕ ವೃಂದ'ದ ಮೂಲಕ ಸಂಘಟನ ಕ್ಷೇತ್ರಕ್ಕೆ ಧುಮುಕಿ ಮುಂದೆ 'ಕಾಂತಾವರ ಕನ್ನಡ ಸಂಘ' (೧೯೭೫) ಮತ್ತು ಮೂಡುಬಿದಿರೆಯ 'ವರ್ಧಮಾನ ಪ್ರಶಸ್ತಿ' (೧೯೮೯)ಗಳ ಸ್ಥಾಪಕರು ಮಾತ್ರವಲ್ಲ ಮಾರ್ಗದರ್ಶಕರಾಗಿಯೂ ಅಚ್ಚರಿ ಪಡುವಂತಹ ರೀತಿಯಲ್ಲಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಕನ್ನಡ ಸಂಘದ 'ಮುದ್ದಣ ಕಾವ್ಯ ಪ್ರಶಸ್ತಿ', 'ಕಾಂತಾವರ ಪುರಸ್ಕಾರ', 'ಸುವರ್ಣರಂಗ ಸನ್ಮಾನ್' ಮತ್ತು 'ವರ್ಧಮಾನ ಪ್ರಶಸ್ತಿ ಪೀಠ'ದಿಂದ 'ವರ್ಧಮಾನ ಸಾಹಿತ್ಯ ಪುರಸ್ಕಾರ'ಗಳು ನಾಡಿನ ಪ್ರತಿಷ್ಠಿತ ಪ್ರಶಸ್ತಿಗಳು ಎಂದು ಮಾನ್ಯವಾಗಿವೆ. ಕಾಂತಾವರ ಕನ್ನಡ ಸಂಘದಿಂದ ಐವತ್ತಕ್ಕೂ ಮಿಕ್ಕಿ ಗ್ರಂಥಗಳ ಪ್ರಕಟಣೆ ಮಾಡಿದ್ದಾರೆ. 'ನಾಡಿಗೆ ನಮಸ್ಕಾರ' ಮಾಲಿಕೆಯಲ್ಲಿ ಅವಿಭಜಿತ ದ.ಕ. ಜಿಲ್ಲೆಗೆ ಗಣನೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕೊಡುಗೆಯಿತ್ತ ಅನೇಕ ಸಾಧಕರನ್ನು ಗುರುತಿಸಿ ಪರಿಚಯಿಸುವ ಗ್ರಂಥಗಳ ಪ್ರಕಾಶನವನ್ನು ನೆರವೇರಿಸಿದ್ದಾರೆ. ೨೦೦೩ರಲ್ಲಿ ಕರ್ನಾಟಕದ ಏಕೀಕರಣದ ನೇತಾರರಾಗಿದ್ದ ಕಾಂತಾವರ

ಮೂಲದ ಕೆ.ಜಿ. ಜಿನರಾಜ ಹೆಗ್ಡೆ ಸ್ಮಾರಕ 'ಕನ್ನಡ ಭವನ'ವನ್ನು ಸರ್ಕಾರದ ಧನ ಸಹಾಯದೊಂದಿಗೆ ನಿರ್ಮಿಸಿದ್ದಾರೆ. ಪಿ.ಎಚ್‌ಡಿ., ಎಂ.ಫಿಲ್. ಪದವಿಗಳ ಅಧ್ಯಯನಕ್ಕೂ ಇವರ ಸಾಹಿತ್ಯವನ್ನು ಅಳವಡಿಸಿಕೊಂಡಿರುವುದು ಇವರ ಸಾಹಿತ್ಯಕ ಹಿರಿಮೆಯನ್ನು ವ್ಯಕ್ತಪಡಿಸುತ್ತದೆ. ಒಟ್ಟನಲ್ಲಿ ಸಾಹಿತಿಗಳಾಗಿ, ಚಿಂತಕರಾಗಿ, ವೈದ್ಯಕೀಯ ಲೇಖಕರಾಗಿ, ಸಂಶೋಧಕರಾಗಿ ಇವರು ಕನ್ನಡಕ್ಕೆ ಅಮೂಲ್ಯವಾದ ಕೊಡುಗೆಗಳನ್ನು ನೀಡಿದ್ದಾರೆ.

ಮೊಗಸಾಲೆಯವರು ಉಡುಪಿಯ ಆಯುರ್ವೇದ ಕಾಲೇಜಿನಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಪೂರೈಸಿದರು. ವೈದ್ಯಕೀಯ ಪದವಿ ಪಡೆದು ಬಂದ ಮೊದಲಲ್ಲಿ ಔಷಧಿಗಾಗಿ ಜನ ಅವರ ಮನೆಗೆ ಬರತೊಡಗಿದರು. ಬಹಳ ಮಡಿವಂತಿಕೆಯನ್ನು ಕಾಪಾಡಿಕೊಂಡು ಬಂದಿದ್ದ ಅವರ ಅತ್ತೆ (ಪುಟ್ಟತ್ತೆ) ಕೆಳವರ್ಗದವರನ್ನು ಸ್ಪರ್ಶಿಸಿ ರೋಗ ಪರೀಕ್ಷೆ ಮಾಡಲು ಅಡ್ಡಿ ಪಡಿಸಿದರು. ಮನೆಯ ಹೊರಗಡೆ ಬೆಂಚು ಹಾಕಿ ಅವರ ಸಲಹೆಯಂತೆ ಮನೆಯ ಹೊರಗಡೆಯೇ ರೋಗಿಗಳಿಗೆ ಶುಶ್ರೂಷೆ ನೀಡುವಂತಾಯಿತು. ಅವರು ನೀಡುವ ಹಣವನ್ನು ಬೆಂಚಿನಲ್ಲೇ ಇಟ್ಟು ಸ್ವೀಕರಿಸಬೇಕಿತ್ತು. ಆದರೆ ಮೊಗಸಾಲೆಯವರ ಮನಸ್ಸು ಇದನ್ನು ಒಪ್ಪಲಿಲ್ಲ. ಮನೆಮಂದಿಯೆಲ್ಲರ ಅಭಿಪ್ರಾಯವೂ ಅತ್ತೆಯ ಅಭಿಪ್ರಾಯವೇ ಆಗಿತ್ತು. ಈ ಸಂದರ್ಭದಲ್ಲಿ ಅವರು ಇಂತಹ ಕಂದಾಚಾರಗಳಾಚೆ ಬರಬೇಕೆಂದು ಸಂಕಲ್ಪ ಮಾಡಿದರು. ಜಾತಿಯೆಂಬ ಅಡ್ಡ ಗೋಡೆಯು ನಮ್ಮ ಮಧ್ಯೆ ಯಾವತ್ತೂ ಇರಕೂಡದೆಂಬ ನಿಲುವು ಅವರದು.

ಮುಂದೆ ೧೯೬೫ರಲ್ಲಿ ಮೊಗಸಾಲೆಯವರು ಕಾರ್ಕಳದ ಕಾಂತಾವರದಲ್ಲಿ ಹೊಸದಾಗಿ ಆರಂಭವಾದ ಆಯುರ್ವೇದ ಆಸ್ಪತ್ರೆಗೆ ವೈದ್ಯರಾಗಿ ಆಯ್ಕೆಯಾದರು. ಆ ಪರಿಸರದಲ್ಲೇ ವಾಸ್ತವ್ಯವಿದ್ದ ಶೀನ ಶೆಟ್ಟರು ಬಹಳ ಮುತುವರ್ಜಿಯಿಂದ ಅವರನ್ನು ನೋಡಿಕೊಂಡರು. ಮುಂದೆ ಪ್ರೇಮಲತಾರನ್ನು ವಿವಾಹವಾದ ಬಳಿಕ ತನ್ನ ವೃತ್ತಿಯನ್ನು ಮನಃಪೂರ್ವಕವಾಗಿ ಮಾಡಲು ಅವರ ಸಂಪೂರ್ಣ ಸಹಕಾರ ದೊರಕಿತು. ಇಂದಿಗೂ ಜಾತಿ–ಮತಗಳೆನ್ನದೆ, ಮೇಲು–ಕೀಳೆನ್ನದೆ ಅವರ ಮನೆಯಲ್ಲೇ ಅದೆಷ್ಟೋ ಜನ ತಮ್ಮ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುತ್ತಾರೆ.

ಮೊಗಸಾಲೆಯವರ ಪ್ರವೃತ್ತಿಗಳು ಹಲವು. ಅವುಗಳಲ್ಲಿ ಕೆಲವಕ್ಕೆ ಮಾತ್ರ ಅವರು ಮೂರ್ತರೂಪವನ್ನು ಕೊಟ್ಟಿದ್ದಾರೆ. ಚಿಕ್ಕವರಿರುವಾಗಲೇ ಅವರಿಗೆ ಓದುವ ಹುಚ್ಚು ಬಹಳ ಹೆಚ್ಚು. ಪ್ರೌಢಶಾಲೆಯಲ್ಲಿದ್ದಾಗಲೇ ಬೇಂದ್ರೆ, ಕುವೆಂಪು ಮೊದಲಾದವರ ಕವನ ಸಂಕಲನ, ಶ್ರೀನಿವಾಸ ರಾವ್ ಕೊರಟಿ, ಜನಾರ್ದನ ಗುರ್ಕಾರ್, ಅ.ನ.ಕೃ., ತ.ರಾ.ಸು., ನಿರಂಜನ, ಶಿವರಾಮ ಕಾರಂತ ಮೊದಲಾದವರ ಕಾದಂಬರಿಗಳನ್ನು ನೋಡಿ ಖುಷಿಪಡುತ್ತಿದ್ದರು. ಹೀಗೆ ಬಾಲ್ಯದಿಂದಲೇ ಕವಿತೆ ಬರೆಯಬೇಕೆಂಬ ಆಸಕ್ತಿ ಅವರಲ್ಲಿ ಉತ್ಕಟವಾಗಿತ್ತು. ಮುಂದೆ ಅವರು ಉಡುಪಿಯಲ್ಲಿ ಆಯುರ್ವೇದ ವೈದ್ಯಕೀಯ ಅಭ್ಯಾಸ ಮಾಡುತ್ತಿದ್ದಾಗಲೂ ಅವರನ್ನು ಅಲ್ಲಿಯ ಸ್ಥಳೀಯ ಗ್ರಂಥಾಲಯ ವಿಶೇಷವಾಗಿ ಆಕರ್ಷಿಸಿತು. 'ರಥಬೀದಿ ಗೆಳೆಯರು' ಎನ್ನುವ ಸಾಹಿತ್ಯ ಕೂಟದ ಒಡನಾಟದ ಚರ್ಚೆ, ವಿಚಾರ ಮಂಥನಗಳಿಂದ ಅವರಲ್ಲಿ ಬರವಣಿಗೆಯ ಪ್ರಕ್ರಿಯೆ ಹೆಚ್ಚಾಯಿತು. ಕವಿತೆಗಳನ್ನು ಬರೆದು ಪತ್ರಿಕೆಗೆ ಕಳುಹಿಸಿದರು. ಯುಗಪುರುಷ, ವಿಕ್ರಮ, ಕೈಲಾಸ, ಗೋಕುಲ, ನವಭಾರತ, ಭವ್ಯವಾಣಿ ಮೊದಲಾದ ಪತ್ರಿಕೆಗಳಲ್ಲಿ ಇವರ ಕವನಗಳು ಪ್ರಕಟಗೊಂಡವು. ಅಲ್ಲದೆ ಕತೆಗಳನ್ನು, ಲೇಖನಗಳನ್ನು ಬರೆದು ಪತ್ರಿಕೆಯಲ್ಲಿ ಪ್ರಕಟಿಸಿದರು.

ಈ ರೀತಿಯಲ್ಲಿ ಆರಂಭಗೊಂಡ ಮೊಗಸಾಲೆಯವರ ಸಾಹಿತ್ಯ ವೃಕ್ಷ ಹೊಸ ಹೊಸ ಕವಲುಗಳೊಂದಿಗೆ ನಾಡಿನೆಲ್ಲೆಡೆ ತನ್ನ ಹಸ್ತವನ್ನು ಚಾಚಿಕೊಂಡಿದೆ. ಕಾವ್ಯ ಮತ್ತು ಕಾದಂಬರಿ ಪ್ರಕಾರಗಳನ್ನು ವಿಶೇಷವಾಗಿ ನೆಚ್ಚಿಕೊಂಡ ಇವರು ಈ ಎರಡೂ ಕ್ಷೇತ್ರಗಳಲ್ಲಿ ಗಟ್ಟಿಯಾದ ಕೃತಿಗಳನ್ನೇ ನೀಡಿದ್ದಾರೆ. ವೈದ್ಯ ವೃತ್ತಿಯೊಂದಿಗೆ ಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಯಲು ಪರಿಶ್ರಮಿಸಿದ ಅವರು ವೈದ್ಯ ವಿಜ್ಞಾನದ ಕೃತಿಗಳನ್ನೂ ಕನ್ನಡಕ್ಕೆ ಕೊಟ್ಟು ಜನಪ್ರಿಯತೆಯನ್ನು ಗಳಿಸಿಕೊಂಡಿದ್ದಾರೆ. ಕಾಂತಾವರದ ಕನ್ನಡ ಸಂಘದ ಮೂಲಕ ಕನ್ನಡಿಗರನ್ನು ಒಗ್ಗೂಡಿಸುವ ಮತ್ತು ಕನ್ನಡವನ್ನು ಕಟ್ಟುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಮಾನವೀಯತೆಗೆ ವಿಶೇಷ ಒತ್ತುಕೊಡುವ ಇವರು ಬರಡಾದ ನಮ್ಮ ಸಮಾಜದಲ್ಲಿ ಸಾಹಿತ್ಯವು ಮತ್ತೆ ಮನುಷ್ಯತ್ವವನ್ನು ಸೃಷ್ಟಿಸಬಲ್ಲದು ಎಂಬ ನಿಲುವನ್ನು ಇರಿಸಿಕೊಂಡವರು. ಹೀಗೆ ವೃತ್ತಿ ಹಾಗೂ ಪ್ರವೃತ್ತಿಗಳೆರಡರಲ್ಲೂ ಅಸಾಧಾರಣವಾದ ಸೇವೆಯನ್ನು ಮಾಡಿ ಜನಮಾನಸದಲ್ಲಿ ಬಹಳ ವಿಶಿಷ್ಟವಾದ ಛಾಪನ್ನು ಮೂಡಿಸಿದವರು ಮೊಗಸಾಲೆಯವರು.

ಕಾದಂಬರಿಕಾರ – ಡಾ. ನಾ. ಮೊಗಸಾಲೆ:

ಮೊಗಸಾಲೆಯವರು ವಾಸ್ತವದ ಘಟನೆಗಳನ್ನು, ತನ್ನ ಜೀವನದಲ್ಲಿ ಅನುಭವಿಸಿದ ನಾನಾ ವಿವರಗಳನ್ನು ಕಾದಂಬರಿಯಲ್ಲಿ ಹೆಣೆದಿದ್ದಾರೆ. ಒಂದು ತಾತ್ವಿಕ ನೆಲೆಯಲ್ಲಿ ವಿಚಾರಗಳನ್ನು ಪೋಣಿಸುವ ಮೂಲಕ ಸಮಕಾಲೀನ ವಿದ್ಯಮಾನಕ್ಕೆ ಅವರು ಸ್ಪಂದಿಸುತ್ತಾರೆ. ಅವರ ಪ್ರತಿಯೊಂದು ಕಾದಂಬರಿಯೂ ಭಿನ್ನ ಭಿನ್ನವಾದ ವಸ್ತುಗಳೊಂದಿಗೆ ಅವರ ಆಳವಾದ ಅನುಭವವನ್ನು ತೆರೆದಿಡುತ್ತದೆ. ಅವರ ವೈಯಕ್ತಿಕ ಅಭಿರುಚಿಗಳೊಂದಿಗೆ, ಸಮಸ್ಯೆಗಳೊಂದಿಗೆ ಸಾಮಾಜಿಕವಾದ ಸಮಸ್ಯೆಗಳನ್ನು ತೆರೆದಿಡುವ ಕಾದಂಬರಿಗಳಿವು. ಒಂದು ರೀತಿಯ ಚಿಕಿತ್ಸಕ ದೃಷ್ಟಿಕೋನಗಳು ಇಲ್ಲಿವೆ. ಪ್ರಾಯಶಃ ವೈದ್ಯ ವೃತ್ತಿಯಿಂದ ಪ್ರೇರಿತಗೊಂಡು ಈ ರೀತಿಯ ಚಿಂತನೆಗೆ ಸಾಧ್ಯವಾಯಿತೋ ಎನ್ನುವಂತೆ ಸಮಾಜದಲ್ಲಿ ಒಬ್ಬ ವ್ಯಕ್ತಿ ಹೇಗಿರಬೇಕು ಎನ್ನುವುದನ್ನು ತಮ್ಮ ಕಾದಂಬರಿಗಳಲ್ಲಿ ತಿಳಿಯಪಡಿಸುತ್ತಾರೆ.

ಮೊಗಸಾಲೆಯವರ ಲೇಖನಿಯಿಂದ ಮೂಡಿಬಂದ ಕಾದಂಬರಿಗಳ ಸಂಖ್ಯೆ ಒಟ್ಟು ಹದಿನೈದು. ಅವು ಯಾವುವೆಂದರೆ ‘ಮಣ್ಣಿನ ಮಕ್ಕಳು’ (೧೯೬೫), ‘ಅನಂತ’ (೧೯೬೮), ‘ಕನಸಿನ ಬಳ್ಳಿ’ (೧೯೭೦), ‘ನನ್ನದಲ್ಲದ್ದು’ (೧೯೭೭), ‘ಪಲ್ಲಟ’ (೧೯೭೯), ‘ಹದ್ದು’ (೧೯೮೦), ‘ಪ್ರಕೃತಿ’ (೧೯೮೪), ‘ನೆಲ ಮುಗಿಲುಗಳ ಮಧ್ಯೆ’ (೧೯೮೫), ‘ದಿಗಂತ’ (೧೯೮೮), ‘ದೃಷ್ಟಿ’ (೧೯೯೧), ‘ಉಪ್ಪು’ (೧೯೯೫), ‘ತೊಟ್ಟಿ’ (೧೯೯೭), ‘ಪಂಥ’ (೨೦೦೧), ‘ಅರ್ಥ’ (೨೦೦೨) ಮತ್ತು ‘ಉಲ್ಲಂಘನೆ’ (೨೦೦೮).

ಕಾದಂಬರಿ ಸೃಷ್ಟಿಯ ಕುರಿತಾಗಿ ಮೊಗಸಾಲೆಯವರು ತಮ್ಮ ಅಭಿಪ್ರಾಯವನ್ನು ಈ ರೀತಿಯಲ್ಲಿ ವ್ಯಕ್ತಪಡಿಸುತ್ತಾರೆ. “ಸಾಹಿತ್ಯದ ಸ್ವರೂಪ ಹೀಗೇ ಇರಬೇಕೆಂದು ನಾನು ಯಾವುದಕ್ಕೂ ಅಂಟಿಕೊಂಡಿಲ್ಲ. ನನ್ನನ್ನು ಕಾಡುವ ಮಾನವೀಯ ಸಮಸ್ಯೆಗಳನ್ನು ಮಾನವೀಯ ಪರಿಸರದಲ್ಲಿ ಚಿತ್ರಿಸುವುದಷ್ಟೇ ನನಗೆ ಗೊತ್ತು. ನನಗೆ ತಿಳಿದಂತೆ ಗಂಡು – ಹೆಣ್ಣು ಅಥವಾ ಮನುಷ್ಯ – ಹಣ ಇವುಗಳ ಸಂಬಂಧಗಳೇ ಎಲ್ಲ ಸಮಸ್ಯೆಗಳ ಮೂಲ. ಇವುಗಳ ಮುಂದೆ ಜಾತಿ ಧರ್ಮಗಳು ಗೌಣವಾಗುತ್ತವೆ” (‘ಹದ್ದು’ ಕಾದಂಬರಿಯ ‘ಲೇಖಕರ ಮಾತು’)

ಮೊಗಸಾಲೆಯವರ ಕಾದಂಬರಿಗಳಲ್ಲಿ ಕಲ್ಪನೆಗಳಿಗಿಂತ ಹೆಚ್ಚಾಗಿ ನಮ್ಮ ದೈನಂದಿನ ಬದುಕಿನ ಪ್ರಸಂಗಗಳ ನೈಜ ನಿರೂಪಣೆಗಳೇ ಹೆಚ್ಚು ಕಂಡು ಬರುತ್ತವೆ. ಕಾದಂಬರಿಯ ಭಾಷೆಯಲ್ಲೂ ಪ್ರಾದೇಶಿಕತೆ ಕಂಡು ಬರುತ್ತದೆ. ಸಿ. ಎನ್. ರಾಮಚಂದ್ರನ್‌ರವರು, "ಮೊಗಸಾಲೆಯವರ ಮೇಲೆ ಶಿವರಾಮ ಕಾರಂತರು ಮತ್ತು ತೇಜಸ್ವಿಯವರ ಪ್ರಭಾವ ಇದೆ" ಎಂದು ಅಭಿಪ್ರಾಯ ಪಡುತ್ತಾರೆ. (ಮಾಧವ ಮೂಡುಕೊಣಾಜೆಯವರ ಖಾಸಗಿ ಸಂದರ್ಶನ, ದಿನಾಂಕ ೨೪.೧೧.೨೦೦೪)

ಕೆ. ಚಿನ್ನಪ್ಪ ಗೌಡರು ಮೊಗಸಾಲೆಯವರ ಕಾದಂಬರಿ ರಚನೆಯ ಕುರಿತು ಹೀಗೆನ್ನುತ್ತಾರೆ "ಶಿವರಾಮ ಕಾರಂತರನ್ನು ಬಿಟ್ಟರೆ ಕರಾವಳಿ ಭಾಗದಲ್ಲಿ ಕಾದಂಬರಿ ಪ್ರಕಾರವನ್ನು ಬರವಣಿಗೆಯ ಪರಂಪರೆಯಾಗಿ ರೂಢಿಸಿಕೊಂಡವರು ಮೊಗಸಾಲೆಯವರು. ವಸ್ತುವಿನಲ್ಲಿ ಸಾಕಷ್ಟು ವೈವಿಧ್ಯತೆಯನ್ನು ತುಂಬಿಕೊಂಡಿರುವ ಅವರ ಕೃತಿಗಳು ವ್ಯಕ್ತಿ ನೆಲೆಯ ಸಂಘರ್ಷ, ವ್ಯವಸ್ಥೆಗಳ ಸಂಘರ್ಷಗಳ ಮೂಲಕ ಸಾಹಿತ್ಯಕ ರಚನೆಗಳಲ್ಲಿನ ಸಂಘರ್ಷವನ್ನು ಬಿಂಬಿಸುತ್ತದೆ. ಕಾರಂತರ ಪ್ರಭಾವ ಮತ್ತು ನವ್ಯದ ಪ್ರಭಾವವನ್ನು ಹೊಂದಿರುವ ಅವರು ಪ್ರಜ್ಞಾ ಪ್ರವಾಹ ತಂತ್ರ, ಫ್ಲಾಶ್‌ಬ್ಯಾಕ್ ತಂತ್ರಗಳನ್ನು ಬಳಸಿಕೊಂಡಿದ್ದಾರೆ. ಅವರ ಕಾದಂಬರಿಗಳಲ್ಲಿ ಪ್ರಾದೇಶಿಕ ಭಾಷೆ, ಸಂಸ್ಕೃತಿ, ದಕ್ಷಿಣ ಕನ್ನಡ ಜಿಲ್ಲೆಯ ಬಹು ಸಂಸ್ಕೃತಿಯ ವಿಚಾರಗಳನ್ನು ಎತ್ತಿಕೊಂಡಿದ್ದಾರೆ" (ಮಾಧವ ಮೂಡುಕೊಣಾಜೆಯವರ ಖಾಸಗಿ ಸಂದರ್ಶನ, ದಿನಾಂಕ ೨೦.೧೧.೨೦೦೪)

ಮೊಗಸಾಲೆಯವರು ವಿವಿಧ ಮತ, ಧರ್ಮ, ಜಾತಿಗಳ ಬಗ್ಗೆ ಅಪಾರವಾದ ಗೌರವ ನಂಬಿಕೆಗಳನ್ನು ಇಟ್ಟುಕೊಂಡವರು. ಎಲ್ಲರೂ ಸೌಹಾರ್ದತೆಯಿಂದ ಒಬ್ಬರನ್ನೊಬ್ಬರು ಪರಸ್ಪರ ಅರ್ಥಮಾಡಿಕೊಂಡು ಬದುಕಿದಾಗ ಮಾತ್ರ ಜೀವನಕ್ಕೆ ಅರ್ಥ ಬರುತ್ತದೆ. ಅವರ ಬೇರೆ ಬೇರೆ ಕಾದಂಬರಿಗಳಲ್ಲಿ ಈ ಕುರಿತಾದ ಚಿಂತನೆಯನ್ನು ಮಾಡುತ್ತಾರೆ. ಅವರ 'ಪಂಥ' ಕಾದಂಬರಿಯಲ್ಲಿ ಜಾತೀಯ, ಮತೀಯ ಸಂಘಟನೆಯನ್ನು ಕಾಣಬಹುದು. 'ಉಲ್ಲಂಘನೆ' ಕಾದಂಬರಿಯಲ್ಲಿಯೂ ಸರ್ವಧರ್ಮ ಸಮನ್ವಯದ ದೃಷ್ಟಿಕೋನವಿದೆ. ಪ್ರತಿಯೊಂದು ಧರ್ಮದವರಿಗೂ

ಬದುಕುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಾಗ ಮಾತ್ರ ಒಂದು ಸಮಾಜ ಬೆಳೆಯಲು ಸಾಧ್ಯ ಎಂಬ ಆಶಯ ಅವರದು.

ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬೆಳೆದಂತಹ ಮೊಗಸಾಲೆಯವರು ಪರಿಸರದ ಜೊತೆಗೆ ಆತ್ಮೀಯವಾದ ಸಂಬಂಧವನ್ನು ಬೆಳೆಸಿಕೊಂಡವರು. ಹಚ್ಚ ಹಸಿರು ಗಿಡ–ಮರಗಳಿಂದ, ಬೆಟ್ಟ–ಗುಡ್ಡಗಳಿಂದ, ಭತ್ತದ ಬೆಳೆಯಿಂದ ಕಂಗೊಳಿಸುತ್ತಿದ್ದ ನಮ್ಮ ಹಳ್ಳಿಗಳು ಇಂದು ನಗರೀಕರಣದ ಕಾರಣದಿಂದ ನಶಿಸಿ ಹೋಗುತ್ತಿವೆಯಲ್ಲಾ ಎಂಬ ದೊಡ್ಡ ಕೊರಗು ಅವರಿಗಿದೆ. ನಮ್ಮ ಕಣ್ಣೆದುರೇ ಭೂಮಿ, ಆಕಾಶ, ನೀರು, ಗಾಳಿ ಎಲ್ಲವೂ ಮಾಲಿನ್ಯಕ್ಕೆ ಒಳಗಾಗುತ್ತಿವೆ. ಇದು ಪರಿಸರ ಮಾತ್ರವಲ್ಲ ಮಾನವನ ಭಾವನಾತ್ಮಕ ಸಂವೇದನೆಗಳನ್ನು ಕೂಡಾ ಬದಲಾಯಿಸುತ್ತದೆ. ಗ್ರಾಮ ಮಟ್ಟದಲ್ಲೇ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗಬೇಕೆನ್ನುವ ಆಶಯ ಅವರದು.

ಮೊಗಸಾಲೆಯವರು ಮಾನವೀಯತೆಗೆ ವಿಶೇಷವಾದ ಬೆಲೆ ಕೊಡುವವರು. ‘ಮಾನವ ಜಾತಿ ತಾನೊಂದೆ ವಲಂ’ ಎಂಬ ಮಾತಿನಂತೆ ನಮ್ಮ ಸಮಾಜದ ದೊಡ್ಡ ಪಿಡುಗಾಗಿರುವ ‘ಜಾತಿ ಪದ್ಧತಿ’ಯ ಕುರಿತಾಗಿ ತಮ್ಮ ಕೃತಿಗಳಲ್ಲಿ ಧ್ವನಿಯೆತ್ತುತ್ತಾರೆ. ದಲಿತ ಮತ್ತು ಶೋಷಿತರ, ಅಬ್ರಾಹ್ಮಣರ ಪರವಾಗಿ ಅವರು ನಿಲ್ಲುತ್ತಾರೆ. ತನ್ನ ವೃತ್ತಿ ಜೀವನದಲ್ಲಿಯೂ ಇದನ್ನು ಪರಿಪಾಲಿಸುತ್ತಾ ಬಂದಿದ್ದಾರೆ. ಸಾಹಿತ್ಯದಲ್ಲಿಯೂ ಸಂದರ್ಭ ಸಿಕ್ಕಿದಾಗಲೆಲ್ಲಾ ಅಸಮಾನತೆಯ ವಿರುದ್ಧವಾದ ಧೋರಣೆಗಳನ್ನು ಎತ್ತಿ ಹಿಡಿಯುತ್ತಾರೆ. ಶ್ರೀಮಂತರ ದಬ್ಬಾಳಿಕೆಗೆ ಒಳಗಾದ ಬಡವರ ಕುರಿತಾಗಿಯೂ ಇವರಿಗೆ ಅತೀವ ಅನುಕಂಪವಿದೆ. ಸಾಮಾನ್ಯ ಜನರ ನಡುವೆಯೇ ಜೀವನವನ್ನು ನಡೆಸಿರುವ ಮೊಗಸಾಲೆಯವರ ಗ್ರಾಮೀಣ ಜನರ ಧ್ವನಿ ಅವರ ಕೃತಿಗಳಲ್ಲಿ ಒಡಮೂಡಿದೆ. “ಪ್ರಾದೇಶಿಕತೆ, ಗ್ರಾಮ್ಯತೆ ಮೊಗಸಾಲೆಯವರ ಅನಿವಾರ್ಯತೆ ಹೇಗೋ ಅದು ಅವರ ಆಸ್ತಿ ಹಾಗೂ ಶಕ್ತಿ ಕೂಡಾ” (ಮಾಧವ ಮೂಡುಕೊಣಾಜೆ, ೨೦೦೬, ಪುಟ ೧೫೮) ಎಂಬ ಮಾಧವರ ಅಭಿಪ್ರಾಯದಂತೆ ಗ್ರಾಮೀಣ ಪ್ರದೇಶದ ಹಲವಾರು ವಿಚಾರಗಳನ್ನು ಇವರು ತಮ್ಮ ಕೃತಿಗಳಲ್ಲಿ ಪಡಿಮೂಡಿಸಿದ್ದಾರೆ.

'ಉಲ್ಲಂಘನೆ' ಕಾದಂಬರಿಯಲ್ಲಿ ಕಾದಂಬರಿಕಾರರು ಭೂಮಸೂದೆ ಕಾಯಿದೆ ಮತ್ತು ವಸಾಹತುಶಾಹಿಯ ಪರಿಣಾಮದಿಂದಾದ ನಾನಾ ರೀತಿಯ ಪರಿವರ್ತನೆಗಳ ಕುರಿತ ವಿವರಗಳನ್ನು ನೀಡುತ್ತಾರೆ. ಗುತ್ತಿನ ಮನೆಯು ಎದುರಿಸುವ ಸಮಸ್ಯೆಗಳು ಮಾತ್ರವಲ್ಲ ಕರಾವಳಿ ಪ್ರದೇಶಗಳಲ್ಲಿ ವಾಸಿಸುವ ನಾನಾ ಜನಸಮೂಹಗಳ ಜೀವನದಲ್ಲಾದ ಪರಿವರ್ತನೆಯೂ ಇಲ್ಲಿದೆ. ತಮ್ಮ ಇತರ ಕಾದಂಬರಿಗಳಲ್ಲಿಯೂ ಭೂಮಸೂದೆ ಕುರಿತು ಚಿತ್ರಿಸುತ್ತಾರೆ. ಅವರ ಮೊದಲ ಕಾದಂಬರಿಯಾದ 'ಮಣ್ಣಿನ ಮಕ್ಕಳು' ಕೃತಿಯಲ್ಲಿ ಈ ಕಾಯಿದೆಯು ಮಾನವ ಸಂಬಂಧಗಳಲ್ಲಿ ಎಬ್ಬಿಸುವ ತಲ್ಲಣಗಳನ್ನು ಚಿತ್ರಿಸಿದ್ದಾರೆ. ಅದೇ ರೀತಿ 'ಪಲ್ಲಟ' ಕಾದಂಬರಿಯಲ್ಲಿಯೂ ಈ ಕುರಿತಾದ ಚಿಂತನೆಯಿದೆ. ಭೂಮಸೂದೆಯ ಪರಿಣಾಮ, ಒಕ್ಕಲಿಗರ ಮೇಲೆ ದಬ್ಬಾಳಿಕೆ, ಬಂಡವಾಳಶಾಹಿ ಅಥವಾ ಬಡವರ ಶೋಷಣೆ ಈ ಎಲ್ಲಾ ಅಂಶಗಳು ಅಲ್ಲಿ ಮಿಳಿತಗೊಂಡಿವೆ. ಇವರ 'ದೃಷ್ಟಿ' ಎಂಬ ಕಾದಂಬರಿಯು ತಲೆಮಾರುಗಳ ನಡುವಿನ ಅಂತರವನ್ನು ನೋಡುವ ಜೀವನ ದೃಷ್ಟಿಯ ಭಿನ್ನತೆಯನ್ನು ವಸ್ತುವಾಗಿ ಹೊಂದಿದೆ. 'ಅರ್ಥ' ಕಾದಂಬರಿಯಲ್ಲಿ ಸಮಕಾಲೀನ ಜಾಗತೀಕರಣ ವಿದ್ಯಮಾನಗಳು ಭಾರತದ ಗ್ರಾಮೀಣ ಪ್ರದೇಶದ ಸಂಸ್ಕೃತಿಯ ಮೇಲೆ ಬೀರುವ ಪರಿಣಾಮದ ಚಿತ್ರಣವಿದೆ. ವಸಾಹತುಶಾಹಿ ಹಾಗೂ ದಕ್ಷಿಣ ಕನ್ನಡದ ಪರಿಸರ ಮಾಲಿನ್ಯದ ವಿರುದ್ಧ ಸೌಮ್ಯ ಪ್ರತಿಭಟನೆಯನ್ನು ಇಲ್ಲಿ ಮೊಗಸಾಲೆಯವರು ವ್ಯಕ್ತ ಪಡಿಸುತ್ತಾರೆ.

'ಉಲ್ಲಂಘನೆ' ಕಾದಂಬರಿಯ ಹಿನ್ನೆಲೆ ಮತ್ತು ಭೌಗೋಳಿಕ ವ್ಯಾಪ್ತಿ: ಮೊಗಸಾಲೆಯವರು ಕೇರಳದ ಕಾಸರಗೋಡಿನ 'ಕೋಳ್ಯೂರು' ಎಂಬ ಕುಗ್ರಾಮದಲ್ಲಿ ಜನಿಸಿದರು. ಸುಂದರವಾದ ಹಸಿರು ಸಂಪತ್ತಿನಿಂದ ಶೋಭಿಸುತ್ತಿದ್ದ ಹಳ್ಳಿಯ ಜೀವನ ಅವರಿಗೆ ನಾನಾ ರೀತಿಯ ಅನುಭವಗಳ ಸವಿಯುಣಿಸಿತು. ಹೀಗೆ ಅನುಭವ ಸಂಪನ್ನರಾದ ಮೊಗಸಾಲೆಯವರಿಗೆ ಕೆಲವು ಅನುಭವಗಳು ನೋವು, ಬೆರಗುಗಳನ್ನು ಉಂಟು ಮಾಡಿದರೂ ಮುಂದೆ ಹೊಸ ರೀತಿಯ ಚಿಂತನೆಗೆ ಅವುಗಳು ಸ್ಫೂರ್ತಿಯ ಸೆಲೆಯಾದವು. 'ಮೊಗಸಾಲೆ' ಎಂಬುದು ಅವರ ಮನೆತನದ ಹೆಸರು. ಅದಕ್ಕೆ

ಸರಿಯಾಗಿ ದೊಡ್ಡದಾದ ಮುಖಮಂಟಪ (ಮೊಗಸಾಲೆ) ಉಳ್ಳಮನೆ ಅವರದಾಗಿತ್ತು. ಸಂಸ್ಕೃತಿ ಪ್ರೀತಿಯಲ್ಲಿ ಸೀಮೆಗೇ ಮುಖ್ಯವಾಗಿದ್ದ ಈ ಮನೆಯ ಜನ ಸೀಮೆಗೇ ಅತಿ ದೊಡ್ಡದಾದ ಮನೆ ಕಟ್ಟಿದ್ದರು. ಆರ್ಥಿಕವಾಗಿಯೂ ಶ್ರೀಮಂತಿಕೆ ಗಳಿಸಿಕೊಂಡಿದ್ದರು. ಹಾಗೆಯೇ ಶ್ರೀಮಂತಿಕೆಗೆ ಬೇಕಾದ ಇತರ ಎಲ್ಲ ವರಸೆಗಳಿಂದಾಗಿ ಇವರು ಇತರರಿಗಿಂತ ಭಿನ್ನವಾದರು. ಮೊಗಸಾಲೆ ಮನೆಯವರ ಆರ್ಥಿಕ ಶ್ರೀಮಂತಿಕೆಗಿಂತ ಸಾಂಸ್ಕೃತಿಕ ಶ್ರೀಮಂತಿಕೆ ಆ ಕಾಲದಲ್ಲಿ ಬಲು ದೊಡ್ಡದಾಗಿತ್ತು. ಇಂತಹ ಪರಿಸರದಲ್ಲಿ ಬೆಳೆದ ಇವರಿಗೆ ಕನ್ನಡ ಸಾರಸ್ವತ ಲೋಕಕ್ಕೆ ಎಂದೂ ಮರೆಯಲಾರದ ಕಾಣಿಕೆಯನ್ನು ನೀಡಲು ಸಾಧ್ಯವಾಯಿತು.

ಮೊಗಸಾಲೆಯವರೇ ಹೇಳುವಂತೆ “‘ಉಲ್ಲಂಘನೆ’ ಕಾದಂಬರಿಯು ಅವರ ಆತ್ಮಚರಿತ್ರೆ ‘ಬಯಲಬೆಟ್ಟ’ ಕೃತಿಯ ಮುಂದುವರಿದ ಭಾಗವಾಗಿದೆ.” (ನನ್ನ ಖಾಸಗಿ ಸಂದರ್ಶನ, ದಿನಾಂಕ ೧೫.೦೫.೨೦೦೯). ಬಾಲ್ಯದಲ್ಲಿ ತಾನು ಬೆಳೆದ ವಾತಾವರಣವೇ ಅವರಿಗೆ ಈ ರೀತಿಯ ಚಿಂತನೆಯನ್ನು ಮಾಡುವುದಕ್ಕೆ ಕಾರಣವಾಯಿತು ಎನ್ನುತ್ತಾರೆ. ಕಾದಂಬರಿಯಲ್ಲಿ ಹಂತ ಹಂತವಾಗಿ ಕಾಣಿಸಿಕೊಳ್ಳುವ ವಿಚಾರಗಳಿಗೆಲ್ಲಾ ಮೂಲ ಪ್ರೇರಣೆ ತನ್ನ ಬಾಲ್ಯ ಜೀವನವೇ ಆಗಿತ್ತು.

‘ಉಲ್ಲಂಘನೆ’ ಕಾದಂಬರಿಯಲ್ಲಿ ಯಕ್ಷಗಾನದ ಕುರಿತಾದ ಚಿತ್ರಣವು ಬಹಳ ದೀರ್ಘವಾಗಿ ಕಾಣಿಸಿಕೊಳ್ಳುತ್ತದೆ. ಯಕ್ಷಗಾನ ಮತ್ತು ತಾಳಮದ್ದಳೆ ಪ್ರಕಾರಗಳ ಆವಿಷ್ಕಾರಕ್ಕೆ ಮತ್ತು ಪೋಷಣೆಗೆ ಮೊಗಸಾಲೆ ಮನೆತನದವರು ಕಾರಣರು ಎಂದು ಅವರು ಅಭಿಪ್ರಾಯ ಪಡುತ್ತಾರೆ. ಅವರ ಹುಟ್ಟೂರಾದ ಕೋಳ್ಯೂರು ಆಗ ಯಕ್ಷಗಾನ ಕಲೆಯ ರಾಜಧಾನಿ. ಅಲ್ಲಿನ ದೇವಾಲಯದ ಆಶ್ರಯದಲ್ಲಿ ಬಯಲಾಟದ ಮೇಳವನ್ನೇ ಸ್ಥಾಪಿಸಿದ್ದರು. ಆಗಾಗ ಬಯಲಾಟ, ತಾಳಮದ್ದಳೆ ಕೂಟಗಳು ನಡೆಯುತ್ತಿದ್ದವು. ತರುಣ ಮೊಗಸಾಲೆಯವರಲ್ಲಿ ಆ ಕಲೆಗಳ ಬಗ್ಗೆ ವಿಶೇಷ ಆಸಕ್ತಿ ಉಂಟಾಯಿತು. ಊರಿನ ಸಮಾರಂಭಗಳಲ್ಲಿಯೂ ತಾಳಮದ್ದಳೆ ಕೂಟಗಳನ್ನು ನಡೆಸುತ್ತಿದ್ದರು. ಕಾದಂಬರಿಯ ಕಥಾದೃಷ್ಟಿಯಿಂದ ಅಗತ್ಯವಿಲ್ಲದಿದ್ದರೂ ಅದರ ಕುರಿತಾದ ಅಭಿಮಾನದಿಂದ ಸುದೀರ್ಘವಾದ ವಿವರಗಳೇ ಇಲ್ಲಿ ಮೂಡಿಬಂದಿದೆ.

ಜಾತಿ ಪದ್ಧತಿಯೆನ್ನುವುದು ಸಮಾಜಕ್ಕೆ ಅಂಟಿದ ಒಂದು ದೊಡ್ಡ ಶಾಪವಾಗಿದ್ದು, ಈ ಕವಚದಿಂದ ಹೊರಬರಬೇಕಾದ ಅಗತ್ಯತೆಯನ್ನು ಮೊಗಸಾಲೆಯವರು ಸೂಚಿಸುತ್ತಾರೆ. ತನ್ನ ಮನೆಯಲ್ಲೇ ಅನುಸರಿಸುತ್ತಿದ್ದ ಕೆಲವು ಜಾತೀಯ ನೀತಿಗಳು ಅವರನ್ನು ಬಹಳಷ್ಟು ಘಾಸಿಗೊಳಿಸಿದವು. ಬಾಲ್ಯದಲ್ಲೇ ತಂದೆಯವರನ್ನು ಕಳಕೊಂಡು ಚಿಕ್ಕಪ್ಪ (ಕೃಷ್ಣ ಭಟ್ಟರು) ಮತ್ತು ಅತ್ತೆ (ಪುಟ್ಟತ್ತೆ)ಯವರ ಆಶ್ರಯದಲ್ಲಿ ಬೆಳೆದರು. ಬಂಜೆ ಎನ್ನುವ ಕಾರಣಕ್ಕೆ ತನ್ನ ಗಂಡನಿಂದ ಪರಿತ್ಯಕ್ತರಾದ ಪುಟ್ಟತ್ತೆ ತನ್ನ ಜೀವನವನ್ನು ಗಂಧದ ಹಾಗೆ ತೇದಿದ್ದು ತವರಿನಲ್ಲೇ. ಮನೆಯ ಎಲ್ಲಾ ಮಕ್ಕಳಿಗೂ ಬೇಕಾದ ಜೀವನ ಪಾಠಗಳು ಅವರಿಂದಲೇ ಪ್ರೇರಿತ. ಅವರ ಅಕ್ಕರೆಯ ಮಡಿಲಲ್ಲಿ ಬೆಳೆದರೂ ಭವಿಷ್ಯದಲ್ಲಿ ಎದುರಾದ ಕೆಲವು ಸಂದರ್ಭಗಳಿಂದ ಮೊಗಸಾಲೆಯವರು ಬಹಳಷ್ಟು ನೊಂದುಕೊಂಡರು. ಓರ್ವ ವೈದ್ಯನಾಗಿಯೂ ಅಬ್ರಾಹ್ಮಣರನ್ನು ಸ್ಪರ್ಶ ಮಾಡಲು ಮೊಗಸಾಲೆಯವರನ್ನು ಪುಟ್ಟತ್ತೆ ಬಿಡಲಿಲ್ಲ. ಮೊಗಸಾಲೆಯವರಿಗೆ ಇದು ಇಷ್ಟವಾಗದೆ ಅರ್ಥಂಭರ್ಥ ಶಾಸ್ತ್ರವನ್ನು ಮಾಡಬೇಕಾದ ಅನಿವಾರ್ಯತೆ ಒದಗಿಬಂತು. ಆದರೆ ಮನೆಗೆ ಬಂದ ಯಾವ ರೋಗಿಗಳೂ ಇವರ ರೀತಿಯನ್ನು ವಿರೋಧಿಸಲಿಲ್ಲ! ಆದರೂ ಮೊಗಸಾಲೆಯವರ ಮನಸ್ಸು ಮಾತ್ರ ಅದಕ್ಕೆ ಒಪ್ಪಲೇ ಇಲ್ಲ. ಮುಂದೆ ಕಾರ್ಕಳದ ಕಾಂತಾವರದಲ್ಲಿ ಹೊಸದಾಗಿ ಆರಂಭಗೊಂಡ ಆಯುರ್ವೇದ ಆಸ್ಪತ್ರೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುವ ಅವಕಾಶ ಒದಗಿತು. ಆ ಬಳಿಕ ಅವರ ಜೀವನದಲ್ಲಿ ಮಹತ್ತರವಾದ ಬದಲಾವಣೆಯಾಯಿತು. ಕೊನೆಗೆ ಪುಟ್ಟತ್ತೆಯೂ ಬದಲಾವಣೆ ಹೊಂದಿ 'ನಿಮಗೆಲ್ಲ ಮಡಿ ಮೈಲಿಗೆ ಅಂತ ಇಲ್ಲದ ಮೇಲೆ ನಾಲ್ಕು ದಿನದ ಮಟ್ಟಿಗೆ ನನ್ನ ಸಂಪ್ರದಾಯ

ಯಾಕೆ? ನೀವೆಲ್ಲ ಕಲಿತ ಮಂದಿ! ನಿಮ್ಮ ಆಚರಣೆಗೆ ನಾವು ಅಡ್ಡಿ ಪಡಿಸುವುದು ತಪ್ಪು' (ಮೊಗಸಾಲೆ, ೨೦೦೫, ಪುಟ ೪೯೧) ಎನ್ನುವಷ್ಟರ ಮಟ್ಟಿಗೆ ಬದಲಾವಣೆಗೊಂಡರು. ಅದೇ ರೀತಿ ಚಿಕ್ಕಪ್ಪನ ವರ್ತನೆಯಲ್ಲಿಯೂ ಆಶ್ಚರ್ಯ ಪಡುವಂತಹ ರೀತಿಯಲ್ಲಿ ಬದಲಾವಣೆಯಾಯಿತು. "ಜಾತಿಗೆ ಅರ್ಥವಿಲ್ಲ ಎಂಬ ಆಧುನಿಕರ ವಾದದಲ್ಲಿ ಅರ್ಥ ಇದೆ. ನಾವೆಲ್ಲ ಸಂಪ್ರದಾಯ ಅಂತ ಅಬ್ರಾಹ್ಮಣ

ಮಂದಿಯನ್ನು ದೂರ ಇಟ್ಟದ್ದು ತಪ್ಪು" ಎಂದು ಉದಾರವಾದಿಯಾಗಿ ಮಾತನಾಡುವಷ್ಟು ಅವರು ಬದಲಾಗಿದ್ದರು.

'ಉಲ್ಲಂಘನೆ' ಕಾದಂಬರಿಯಲ್ಲಿ ಕಾಣಿಸಿಕೊಳ್ಳುವ ಅಂಬಕ್ಕ ಮತ್ತು ಸಂಕಪ್ಪ ಹೆಗ್ಡೆಯವರ ಪಾತ್ರಗಳ ಚಿತ್ರಣದಲ್ಲಿ ಮೊಗಸಾಲೆಯವರು ತನ್ನ ಅತ್ತೆ ಮತ್ತು ಚಿಕ್ಕಪ್ಪನವರನ್ನೇ ಗುರುತಿಸುತ್ತಾರೆ. ಕಾದಂಬರಿಯ ಪ್ರಮುಖ ಪಾತ್ರಗಳಾದ ಅವರಿಬ್ಬರು ಅನಿವಾರ್ಯವಾಗಿ ತಮ್ಮ ಜೀವನದಲ್ಲಿ ಬದಲಾಣೆಗೆ ಒಗ್ಗಿಕೊಳ್ಳುತ್ತಾರೆ. ಯಾವ ವರ್ಗದ ಜನರನ್ನು ಅಸ್ಪೃಶ್ಯರೆಂದು ಅಂಬಕ್ಕ ಗುರುತಿಸುತ್ತಿದ್ದರೋ ಅವರ ಕೈಯಿಂದಲೇ ತನ್ನ ಜೀವನದ ಕೊನೆಯ ಹಂತದಲ್ಲಿ ಸೇವೆಮಾಡಿಸಿಕೊಳ್ಳಬೇಕಾಗುತ್ತದೆ. ಅವರಿಂದಲೇ ತನ್ನ ಜೀವ ಎನ್ನುವಂತಾಗುತ್ತಾರೆ. ಇಂತಹ ಬದಲಾವಣೆ ಆದಾಗಲೇ ಮಾನವ ಬೆಳೆಯಲು ಸಾಧ್ಯ ಎಂಬ ಧೋರಣೆ ಮೊಗಸಾಲೆಯವರದು. ಈ ಬಗೆಯ ಉಲ್ಲಂಘನೆ ಕಾಲಧರ್ಮಕ್ಕೆ ಬದ್ಧ ಎಂಬ ಇಂಗಿತವೂ ಅವರಲ್ಲಿದೆ.

ಮೊಗಸಾಲೆಯವರು ಉಲ್ಲಂಘನೆ ಕಾದಂಬರಿಯಲ್ಲಿ ಬಂಟ ಸಮುದಾಯದಲ್ಲಿ ಉಂಟಾದ ತಲೆಮಾರುಗಳ ಅಂತರದ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅವರ ಮುಖ್ಯ ಉದ್ದೇಶವೇ ಕರಾವಳಿಯ ಸಮಗ್ರ ಸಂಸ್ಕೃತಿ ಮತ್ತು ಅದರ ಏಳು-ಬೀಳುಗಳ ಚಿತ್ರಣವನ್ನು ನೀಡುವುದು. ಬದಲಾದ ಜನ ಸಮುದಾಯದ ಪಲ್ಲಟಗಳನ್ನು ತಿಳಿಸಬೇಕಾದರೆ ಒಂದು ಪ್ರಧಾನ ಜಾತಿಯ ಅಗತ್ಯತೆಯನ್ನು ಮನಗಂಡ ಕಾದಂಬರಿಕಾರರು ತನಗೆ ಹೆಚ್ಚು ಪರಿಚಿತ ಮತ್ತು ಆಪ್ತವಾದ ಬಂಟ ಜನಾಂಗವನ್ನೇ ಆಯ್ಕೆ ಮಾಡಿಕೊಂಡರು. ತನ್ನ ಜೀವನದಲ್ಲಿ ಅವರಿಂದ ಹಲವಾರು ರೀತಿಯಲ್ಲಿ ಸಹಾಯವನ್ನು ಪಡೆದ ಅವರಿಗೆ ಆ ಸಮುದಾಯದ ಜನರೊಂದಿಗೆ ಹೆಚ್ಚು ಒಡನಾಟವಿತ್ತು. ತುಳುನಾಡಿನ ಪ್ರಬಲ ವರ್ಗವಾದ ಬಂಟ ಸಂಸ್ಕೃತಿಯ ಚಿತ್ರಣದೊಂದಿಗೆ ಅದನ್ನು ಸುತ್ತುವರಿದಿರುವ ಇತರ ಎಲ್ಲಾ ವರ್ಗಗಳ ಸಂಸ್ಕೃತಿಯ ಚಿತ್ರಣವನ್ನು ಸಂಯೋಜಿಸುವ ಯೋಜನೆ ಅವರದು.

ಕಾದಂಬರಿಯಲ್ಲಿ ಭೂ ಮಸೂದೆ ಕಾಯಿದೆಯಿಂದ ಉಂಟಾಗುವ ಪಲ್ಲಟಗಳ ಚಿತ್ರಣವಿದೆ. ಈ ಪಲ್ಲಟ ಸ್ವತಃ ಮೊಗಸಾಲೆ ಮನೆತನದ್ದು ಕೂಡಾ

ಹೌದು. ೧೯೭೦ರ ದಶಕದಲ್ಲಿ ಈ ಕಾಯಿದೆಯು ಜ್ಯಾರಿಗೊಂಡಿತು. ಮೊಗಸಾಲೆಯವರ ಹಿರಿಯರು ಆಗರ್ಭ ಶ್ರೀಮಂತ ಮನೆತನದಲ್ಲಿ ಹುಟ್ಟಿ ಬೆಳೆದಿದ್ದರೂ ಕೊನೆಕೊನೆಗೆ ಆ ಶ್ರೀಮಂತಿಕೆ ಕರಗಿ ಹೋಗಿ, ಯಾರು ತಮ್ಮ ಭೂಮಿಯನ್ನು ಕ್ರಯಕ್ಕೆ ತೆಗೆದುಕೊಂಡಿದ್ದಾರೋ ಅವರಿಂದಲೇ ಮತ್ತೆ ತಮ್ಮದೇ ಆಗಿದ್ದ ಭೂಮಿಯನ್ನು ಮೂಲಗೇಣಿಗೆ ಪಡೆದುಕೊಳ್ಳುವಂತಾಯಿತು. ಒಂದೆರಡು ಎಕರೆಯಷ್ಟು ಫಲವತ್ತಾದ ಹೊಲದ ಗೇಣಿಯನ್ನು ಅವರು ಧನಿಗೆ ಕೊಡಬೇಕಿತ್ತು. ಭೂಮಸೂದೆಯಿಂದಾಗಿ ಈ ಗೇಣಿಯ ಭೂಮಿಯು ಮತ್ತೆ ಅವರ ಪಾಲಾಯಿತು. ಭೂಮಸೂದೆಯ ಒಳಿತು ಕೆಡುಕುಗಳ ಪೂರ್ಣ ಅನುಭವ ಅವರಿಗಿತ್ತು. ಹಾಗಾಗಿ ಕಾದಂಬರಿಯಲ್ಲಿಯೂ ಈ ವಿಷಯದ ಕುರಿತು ಸ್ಪಷ್ಟವಾದ ಚಿಂತನೆಯನ್ನು ತಿಳಿಸುವುದು ಅವರಿಗೆ ಸಾಧ್ಯವಾಗಿದೆ.

ಗಾಂಧಿವಾದದ ಪ್ರಭಾವ ಮೊಗಸಾಲೆಯವರ ಮೇಲೆ ವಿಶೇಷವಾಗಿ ಆಗಿರುವುದನ್ನು ಗಮನಿಸಬಹುದು. ಅವರ ಅಸ್ಪೃಶ್ಯತಾ ನಿವಾರಣೆ, ಸಮಾನತೆ, ಸಹಬಾಳ್ವೆ, ಅಹಿಂಸೆ, ದೇಶಪ್ರೇಮ ಇವೆಲ್ಲದರಿಂದ ಅವರು ಪ್ರಭಾವಿತರಾಗುತ್ತಾರೆ. ಬ್ರಿಟಿಷರ ಆಡಳಿತ ಇದ್ದುದರಿಂದ ಸಮಾರಂಭಗಳಲ್ಲಿ ಜನರು ಕಾಡು ಹರಟೆಗಳಲ್ಲಿ ತೊಡಗುವುದಕ್ಕಿಂತ ಹೆಚ್ಚಾಗಿ ಗಾಂಧೀಜಿ ಅವರ ಸತ್ಯಾಗ್ರಹ, ಹೋರಾಟ ಮುಂತಾದವುಗಳ ಪರ ಇಲ್ಲವೆ ವಿರೋಧದ ಕುರಿತು ಚರ್ಚೆಗಳನ್ನು ಮಾಡುತ್ತಿದ್ದರು. ಈ ಅಂಶಗಳು ಕಾದಂಬರಿಕಾರರ ಮೇಲೆ ಪ್ರಭಾವ ಬೀರಿವೆ.

ಆಧುನಿಕ ಪರಿಕಲ್ಪನೆಗಳಾದ ಜಾಗತೀಕರಣ, ವಿಶೇಷ ಆರ್ಥಿಕ ವಲಯಗಳಂತಹ ಅಂಶಗಳು ಕರಾವಳಿ ಪ್ರದೇಶದ ಸಂಸ್ಕೃತಿಯನ್ನೇ ಬದಲಾಯಿಸುತ್ತಿರುವುದನ್ನು ಮನಗಂಡ ಮೊಗಸಾಲೆಯವರು "ಪರಿಸರದ ಹಚ್ಚಹಸಿರೆಲ್ಲಾ ನಾಶವಾಗುತ್ತಿದೆಯಲ್ಲಾ" ಎಂದು ಕೊರಗುತ್ತಾರೆ. ಹಸಿರು ಪರಿಸರವನ್ನು ಉಳಿಸಬೇಕೆಂಬ ವಿಶೇಷವಾದ ಹಂಬಲ ಅವರಿಗಿದೆ. ಅದನ್ನು ಉಳಿಸುವ ದಾರಿಗಳತ್ತ ತಮ್ಮ ಚಿಂತನೆಯನ್ನು ಈ ಕಾದಂಬರಿಯಲ್ಲಿ ಹರಿಸಿದ್ದಾರೆ.

ಒಟ್ಟಿನಲ್ಲಿ ಹೇಳುವುದಾದರೆ ಸಮಕಾಲೀನ ಸಮಾಜದ ಸಮಸ್ಯೆಗಳು ಸಹಜವಾಗಿಯೇ ಮೊಗಸಾಲೆಯವರ ಗಮನ ಸೆಳೆದಿದ್ದವು. ತಾನು ಬದುಕಿದ

ಪರಿಸರದ ಅನುಭವಗಳೇ ಅವರಿಗೆ ಇಷ್ಟೊಂದು ಸುದೀರ್ಘವಾದ ಕಾದಂಬರಿಯನ್ನು ಬರೆಯುವುದಕ್ಕೆ ಹಿನ್ನೆಲೆಯಾಯಿತು ಎನ್ನುವುದಂತೂ ಸ್ಪಷ್ಟ.

ಭೌಗೋಳಿಕ ವ್ಯಾಪ್ತಿ: ಸಾಂತೇರುಗುತ್ತು ಕುಟುಂಬದ ಸುತ್ತ ಸುತ್ತುವ 'ಉಲ್ಲಂಘನೆ' ಕಾದಂಬರಿಯ ಕಥಾ ವಸ್ತುವಿನ ಭೌಗೋಳಿಕ ವ್ಯಾಪ್ತಿಯು ಸಾಕಷ್ಟು ವಿಸ್ತಾರವಾಗಿದೆ. ಈಗಿನ ರಾಷ್ಟ್ರೀಯ ಹೆದ್ದಾರಿ ೧೭ಕ್ಕೆ ಅಂಟಿಕೊಂಡಂತೆ ಹರಡಿಕೊಂಡಿರುವ ಇದು ಪೂರ್ವದಲ್ಲಿ ಬಂಟ್ವಾಳ, ಪುತ್ತೂರು, ಉತ್ತರದಲ್ಲಿ ಮಂಗಳೂರು ಮತ್ತು ದಕ್ಷಿಣದಲ್ಲಿ ಕಾಸರಗೋಡುಗಳ ಮಧ್ಯೆ ಹರಡಿಕೊಂಡಿದೆ. ಬಂಟ್ವಾಳದ ಪಜೀರ್, ಮುಡಿಪು, ವಿಟ್ಲ, ಕನ್ಯಾನ, ಅಳಿಕೆ, ಕೇಪು, ಪುತ್ತೂರಿನ ಕಬಕ, ಮಂಗಳೂರಿನ ಕೊಣಾಜೆ, ಉಳ್ಳಾಲ, ಒಂಬತ್ತುಕೆರೆ, ಸೋಮೇಶ್ವರ, ಕೋಟೆಕಾರು, ತಲಪಾಡಿ, ಮಂಜೇಶ್ವರ, ಕಾಸರಗೋಡಿನ ವರ್ಕಾಡಿ, ಕೋಳ್ಯೂರು, ಮೀಯಪದವು, ಪದ್ಯಾಣ, ಉಪ್ಪಳ, ಬಾಯಾರು, ಪೆರ್ಲ, ಪೆರಡಾಲ, ಕುಂಬಳೆ, ಮಧೂರು ಮತ್ತು ಕೂಡ್ಲು ಪ್ರದೇಶಗಳಲ್ಲಿ ವ್ಯಾಪಿಸಿಕೊಂಡಿದೆ.

ಅಧ್ಯಾಯ ೪

'ಉಲ್ಲಂಘನೆ' ಕಾದಂಬರಿಯಲ್ಲಿ ಸಾಂಸ್ಕೃತಿಕ ಪಲ್ಲಟ

೪.೧ ವಾರ್ಷಿಕಾವರ್ತನ ಮತ್ತು ಸಾಂಸ್ಕೃತಿಕ ಪಲ್ಲಟ

೪.೨ ಜೀವನಾವರ್ತನ ಮತ್ತು ಸಾಂಸ್ಕೃತಿಕ ಪಲ್ಲಟ

೪.೩ ತಲೆಮಾರುಗಳು ಮತ್ತು ಸಾಂಸ್ಕೃತಿಕ ಪಲ್ಲಟ

ಅಧ್ಯಾಯ – ೪ 'ಉಲ್ಲಂಘನೆ' ಕಾದಂಬರಿಯಲ್ಲಿ ಸಾಂಸ್ಕೃತಿಕ ಪಲ್ಲಟ:

ಕಾಲ ಬದಲಾದಂತೆ ಮಾನವನ ಜೀವನ ವಿಧಾನದಲ್ಲೂ ಬದಲಾವಣೆಗಳಾಗುವುದು ಸಹಜ. ಗತಿಶೀಲತೆ ಎನ್ನುವುದು ಕಾಲದ ಸಹಜಗುಣ. ಅದರ ಜೊತೆಗೆ ಮಾನವನೂ ಹೆಜ್ಜೆ ಹಾಕುತ್ತಾನೆ. ನಾವು ಬೆಳೆದು ಬಂದ ಸಂಪ್ರದಾಯಗಳು ಎಷ್ಟೋ ಬಾರಿ ನಮ್ಮನ್ನು ಕೆಣಕುವಂತೆ, ಪ್ರಶ್ನಿಸುವಂತೆ ಮಾಡುತ್ತವೆ. ಒಂದು ರೀತಿಯಲ್ಲಿ ಪ್ರಗತಿ ಮತ್ತು ಸಂಪ್ರದಾಯ ಇವುಗಳ ಮಧ್ಯೆ ತಾಕಲಾಟವೇ ಏರ್ಪಡುತ್ತದೆ. ಈ ತಾಕಲಾಟವು ನಿರಂತರವಾಗಿ ಹಿಂದೆಯೂ ನಡೆದಿದೆ. ಮುಂದೆಯೂ ನಡೆಯುವಂತಹದು. ಈ ಸಂದರ್ಭದಲ್ಲಿ ಒಂದು ಮತ್ತೊಂದನ್ನು ಮೆಟ್ಟಿ ನಿಲ್ಲಬಲ್ಲದು ಅಥವಾ ಪರಸ್ಪರ ಹೊಂದಾಣಿಕೆಯೊಂದಿಗೆ ಮುಂದೆ ಸಾಗಬಲ್ಲದು. ಹಳೆಯ ತಲೆಮಾರಿನ ಸಂಸ್ಕೃತಿಗೂ ಹೊಸ ತಲೆಮಾರಿನ ಸಂಸ್ಕೃತಿಗೂ ವ್ಯತ್ಯಾಸಗಳು ಕಂಡುಬರುವುದು ಈ ಕಾರಣಕ್ಕಾಗಿಯೇ. ಭೂಮಸೂದೆ, ಸಾಮಾಜಿಕ ಸುಧಾರಣೆ, ಶಿಕ್ಷಣ ಇವುಗಳಿಂದ ಬಂಟರ ಜೀವನದಲ್ಲಿ ಸಾಕಷ್ಟು ಬದಲಾವಣೆಗಳಾದರೂ, ಅವರು ಜೀವನದ ಕೆಲವು ಮೂಲ ವಿಚಾರಗಳನ್ನು ಉಳಿಸಿಕೊಂಡಿರುವುದನ್ನು ಇಂದಿಗೂ ಗಮನಿಸಬಹುದು. ಸಾಂಸ್ಕೃತಿಕ ಆಚರಣೆಗಳು ಅಥವಾ ಕೃಷಿಗೆ ಸಂಬಂಧಪಟ್ಟ ಬೇರೆ ಬೇರೆ ಅಂಶಗಳನ್ನು ಗಮನಿಸಿದಾಗ ಈ ವಿಚಾರ ಸ್ಪಷ್ಟವಾಗುತ್ತದೆ. 'ಇಪ್ಪತ್ತನೇ ಶತಮಾನದಲ್ಲಿ ಬಂಟರು' ಎಂಬ ವಿಚಾರವಾಗಿ ಅಧ್ಯಯನ ಮಾಡಿದ ನರೇಂದ್ರ ರೈ ಹೀಗನ್ನುತ್ತಾರೆ– "ಆರ್ಥಿಕವಾಗಿ, ಸಾಮಾಜಿಕವಾಗಿ ಬಂಟರು ಇಂದು ಎಷ್ಟೇ ಬದಲಾದರೂ ಮಾತು, ವಸ್ತ್ರ, ನಡೆನುಡಿಯಲ್ಲಿ ಆಧುನಿಕತೆಯನ್ನು ಮೈಗೂಡಿಸಿಕೊಂಡಿದ್ದರೂ ಅವರ ಮೂಲ ಬೇರು ಇನ್ನೂ ನೆಲದಲ್ಲೇ ಇದೆ. ಬದುಕಿಗೆ ಬೇರೆ ದಾರಿಗಳಿದ್ದರೂ ಬಂಟರು ನೆಲ–ಹಸುರಿನೊಂದಿಗೆ ನಿರಂತರ ಭಾವನಾತ್ಮಕ ಸಂಬಂಧ ಉಳಿಸಿಕೊಂಡವರು. ಬಂಟರ ಮೂಲ ಕಸುಬೇ ಕೃಷಿ, ಒಕ್ಕಲುತನ ಎಂಬುದನ್ನು ದೃಢ ಪಡಿಸುವ ಹತ್ತಾರು ಆಕರಗಳು ಈ ಸಮಾಜದವರ ಆರಾಧನೆ, ಜೀವನಕ್ರಮಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಸ್ಪಷ್ಟವಾಗುತ್ತದೆ". (ನರೇಂದ್ರ ರೈ, ಪುಟ ೩)

ಪೀಟರ್ ಜೆ.ಕ್ಲಾಸ್ ಇವರು ತುಳುನಾಡಿನಲ್ಲಿ ನಾನಾ ಕಾರಣಗಳಿಂದ ಉಂಟಾದ ಬದಲಾವಣೆಗಳ ಕುರಿತಾಗಿ ಹೀಗನ್ನುತ್ತಾರೆ – "ನಾನು ಮೊದಲ ಬಾರಿಗೆ ದಕ್ಷಿಣ ಕನ್ನಡ ಜಿಲ್ಲೆ (೧೯೬೭)ಗೆ ಬಂದಾಗ ಅಲ್ಲಿ ಇನ್ನೂ ಭೂಮಸೂದೆ ಶಾಸನಬದ್ಧ ಕಾನೂನಾಗಿರಲಿಲ್ಲ. ಹೀಗಾಗಿ ತುಳುವ ಜಗತ್ತು ಐತಿಹ್ಯಗಳಲ್ಲಿ ಪರಿಕಲ್ಪಿತವಾದುದನ್ನೇ ಹೋಲುತ್ತಿತ್ತು. ಅಲ್ಲಿನ ಭೂಮಿಕಾಣಿಗಳು ಬಹುತೇಕವಾಗಿ ಹಳ್ಳಿಯ ಯಜಮಾನರ ಹಾಗೂ ತುಂಡರಸರ ವಂಶಸ್ಥರಾದ ಜಮೀನ್ದಾರರ ಕೈಯಲ್ಲಿದ್ದುವು. ಹಾಗಿದ್ದರೂ ಜಮೀನ್ದಾರರ ಪೈಕಿ ಹಲವರು ಆಧುನಿಕ ವೃತ್ತಿಪರ ಉದ್ಯೋಗಗಳತ್ತ, ಉದ್ಯಮಗಳತ್ತ ಕಣ್ಣು ಹಾಯಿಸತೊಡಗಿದ್ದರು. ಆ ಕಾಲದಲ್ಲೇ ಗ್ರಾಮೀಣ ಪರಿಸರದ ಗುತ್ತಿನ ಮನೆಗಳವರು ಹಳ್ಳಿಗಳಲ್ಲಿನ ತಮ್ಮ ಮನೆಗಳನ್ನು ತೆರವು ಮಾಡಿ ನಗರಪ್ರದೇಶಗಳಲ್ಲಿ ವಾಸ್ತವ್ಯ ಹೂಡುತ್ತಿದ್ದರು. ಹೀಗಾಗಿ ಗ್ರಾಮೀಣ ಜಗತ್ತಿನಲ್ಲಿ ಒಕ್ಕಲು ಜನರು ಮಾತ್ರ ಪ್ರಾಚೀನ ಕಾಲದ ಪರಿಕಲ್ಪಿತ ಜಗತ್ತಿನೊಂದಿಗೆ ಉಳಿದಿದ್ದರು. ಮುಂದಿನ ದಶಕಗಳಲ್ಲಿ ಭೂವಿತರಣೆಯ ಶಾಸನದ ಫಲವಾಗಿ ನೆಲವೆಲ್ಲಾ ಹರಿದು ಹಂಚಿಹೋಗಿ ಅವರ ಬದುಕಿಗೊಂದು ಹೊಸ ಆಯಾಮ ಬರುವ ಸೂಚನೆಗಳಿದ್ದುವು. ವಾಸ್ತವವಾಗಿ ೧೯೬೭ರಿಂದ ಈಚೆಗೆ ಈ ದಿಸೆಯಲ್ಲಿ ಪರಿಸ್ಥಿತಿ ಬದಲಾಗುತ್ತಾ ಬರುವುದನ್ನು ನಾನು ಗಮನಿಸಿದ್ದೇನೆ. ಆದರೆ ಗ್ರಾಮೀಣ ಜಗತ್ತಿನಲ್ಲಿ ಧಾರ್ಮಿಕ ವಿಧಿ ಆಚರಣೆಗಳು ಪುನರುತ್ಥಾನಗೊಳ್ಳುತ್ತಿದ್ದು, ಪ್ರಾಚೀನ ವಿಶ್ವ ರಹಸ್ಯವನ್ನು ಮತ್ತೆ ನೆನಪಿಗೆ ತರುತ್ತಿರುವುದು ಕುತೂಹಲಕರ ಸಂಗತಿ. ಹೊಸ ಹೊಸ ಆರಾಧನಾ ಪಂಥಗಳ ಉದಯದೊಂದಿಗೆ ಪಾಡ್ದನಗಳಲ್ಲಿ ಹೇಳಿದ ದೈವ ದೇವರುಗಳಿಗೆ ನೂತನ ಗುಡಿಗೋಪುರಗಳು ಏಳುತ್ತಿರುವುದು ಒಂದು ಅದ್ಭುತ ಸಂಗತಿ. ನಿರೀಕ್ಷಣೆಗೆ ವಿರುದ್ಧವಾಗಿ ಪಾಡ್ದನ ಹಾಡುವ ಸಂಪ್ರದಾಯವು ಜನಪ್ರಿಯವಾಗುತ್ತಿದೆ. ಆದರೆ ಗುಣದ ದೃಷ್ಟಿಯಿಂದ ಕುಸಿಯುತ್ತಿರುವುದು ವಿಷಾದನೀಯ" (ಪೀಟರ್ ಜೆ. ಕ್ಲಾಸ್, ೧೯೮೭, ಪುಟ ೪೩).

ಬಂಟ ಜನಾಂಗದ ಕುರಿತು ಅಧ್ಯಯನ ಮಾಡಿದ ಇಂದಿರಾ ಹೆಗ್ಗಡೆಯವರು ಕ್ಲಾಸ್ ಅವರ ಈ ಮೇಲಿನ ಅಭಿಪ್ರಾಯವನ್ನು ಅಲ್ಲಗಳೆಯುವುದಿಲ್ಲ. ತುಳುನಾಡು ಮುಂಬಯಿಯಂತಹ ಮಹಾನಗರದ ಪ್ರಭಾವಕ್ಕೆ ಒಳಗಾದರೂ ಬಂಟರ

ಸಾಂಪ್ರದಾಯಿಕತೆಯಲ್ಲಿ ಬದಲಾವಣೆ ಆಗಲಿಲ್ಲ ಎನ್ನುತ್ತಾರೆ. "ಉಂಬಳಿ ಆಸ್ತಿ ಕಳೆದುಕೊಂಡು ಆರ್ಥಿಕ ಅಡಚಣೆ ಬಂದೊದಗಿದ್ದು ಬದುಕಿಗೆ ಹೊಸ ನೆಲೆಯನ್ನು ಅರಸುತ್ತಾ ಹೋಗುವುದು ಅನಿವಾರ್ಯವಾಯಿತು. ಹೀಗೆ ಹೋದವರು ನಗರವನ್ನು ವಾಸದ ನೆಲೆಯನ್ನಾಗಿ ಆಯ್ದುಕೊಂಡರು, ಹೊಸ ಬೆಳಕನ್ನು ಕಂಡುಕೊಂಡರು. ಹಳ್ಳಿಯಲ್ಲಿ ಜನಸಂಖ್ಯೆ ಕಡಿಮೆಯಾಗತೊಡಗಿತು. ಜೊತೆಗೆ ಸೇವಕರಾಗಿದ್ದ ಹಾಗೂ ಕೃಷಿಯಾಳುಗಳಾಗಿದ್ದ ಜನರು ಸ್ವತಂತ್ರರಾದರು. ಹೀಗಾಗಿ ಸಾವಿರಾರು ವರುಷಗಳ ಪರಂಪರೆ ಇರುವ ಆರಾಧನಾ ಕಾರ್ಯಗಳನ್ನು ಮುಂದುವರಿಸಲು ಕಷ್ಟಸಾಧ್ಯವೆಂದು ಎಲ್ಲರೂ ಭಾವಿಸತೊಡಗಿದರು. ಆದರೆ ಹಾಗಾಗಲಿಲ್ಲ. ಧರ್ಮನಡಾವಳಿಯಂತಹ ಆರಾಧನಾ ಧರ್ಮಕಾರ್ಯ ಈಗ ನಿಂತುಹೊಗಿದೆಯೆನ್ನಬಹುದಾದರೂ ಉಳಿದ ದ್ರಾವಿಡ ಆರಾಧನಾ ವಿಧಿವಿಧಾನಗಳು ಹಿಂದಿಗಿಂತಲೂ ವೈಭವವಾಗಿ ನಡೆಯುತ್ತಿರುವುದು ಆಶ್ಚರ್ಯಕರ ಸಂಗತಿ. ಕೆಲವು ತಲೆಮಾರುಗಳ ಹಿಂದೆ ನಿಂತು ಹೋದ ಸಂಪ್ರದಾಯಗಳು ಮರುಜೀವ ಪಡೆದು ಹೆಚ್ಚು ಸತ್ವಯುತವಾಗಿ ಗಮನ ಸೆಳೆಯುವುದು ಇನ್ನೂ ಆಶ್ಚರ್ಯಕರ ಸಂಗತಿ. ತನ್ನ ಅಸ್ತಿತ್ವದ ಉಳಿಯುವಿಕೆ ಮತ್ತು ತನ್ನ ಮಾನಸಿಕ ಆರೋಗ್ಯ ಈ ಎರಡರ ಕಾರಣಗಳಿಂದ ಪುರಾಣದ ತನ್ನ ಪರಂಪರೆಯನ್ನು ಉಳಿಸಿಕೊಂಡು ಬಂದವರಲ್ಲಿ ಇದ್ದ ತೃಪ್ತಿ ಪರಂಪರೆಯನ್ನು, ಆಚರಣೆಯನ್ನು ನಿಲ್ಲಿಸಿದವರಲ್ಲಿ ಇಲ್ಲ. ಬದಲಾಗಿ ಪರಂಪರೆಯ ಆಚರಣೆಯನ್ನು ನಿಲ್ಲಿಸಿದವರು ಮಾನಸಿಕವಾಗಿ ಹೆಚ್ಚು ದುರ್ಬಲರಾಗುತ್ತಿರುವುದು ಕಂಡು ಬಂದಿದೆ." ಎನ್ನುತ್ತಾರೆ. (ಇಂದಿರಾ ಹೆಗ್ಗಡೆ, ೨೦೦೪, ಪುಟ ೫೨೯).

ಇಂದಿರಾ ಹೆಗ್ಗಡೆಯವರು ತನ್ನ ಸಂಶೋಧನ ಗ್ರಂಥದಲ್ಲಿ ಇಪ್ಪತ್ತನೆಯ ಶತಮಾನದವರೆಗೆ ಇದ್ದ ಬಂಟರ ಪರಂಪರೆಯ ಗುತ್ತು, ಬೀಡುಗಳ ಆಡಳಿತ ವಿವರಗಳ ಜೊತೆಗೆ ಇಪ್ಪತ್ತೊಂದನೆಯ ಶತಮಾನದ ಸಂಪ್ರದಾಯ, ಆಚರಣೆಗಳು ಎಲ್ಲ ಒತ್ತಡಗಳಿಂದ ನಲುಗಿಯೂ ಅಲ್ಪ ಸ್ವಲ್ಪ ಜೀವ ಹಿಡಿದಿರುವ, ಇನ್ನೂ ಸಾಯುವ ಸೂಚನೆ ನೀಡದ ಅಳಿಯ ಸಂತಾನ ಸಮಾಜ ಪದ್ಧತಿ, ಅವರ ಧಾರ್ಮಿಕ ಅಧಿಕಾರ ಇವೇ ಮೊದಲಾದವುಗಳ ಬಗ್ಗೆ ಮಾಹಿತಿಗಳನ್ನು ಕಲೆಹಾಕಿದ್ದಾರೆ. ಈ ಅಂಶಗಳನ್ನು ಗಮನಿಸಿದಾಗ ಬಂಟ ಜನಾಂಗದಲ್ಲಿ ಕೆಲವು ಆರಾಧನಾ ವಿಧಿಗಳು

ಹಿಂದಿಗಿಂತಲೂ ಚೆನ್ನಾಗಿ ಇಂದು ನಡೆಯುತ್ತಿದ್ದು, ಜೀವನಾವರ್ತನದಲ್ಲಿ ಮತ್ತು ವಾರ್ಷಿಕಾವರ್ತನದಲ್ಲಿನ ಕೆಲವು ಆಚರಣೆಗಳಲ್ಲಿ ಬದಲಾವಣೆಗಳಾಗಿವೆ ಮತ್ತು ಕೆಲವು ಆಚರಣೆಗಳು ನಶಿಸುತ್ತಿರುವ ಲಕ್ಷಣಗಳು ಕಂಡುಬರುತ್ತಿವೆಯೆಂದು ತಿಳಿಯುತ್ತದೆ.

ಕಾದಂಬರಿಕಾರರು ಹಳೆಯ ತಲೆಮಾರಿಗಿಂತ ಹೊಸ ತಲೆಮಾರಿನಲ್ಲಿ ಯಾವ ರೀತಿಯ ಬದಲಾವಣೆಗಳಾಗಿವೆ ಎಂಬುದನ್ನು ಕಲೆಹಾಕುತ್ತಾ ಮುಂದುವರಿದಿದ್ದಾರೆ. ವಾರ್ಷಿಕಾವರ್ತನದಲ್ಲಿ ಮತ್ತು ಜೀವನಾವರ್ತನದಲ್ಲಿ ಹೇಗೆ ಬದಲಾವಣೆಗಳಾಗಿವೆ ಎಂದು ಗಮನಿಸುವ ಮೂಲಕ ಈ ಅಂಶವನ್ನು ಸ್ಪಷ್ಟಪಡಿಸಬಹುದು.

೪.೧ ವಾರ್ಷಿಕಾವರ್ತನ ಮತ್ತು ಸಾಂಸ್ಕೃತಿಕ ಪಲ್ಲಟ:

ತುಳುನಾಡಿನಲ್ಲಿ ಪಗ್ಗು ತಿಂಗಳಿಂದ ಸುಗ್ಗಿ ತಿಂಗಳವರೆಗೆ ಹಲವಾರು ರೀತಿಯ ಆಚರಣೆಗಳನ್ನು ಹಬ್ಬ ಹರಿದಿನಗಳನ್ನು ಬಹಳ ಹಿಂದಿನಿಂದಲೂ ನಡೆಸಿಕೊಂಡು ಬಂದಿದ್ದಾರೆ. ಸಮೃದ್ಧಿಯ ಸಂಕೇತವಾಗಿ ಇದನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ನಾಗಾರಾಧನೆ: ಬಂಟರ ಪೂರ್ವ ಪರಂಪರೆಯ ಮನೆಗಳ ಕುಲದೇವರು ‘ನಾಗ’ ಎಂಬ ನಂಬಿಕೆ. ‘ನಾಗ ಬೆರ್ಮರು’ ಹಾಗೂ ‘ನಾಗ’ ಪರಸ್ಪರ ತಾದ್ಯಾತ್ಮ ಹೊಂದಿವೆ. ಬೆರ್ಮರ ಗುಂಡಗಳು ನಾಗಬನದಲ್ಲಿ ಇರುವುದರಿಂದ ಕುಲದೇವತೆಯ ನಿಜವಾದ ಅಧಿಪತಿ ಬೆರ್ಮರು ಆದರೂ ನಾಗ-ಬ್ರಹ್ಮ ಎಂಬ ಕಲ್ಪನೆಯಿಂದಲೇ ನಾಗಬನವನ್ನು ಗುರುತಿಸುತ್ತಾರೆ. ‘ಕುಲಬನ’ ಅಥವಾ ‘ಮೂಲದ ಬನ’, ‘ಜಾಗದ ಬನ’ ಹಾಗೂ ‘ಆಧುನಿಕ ಬನ’ ಎಂದು ನಾಗಬನಗಳನ್ನು ಗುರುತಿಸುತ್ತಾರೆ. ಪೂಜೆ ಮಾಡಲು ಪ್ರತ್ಯೇಕ ಪುರೋಹಿತರನ್ನು ಕರೆಯುತ್ತಾರೆ. ನಿತ್ಯ ಪೂಜೆಯಲ್ಲಿ ಹಾಲಿನ ತನು ಎರೆಯುತ್ತಾರೆ ಹಾಗೂ ಒಂದು ಸೇರಕ್ಕಿಯ ನೈವೇದ್ಯವನ್ನು ಅರ್ಪಿಸುತ್ತಾರೆ. (ನಾಗಬೆರ್ಮರ ಪೂಜೆಯಲ್ಲಿ ಪಿಂಗಾರ (ಅಡಕೆಯ ಹೂ) ಕಡ್ಡಾಯವಾಗಿರುತ್ತದೆ. ಪಿಂಗಾರ ಸಿರಿ, ಸಮೃದ್ಧಿಯ ಸಂಕೇತವಾಗುತ್ತದೆ)

ನಾಗನಿಗೆ ಹರಕೆಯ ತಂಬಿಲ, ನಿಗದಿತ ಪರ್ವದ ತಂಬಿಲ, ವಾರ್ಷಿಕ ತಂಬಿಲಗಳು ಸಲ್ಲುತ್ತವೆ. ನಾಗರ ಪಂಚಮಿಯಂದು ವಿಶೇಷ ತಂಬಿಲ ಇದೆ. ಹಿರಿಯರು ಹರಕೆಯ ಕಲ್ಲು ಹಾಕಿದ್ದರೆ ಅವರ ಸಂತಾನ ಮಾಡಬೇಕಾದ (ಮಾತೃವಂಶೀಯ) ತಂಬಿಲ ಅವರ ತಲೆಮಾರಿನ ಮೂಲಕ ಮುಂದುವರಿಯುತ್ತದೆ. ನಾಗಮಂಡಲ ಎನ್ನುವುದು ಲಕ್ಷಾಂತರ ಖರ್ಚಿನ ಆರಾಧನೆ. ಸಾರ್ವಜನಿಕ ಅನ್ನಸಂತರ್ಪಣೆ ಏರ್ಪಾಡಾಗಬೇಕು. ಯಾರು ಬಂದರೂ ಪ್ರಸಾದ ರೂಪದಲ್ಲಿ ಹೊಟ್ಟೆ ತುಂಬಾ ಉಂಡು ಹೋಗಬೇಕು ಎನ್ನುವ ಪದ್ಧತಿ. ಬರುವವರಿಗೆ ವಾಹನದ ವ್ಯವಸ್ಥೆಯನ್ನೂ ಮಾಡುತ್ತಾರೆ. ಈ ಆರಾಧನೆಯಲ್ಲಿ ದೋಷ ಉಂಟಾದರೆ ಪ್ರತ್ಯೇಕ ನಾಗಮಂಡಲ ಮಾಡಬೇಕಾಗುತ್ತದೆ. ತುಳುನಾಡಿನಲ್ಲಿ ಈ ನಾಗಮಂಡಲ ಉತ್ಸವವು ಮುಂದುವರಿಯುತ್ತಾ ಬಂದಿದೆ.

ಕಾದಂಬರಿಯಲ್ಲಿ ನಾಗನ ಕುರಿತಾದ ನಂಬಿಕೆಯು ಸಂದರ್ಭೋಚಿತವಾಗಿ ಬರುತ್ತದೆ. ಅಂಬಕ್ಕೆಗೆ ಧಾರ್ಮಿಕ ಆಚರಣೆಯ ಪ್ರಜ್ಞೆ ಮತ್ತೆ ಮರುಕಳಿಸುತ್ತದೆ. ತನ್ನ ಕಾಲಾನಂತರ ಈ ಗುತ್ತನ್ನು ಮುಂದುವರಿಸಿಕೊಂಡು ಹೋಗುವ ಕುಡಿಯ ಬಗ್ಗೆ ಅವರು ಚಿಂತಿಸುತ್ತಾರೆ. ತನ್ನ ಅಜ್ಜಿ ಹೇಳಿದ ವಿಚಾರಗಳು ಅವರಿಗೆ ನೆನಪಾಗುತ್ತವೆ. ಇತ್ತೀಚೆಗೆ ನಾಗದೋಷದ ಕಾರಣದಿಂದ ಸಾಂತೇರುಗುತ್ತಿನಲ್ಲಿ ಒಂದು ಅಥವಾ ಎರಡು ಮಕ್ಕಳು ಮಾತ್ರ ಬದುಕಿ ಉಳಿಯುತ್ತಿದ್ದ ವಿದ್ಯಮಾನದಿಂದ ವಿಚಲಿತರಾದ ಅಂಬಕ್ಕೆಗೆ ತನ್ನ ಕಾಲದಲ್ಲಿ ಅದು ಇನ್ನೂ ಕಡಿಮೆಯಾದರೆ ಎನ್ನುವ ಭಯ ಆವರಿಸಿಕೊಂಡಿತು.

ಅಂಬಕ್ಕೆಯ ಮಗ ಸುಂದರ ಮುಂಬಯಿಯಿಂದ ಸಾಂತೇರುಗುತ್ತಿಗೆ ಬರಬೇಕಾದರೆ ಬಜ್ಪೆಯಿಂದ ಬಾಡಿಗೆಗೆ ಒಂದು ಟ್ಯಾಕ್ಸಿ ಮಾಡಿಕೊಂಡು ಬರುವಾಗ ನಾಗರ ಹಾವೊಂದು ಕಾರಿನಡಿಗೆ ಬಿದ್ದು ಸಾಯುತ್ತದೆ. ಟ್ಯಾಕ್ಸಿಯ ಚಾಲಕ ಬ್ಯಾರಿಯಾದರೂ ಅದನ್ನು ಕೊಂದ ಪಾಪ ಮಾತ್ರ ತನಗೆ ಬರುವುದೆಂದು ಬಹಳಷ್ಟು ನೊಂದುಕೊಂಡ ಆತ ಅಗ್ರಹಾರದಿಂದ ಬ್ರಾಹ್ಮಣರನ್ನು ಕರೆಸಿ ಸರ್ಪ ಸಂಸ್ಕಾರ ಮಾಡಿಸಿದ. ಉತ್ತರ ಕ್ರಿಯೆಯನ್ನೂ ತನ್ನ ಖರ್ಚಿನಲ್ಲೇ ಮಾಡಿಸಿದ. ಮುಂದೆ

ನಾಗಮಂಡಲ ಸೇವೆಯನ್ನೂ ಮಾಡಿಸುವ ಯೋಜನೆಯನ್ನು ಮನೆಯವರಲ್ಲಿ ತಿಳಿಸಿ ಅದನ್ನೂ ಕೈಗೊಳ್ಳುತ್ತಾನೆ.

ನಾಗಮಂಡಲ ಸೇವೆಯ ಆರ್ಥಿಕ ಜವಾಬ್ದಾರಿಯನ್ನು ತಾನೇ ತೆಗೆದುಕೊಳ್ಳುವುದಾಗಿ ಸುಂದರ ಹೆಗ್ಡೆ ಸೂಚಿಸುತ್ತಾನೆ. ಆದರೂ ಊರ ಪರವೂರ ಜನರು ಜಾತಿ, ಮತ ವ್ಯತ್ಯಾಸವಿಲ್ಲದೆ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತಾರೆ. ಹತ್ತು ಸಾವಿರ ಜನರು ಕುಳಿತುಕೊಳ್ಳುವಷ್ಟು ವಿಸ್ತಾರವಾದ ಜಾಗದಲ್ಲಿ ಈ ಸೇವೆಯು ಏರ್ಪಡುತ್ತದೆ. ಸಾಂತೇರುಗುತ್ತಿನಲ್ಲಿ ಎಂದೂ ಕಾಣದ ವೈಭವ ಕಂಡುಬರುತ್ತದೆ. ಅಂಬಕ್ಕೆಯಂತೂ ಸಂತೋಷ ಸಾಗರದಲ್ಲೇ ತೇಲಾಡುತ್ತಾರೆ. ತನ್ನ ಕಾಲದಲ್ಲಿ ತನ್ನಿಂದಾಗದ ಕೆಲಸವನ್ನು ತನ್ನ ಮಗ ನೆರವೇರಿಸಿದನಲ್ಲಾ ಮತ್ತು ತನ್ನ ವಂಶವು ಮುಂದೆ ಖಂಡಿತವಾಗಿಯೂ ಉತ್ತರೋತ್ತರ ಅಭಿವೃದ್ಧಿ ಕಾಣಬಹುದೆಂಬ ನಂಬಿಕೆ ಅವರಲ್ಲಿ ಬಲವಾಯಿತು. ನಾಗ ಪಾತ್ರಿಯ ದರ್ಶನ, ಜೊತೆಗೆ ವೈದ್ಯರ ಹಾಡು, ಬಡಿಯುವ ಚರ್ಮವಾದ್ಯದ ಸ್ವರ ಎಲ್ಲವೂ ಅವರನ್ನು ಒಂದು ವಿಶಿಷ್ಟ ಲೋಕಕ್ಕೆ ಕೊಂಡೊಯ್ದರೂ, "ಇದು ನಮ್ಮ ಭೂತದ ಕೋಲದಷ್ಟು ಆಪ್ತ ಅಲ್ಲ" ಎಂದೆನಿಸಿತು ಅವರಿಗೆ. ಆದರೆ ತಕ್ಷಣ ತನ್ನ ಯೋಚನೆ ತಪ್ಪೆಂದು ಅಂಬಕ್ಕೆ ಭಯದಿಂದ ಕೈ ಮುಗಿದರು. ಹಿರಿಯರು ಆಚರಿಸಿಕೊಂಡು ಬಂದಿರುವ ಈ ನಾಗಾರಾಧನೆಯ ಕುರಿತು ಮುಂದಿನ ತಲೆಮಾರಿನವರಾದ ಅಂಬಕ್ಕೆಯ ಮನಸ್ಸಿನಲ್ಲಾದ ಪಲ್ಲಟದ ಸೂಕ್ಷ್ಮ ಎಳೆಯನ್ನು ಇಲ್ಲಿ ಗುರುತಿಸಬಹುದು. ಆದರೂ ಅದನ್ನು ಮುಂದುವರಿಸಿಕೊಂಡು ಬರುವುದರ ಬಗ್ಗೆ ಅವರು ಗಮನ ಹರಿಸುತ್ತಾರೆ.

ಕುರಲ್ ಹಬ್ಬ: ಬೇಸಾಯಕ್ಕೆ ಸಂಬಂಧಿಸಿದಂತೆ ಬಂಟರಿಗೆ ಅವರದೇ ಆದ ನಿಲುವುಗಳಿವೆ ಮತ್ತು ಕ್ರಮಗಳಿವೆ. ಕೃಷಿ ಕೆಲಸ ಆರಂಭವಾಯಿತೆಂದರೆ ಗುತ್ತಿನ ಯಜಮಾನಿಗೆ ಭೂ ಸಂಬಂಧಿಯಾದ ಆಲೋಚನೆಗಳು ಗರಿಗೆದರುವ ಕ್ರಿಯಾಶೀಲ ಕಾಲ. ಯಜಮಾನನು ತಲೆಗೆ ಮುಂಡಾಸು ಕಟ್ಟಿಕೊಂಡು ಗದ್ದೆಯ ಬದುವಿನಲ್ಲಿ ನಿಂತು ಆಳುಗಳು ಉಳುವ, ನೇಜಿ ತೆಗೆಯುವ, ನಾಟಿ ಮಾಡುವ, ಕೊಯ್ಯುವ ಮುಂತಾದ ನಾನಾ ಕಲಾಪಗಳನ್ನು ನೋಡುವ ವೈಖರಿಯೇ ವಿಶಿಷ್ಟವಾದುದು. ಹೀಗೆ ಬೆಳೆದ ಭತ್ತದ ತೆನೆಗಳನ್ನು ಮೊದಲು ಮನೆಯೊಳಗೆ ತರುವುದೆಂದರೆ ಮನೆ

ತುಂಬಿಸಿದಂತೆ. 'ಪೊಲಿ' ತುಂಬಿಸುವುದು, 'ಸಿರಿ' ತುಂಬಿಸುವುದು, 'ಪೊಲ್ಸು' ತುಂಬಿಸುವುದು ಎಂಬ ಅರ್ಥದಲ್ಲಿ ಈ ಆಚರಣೆಯನ್ನು 'ಇಲ್ಲ್ ದಿಂಜಾಪುನೆ' (ಮನೆ ತುಂಬಿಸುವುದು) ಎನ್ನುತ್ತಾರೆ. ಸೋಣ ತಿಂಗಳಲ್ಲಿ ಬರುವ ಗೌರಿ ಹಬ್ಬ ಸಾಂತೇರುಗುತ್ತಿನ ಪಾಲಿಗೆ 'ಕುರಲ್ ಪರ್ಬ', ಅರ್ಥಾತ್ ಮನೆಗೆ ತೆನೆಯನ್ನು ತರುವ ಹಬ್ಬ. ಗುತ್ತಿನ ಮನೆಯ ಬೆಟ್ಟು, ಮಜಲು, ಬಯಲು, ಬಾಕಿಮಾರು ಯಾವ ಗದ್ದೆಯೇ ಇರಲಿ, ಅಲ್ಲಿ ಬೆಳೆದ ಪೈರನ್ನು ನೇರವಾಗಿ ಗುತ್ತಿನ ಅಂಗಳಕ್ಕೆ ತಂದು ಬಡಿದು ಭತ್ತ ಬಿಡಿಸುವಂತಿಲ್ಲ. ತುಳಸಿಕಟ್ಟೆಯ ಬಳಿ ದೊಡ್ಡ ಮಂಡಲವನ್ನು ಹಾಕಿ, ಅದರ ಮಧ್ಯೆ ಮತ್ತೊಂದು ಮಂಡಲ ಹಾಕಿ ಅದರ ಮಧ್ಯೆ ಒಂದು ದೊಡ್ಡ ಮಣೆಯನ್ನಿಡುತ್ತಾರೆ. ಹಬ್ಬದ ದಿನ ಗುತ್ತಿನ ಸ್ನಾನ ತೀರಿಸಿ, ಮಡಿಯಲ್ಲಿಯೇ ತಮ್ಮ 'ಗಡಿಹಿಡಿದ' ಸಾಂಪ್ರದಾಯಿಕ ವೇಷಭೂಷಣಗಳನ್ನು ಧರಿಸುತ್ತಾರೆ. ಮೊದಲ ದಿನ ಬಾಕಿಮಾರು ಗದ್ದೆಯ ಭತ್ತದ ಪೈರಿನ ಬುಡಕ್ಕೆ ಹಾಲು ಎರೆಯುವ ಕ್ರಮವಿದೆ. ಗದ್ದೆಯಿಂದ ಒಂದಷ್ಟು ಕದಿರನ್ನು ಕತ್ತರಿಸಿ, ಮಣೆಯ ಮೇಲೆ ಕುಡಿ ಬಾಳೆ ಎಲೆ ಹಾಸಿ, ಈ ಕದಿರಿನ ಜೊತೆಗೆ ಪೊಲಿಬಳ್ಳಿ, ದಡ್ಡಾಲದ ತೊಗಟೆ, ಹಲಸು, ಮಾವಿನ ಚಿಗುರು, ಬಿದಿರು ಸೊಪ್ಪು, ಎಳೆ ಸೌತೆಕಾಯಿ, ಹರಿವೆ ಗಿಡವನ್ನೂ ಗದ್ದೆಯ ಬಳಿಯೇ ಇಡುತ್ತಾರೆ. ಅದನ್ನು ಮರುದಿನ 'ಗುತ್ತಿನಾರ್' ತಲೆಯಲ್ಲಿ ಹೊತ್ತುಕೊಂಡು ತುಳಸಿ ಕಟ್ಟೆಗೆ ಸುತ್ತು ಬರುತ್ತಾರೆ. ಗುತ್ತಿನ ಯಜಮಾನಿ ಮತ್ತು ಮಗಳು ಕಾಲುದೀಪ ಹಿಡಿದುಕೊಂಡು, ಕುಂಕುಮ ಬೆರೆಸಿದ ತುಂಬೆ ಹೂ ಹಾಗೂ ಅಕ್ಕಿಕಾಳನ್ನು ದಾರಿಗೆ ಚೆಲ್ಲುತ್ತಾ ಮುನ್ನಡೆಯುತ್ತಾರೆ. 'ಪೊಲಿ ಪೊಲಿ' ಎಂದು ಹೇಳುತ್ತಾ ಮನೆಯ ಮೆಟ್ಟಿಲ ಬಳಿ ಬಂದಾಗ, ಯಜಮಾನಿ 'ಗುತ್ತಿನಾರ್'ರ ಕಾಲು ತೊಳೆದು ಅವರ ತಲೆಯ ಮೇಲಿದ್ದ ಕದಿರಿಗೆ ಸೇಸೆ ಹಾಕಿ ಕುಂಕುಮ ಅರ್ಚನೆ ಮಾಡುತ್ತಾರೆ. ಬಳಿಕ 'ಗುತ್ತಿನಾರ್' ಕದಿರನ್ನು ದೈವದ ಉಯ್ಯಾಲೆ ಮುಂದೆ ಇಟ್ಟು ಮಣೆಯಲ್ಲಿ ಇಡುತ್ತಾರೆ. ಅಕ್ಕಿ, ತೆಂಗಿನಕಾಯಿಗಳನ್ನಿಟ್ಟು ಹೂ ಆರತಿ ಬೆಳಗುತ್ತಾರೆ. ಮುಂದೆ ಕದಿರು ಮತ್ತು ಅದರ ಜೊತೆಗಿರುವ ಬೇರೆ ಬೇರೆ ಸಸ್ಯದ ಎಲೆಗಳನ್ನು ನಾರಿನಿಂದ ಕಟ್ಟಿ ದೈವದ ಮಂಚಕ್ಕೆ, ಗುತ್ತಿನ ಮನೆಯ ಚಾವಡಿಯ ಕಂಬಕ್ಕೆ, ತುಳಸಿ ಕಟ್ಟೆಗೆ,

ತೊಟ್ಟಿಲು ಹೀಗೆ ವಿವಿಧ ಕಡೆಗೆ ಕಟ್ಟುತ್ತಾರೆ. ಜೊತೆಗೆ ತಮ್ಮ ಮೂಲದಾಳುಗಳಿಗೂ ‘ಕುರಲ್’ ಕಟ್ಟಲು ಕೊಡುತ್ತಾರೆ.

‘ಕುರಲ್’ ಹಬ್ಬದ ದಿನವೇ ಗುತ್ತಿನ ಮನೆಯಲ್ಲಿ ಹೊಸ ಅಕ್ಕಿಯ ಊಟವನ್ನೂ ಮಾಡುತ್ತಾರೆ. ಭತ್ತದ ಕದಿರಿನ ಹಾಲು (ಅಕ್ಕಿ) ತೆಗೆದು ಅನ್ನಕ್ಕೆ ಅಥವಾ ಪಾಯಸಕ್ಕೆ ಹಾಕಿ ಕ್ರಮಬದ್ಧವಾಗಿ ಊಟ ಮಾಡುತ್ತಾರೆ. ಗುತ್ತಿನ ಯಜಮಾನಿಯೇ ಎಲ್ಲಾ ಜವಾಬ್ದಾರಿಯನ್ನು ತೆಗೆದುಕೊಂಡು ಆಹ್ವಾನಿತರಿಗೆ, ಗುತ್ತಿನ ಮನೆಯ ಒಕ್ಕಲುಗಳಿಗೆ, ಕೂಲಿಯಾಳುಗಳಿಗೆ ಎಲ್ಲರಿಗೂ ಕುಡಿ ಬಾಳೆ ಎಲೆಯಲ್ಲೇ ಊಟ ಬಡಿಸುತ್ತಾರೆ. ಏಳು, ಒಂಭತ್ತು ಅಥವಾ ಹನ್ನೊಂದು ಬಗೆಯ ಶುದ್ಧ ಸಸ್ಯಾಹಾರದ ವ್ಯಂಜನಗಳು ಈ ಊಟದ ಜೊತೆಗಿರುತ್ತವೆ. ಬಂದವರೆಲ್ಲರೂ ಪರಸ್ಪರ ‘ಹೊಸ ಅಕ್ಕಿ ಊಟ ಮಾಡುತ್ತೇವೆ’ ಎಂದು ಹೇಳಿಕೊಳ್ಳುತ್ತಾ ಬಹಳ ಸಂಭ್ರಮ, ಸಡಗರದಿಂದ ಊಟ ಮಾಡುತ್ತಾರೆ.

‘ಉಲ್ಲಂಘನೆ’ ಕಾದಂಬರಿಯಲ್ಲಿ ಶಾಂತಕ್ಕೆ ಮತ್ತು ಅಂಬಕ್ಕೆಯವರ ಕಾಲಘಟ್ಟದಲ್ಲಿ ಈ ಆಚರಣೆ ಸಸೂತ್ರವಾಗಿ ನಡೆದುಬಂದಿದೆ. ಆದರೆ ಮುಂದೆ ಭತ್ತದ ಗದ್ದೆಗಳೆಲ್ಲಾ ಹೋಗಿ ಅಡಕೆ ತೋಟಗಳು ಬಂದಾಗ ಮತ್ತು ಹೊಸತಲೆಮಾರಿನ ಯುವಕರು ಉದ್ಯೋಗಾರ್ಥವಾಗಿ ನಗರ ಪ್ರದೇಶಗಳಿಗೆ ಧಾವಿಸಿದಾಗ ಈ ಆಚರಣೆಗಳು ಆಕರ್ಷಣೆ ಕಳೆದುಕೊಂಡು ನಿಧಾನವಾಗಿ ಇಲ್ಲವಾಗುತ್ತವೆ.

ಪೊಲಿ: ‘ಪೊಲಿ’ ಎಂದರೆ ಸಮೃದ್ಧಿ ಎಂದರ್ಥ. ಏಣೆಲ್ ಬೆಳೆಯ ಮೊದಲ ಕೊಯ್ಲು ಮನೆಯಂಗಳಕ್ಕೆ ತರುವಾಗ ಪೈರಿನ ಮೂರು ಸೂಡಿಗಳನ್ನು ಮನೆಯ ಅಥವಾ ಹಟ್ಟಿಯ ಮಾಡಿಗೆ ಎಸೆಯುವ ಕ್ರಮ ಇದೆ. ಮೂಲದಾಳುಗಳು ಇದನ್ನು ನಿರ್ವಹಿಸುತ್ತಾರೆ. ‘ಪೊಲಿ’ ತುಂಬಲಿ ಎಂದು ಜೋರಾಗಿ ಕೂಗಿ ಹೇಳುತ್ತಾರೆ. ‘ಆ ಜಾಲ ಪೊಲಿ, ಈ ಜಾಲ ಪೊಲಿ, ಎಳ್ಪತ್ತೇಳ್ ಜಾಲ ಪೊಲಿ.......’ ಎಂದು ಹಾಡುತ್ತಾ ಪೈರಿನ ಸೂಡಿಗಳನ್ನು ಪಡಿಮಂಚಕ್ಕೆ ಬಡಿಯುತ್ತಾರೆ. ಕಾದಂಬರಿಯಲ್ಲಿ ಮೊದಲೆರಡು ತಲೆಮಾರುಗಳಲ್ಲಿ ಮೂಲದಾಳುಗಳು, ಗೇಣಿದಾರರ ನೆರವಿನಿಂದ ಈ ಕ್ರಮ ಸಸೂತ್ರವಾಗಿ ನಡೆದು ಬಂದದ್ದು ಕಾಣುತ್ತದೆ. ಸರಕಾರದ ಭೂಮಸೂದೆ ಕಾನೂನು ಜ್ಯಾರಿಯಾದ ಬಳಿಕ ಈ ಆಚರಣೆಯಲ್ಲಿ ವ್ಯತ್ಯಯ ಉಂಟಾಯಿತು. ಈ

ರೀತಿಯ ವ್ಯತ್ಯಯಗೊಳ್ಳಲು ಧನಿ-ಒಕ್ಕಲು ಸಂಬಂಧಗಳು ನಂಬಿಕೆಗಿಂತ ಹೆಚ್ಚಾಗಿ ಅಪನಂಬಿಕೆಯತ್ತ ವಾಲಿದ್ದೇ ಮುಖ್ಯ ಕಾರಣ.

ಗುತ್ತಿನ ಮನೆಯ ಗದ್ದೆ ಕೊಯ್ಲಿನ ಸಮಯದಲ್ಲಿ ಪೈರನ್ನು ಹೊಡೆಯುವ ದಿನ ಮೂಲದಾಳುಗಳು, ಗೇಣಿದಾರರು ಬೆಳಗಾಗುವ ಮೊದಲೇ ಬಂದು ಅಂಗಳದಲ್ಲಿ ಹಾಜರಾಗುತ್ತಿದ್ದರು. ಆದರೆ ಈಗ ಹಾಗಿಲ್ಲ. ಗಂಟೆ ಒಂಬತ್ತಾದರೂ ಒಬ್ಬರೂ ಆಳುಗಳು ಕಾಣುವುದಿಲ್ಲ. ಸಂಕಪ್ಪ ಹೆಗ್ಡೆ ಮತ್ತು ಸುಂದರ ಇಬ್ಬರೂ, ಕೆಲಸದವರು ಬರುವವರೆಗೆ ನಾವು ಒಂದಿಷ್ಟು ಮಾಡಬಹುದಲ್ಲಾ ಎಂದು ಪೈರು ಹೊಡೆಯತೊಡಗಿದರು. ಗುತ್ತಿನ ಅಂಗಳದಲ್ಲಿ ಈ ತನಕ ಯಾವ ಯಜಮಾನನೂ ಈ ರೀತಿ ಪೈರು ಹೊಡೆದಿಲ್ಲ. ಆದರೆ ಈಗ ಅದು ಅನಿವಾರ್ಯ! ಅಂಬಕ್ಕಗೆ ಅಸಮಾಧಾನವಾದರೂ ತಾನೂ ಅವರ ಜೊತೆಗೆ ಸೇರಿಕೊಳ್ಳುತ್ತಾರೆ. ಸಂಕಪ್ಪಣ್ಣ 'ಪೊಲಿ ಪೊಲಿ' ಎಂದು ಹೇಳಿ ಆರಂಭಿಸಬೇಕಿತ್ತು. ಆದರೆ ಅವನು ಹಾಗೆ ಮಾಡದೇ ಇದ್ದಾಗ ಅಂಬಕ್ಕೆಯೇ ಒಂದು ಸೂಡಿಯನ್ನೆತ್ತಿಕೊಂಡು 'ಪೊಲಿ ಪೊಲಿ ಪೊಲಿ ಎಚ್ಚಲಾ' ಎಂದು ಏರುಸ್ವರದಲ್ಲಿ ಹೇಳಿದರು. ಸುಂದರನೂ ಇದಕ್ಕೆ ದನಿಗೂಡಿಸಿದ. ಆದರೆ ನಾಲ್ಕು ಸೂಡಿಗಳನ್ನು ಬಡಿಯುವಷ್ಟರಲ್ಲಿ ಸುಂದರನು 'ಅಬ್ಬ' ಎಂದು ಉಸಿರುಬಿಟ್ಟು ಕೈ ಕಟ್ಟಿ ನಿಂತುಕೊಳ್ಳುತ್ತಾನೆ. ಗುತ್ತಿನ ವೈಭವದ ದಿನ ಇಂದಿಗೆ ಮುಗಿದೇ ಹೋಯಿತೆಂದು ಅಂಬಕ್ಕೆ ಸಂಕಟಪಡುತ್ತಾರೆ. ತಮ್ಮ ಭೂಮಿ ಗೇಣಿದಾರರ ಪಾಲಾದಾಗಲೂ ಇಷ್ಟೊಂದು ನೊಂದುಕೊಳ್ಳದ ಅಂಬಕ್ಕೆ, ಇನ್ನು ಮುಂದೆ ಈ ಬಾಕಿಮಾರು ಗದ್ದೆಯಲ್ಲಿ ಭತ್ತದ ಬೆಳೆ ಬೆಳೆಸುವುದಿಲ್ಲ ಎಂಬ ತನ್ನ ನಿರ್ಧಾರವನ್ನು ಮಾಡಿಕೊಳ್ಳುತ್ತಾ ದುಃಖಿಸುತ್ತಾರೆ.

ಕಂಬಳ (ಕಂಬುಲ): ಕರಾವಳಿ ಕರ್ನಾಟಕದ ಪ್ರಸಿದ್ಧ ಜನಪ್ರಿಯ ಜಾನಪದ ಕ್ರೀಡೆ 'ಕಂಬುಲ'. ವಿಶಾಲವಾದ ಕೆಸರು ಗದ್ದೆಗಳಲ್ಲಿ ಕೋಣಗಳನ್ನು ಓಡಿಸಿ, ಗೆದ್ದ ಕೋಣಗಳ ಯಜಮಾನನಿಗೆ ಬಹುಮಾನ ನೀಡುತ್ತಾರೆ. ಸುಗ್ಗಿ ಬೆಳೆಯ ಸಮಯದಲ್ಲಿ ಈ ಕ್ರೀಡೆ ನಡೆಯುತ್ತದೆ. "ಕಂಬುಲವು ಕೇವಲ ಓಟದ ಕೋಣಗಳ ಸ್ಪರ್ಧೆಯೂ ಅಲ್ಲ, ಜನಪದರ ಮನರಂಜನಾ ಸಾಮಗ್ರಿಯೂ ಅಲ್ಲ, ಬದಲಾಗಿ ಸಾಮಾಜಿಕ,

ಆರ್ಥಿಕ, ರಾಜಕೀಯ ಆಯಾಮವುಳ್ಳ ಫಲವಂತಿಕೆಯ ಆಚರಣೆ'' (ಪುರುಷೋತ್ತಮ ಬಿಳಿಮಲೆ, ೧೯೯೦, ಪುಟ ೪೯)

ಕಂಬಳಕ್ಕೆ ಚಾವಡಿ ದೈವ, ಗ್ರಾಮ ದೈವ ಅಥವಾ ಸೀಮೆ ದೈವದ ಪ್ರವೇಶವೂ ಇದೆ. ಆದುದರಿಂದ ಈ ಕ್ರೀಡೆಗೆ ಧಾರ್ಮಿಕ ಮಹತ್ವವೂ ಇದೆ. ಈ ಕಂಬಳವನ್ನು ಒಮ್ಮೆ ಆರಂಭಿಸಿದರೆ ಮತ್ತೆ ಎಂದೂ ನಿಲ್ಲಿಸಬಾರದು. ಮಂಜೊಟ್ಟಿ ಗದ್ದೆ (ಕಂಬಳ ನಡೆಯುವ ಗದ್ದೆ)ಯಲ್ಲಿ 'ಪೂಕರೆ' (ಒಂದು ಕಂಬ) ಹಾಕುತ್ತಾರೆ. ಈ ಕಂಬವು ಆಯಾ ಕಂಬಳ ಗದ್ದೆಯ ಒಡೆಯನ ಅಧಿಕಾರವನ್ನು ಪ್ರತಿನಿಧಿಸುತ್ತದೆ.

ಸಾಂತೇರ್ ಗುತ್ತಿನಲ್ಲಿ ಹಿಂದೆ ಹದಿಮೂರು ನಿಲೆ (ನೆಲೆ) ಪೂಕರೆಯ ಕಂಬಳ ನಡೆಯುತ್ತಿತ್ತು. ಆ ಪೂಕರೆ ಕಂಬವನ್ನು ಕೊಣಾಜೆ ಗುತ್ತಿನ ಮೂಲದಾಳುಗಳು ರಾತೋ ರಾತ್ರಿ ಕದ್ದೊಯ್ದ ಕಾರಣ ಮತ್ತೆ ಅಲ್ಲಿ ಕಂಬಳವು ನಿಂತು ಹೋಯಿತು. ಗುತ್ತಿನೊಡತಿ ಶಾಂತಕ್ಕೆ, ಗರ್ಭಿಣಿಯ ಬಯಕೆಯೆಂಬಂತೆ ತನಗೆ ಕಂಬಳವನ್ನು ನೋಡುವ ಆಸೆಯನ್ನು ವ್ಯಕ್ತಪಡಿಸುತ್ತಾರೆ. 'ಗುತ್ತಿನಾರ್' ಈ ಬಗ್ಗೆ ಬಹಳಷ್ಟು ತಲೆಕೆಡಿಸಿಕೊಳ್ಳುತ್ತಾರೆ. ಶಾಂತಕ್ಕೆಯ ಗಂಡ ಕೋಚಣ್ಣ ರೈಗಳಲ್ಲಿ ಈ ಬಗ್ಗೆ ವಿಚಾರಿಸಿದಾಗ ಅವರು ನಾವು ಕ್ರೀಡೆಯ ರೂಪದಲ್ಲಿ ಬೇರೆಯೇ ಗದ್ದೆಯಲ್ಲಿ ಕಂಬಳ ನಡೆಸಬಹುದೆಂಬ ಸೂಚನೆ ಕೊಡುತ್ತಾರೆ. 'ಗುತ್ತಿನಾರ್'ಗೆ ಇದು ಸರಿಯೆಂದೆನಿಸಿದರೂ "ಯಾರೂ ಮಾಡದ ರೀತಿಯಲ್ಲಿ ಮಾಡಿದರೆ ನಾವು ಮತ್ತೆ ನಗೆಗೆ ಈಡಾಗಬಾರದಲ್ಲಾ?'' ಎನ್ನುತ್ತಾರೆ. ಇಲ್ಲಿ ಕೋಚಣ್ಣ ರೈಗಳು ಹೇಳುವ ಮಾತುಗಳು ಗಮನಾರ್ಹ. "ಕಟ್ಟಳೆ, ಸಂಪ್ರದಾಯ, ಪರಂಪರೆ ಎನ್ನುವುದೆಲ್ಲ ಈ ಭೂಮಿ ಹುಟ್ಟಿದಾಗ ಇರಲಿಲ್ಲ. ಅದನ್ನು ನಮ್ಮ ಹಿರಿಯರೇ ಸೃಷ್ಟಿಸಿದ್ದು! ಅವರವರ ಅನುಕೂಲಕ್ಕಾಗಿ; ನಾವೂ ಅಷ್ಟೆ'' ಎನ್ನುತ್ತಾರೆ. (ಉಲ್ಲಂಘನೆ, ಪುಟ ೨೩೩).

ಹೀಗೆ ಸಾಂತೇರುಗುತ್ತಿನಲ್ಲಿ ಹಿಂದೆಂದೂ ಆಗದ ರೀತಿಯಲ್ಲಿ ಜನರ ವಿರೋಧದ ಮಾತುಗಳ ಜೊತೆಗೆ ಹೊಸರೀತಿಯಲ್ಲಿ ಕಂಬಳ ನಡೆಯಿತು. ಊರ ಜನರ ಸಹಕಾರ ಮತ್ತು ಭರ್ಜರಿ ಭೋಜನದೊಂದಿಗೆ ಯಾವ ತಕರಾರೂ ಇಲ್ಲದೆ ಜನಮನ್ನಣೆಯನ್ನು ಗಳಿಸಿಕೊಂಡಿತು ಸಾಂತೇರ್‌ಗುತ್ತಿನ ಕಂಬಳ.

ಸಂಕ್ರಮಣ, ಯುಗಾದಿ ಹಬ್ಬ (ವಿಶು): ತುಳುನಾಡಿನ ಎಲ್ಲ ಹಬ್ಬಗಳಿಗೂ, ಕೃಷಿಕಾರ್ಯಗಳಿಗೂ ಒಂದು ರೀತಿಯ ಅವಿನಾಭಾವ ಸಂಬಂಧವಿದೆ. ಕೃಷಿಯ

ಹೊರತಾದ ಹಬ್ಬಗಳ ಆಚರಣೆ ತುಳುನಾಡಿನಲ್ಲಿ ಇಲ್ಲವೆಂದೇ ಹೇಳಬಹುದು. 'ಸಂಕ್ರಮಣ' ಎಂಬುದು ತುಳುನಾಡಿನ ಲೆಕ್ಕಾಚಾರದಂತೆ ಹೊಸ ವರುಷದ ಪ್ರಥಮ ತಿಂಗಳಾದ 'ಪಗ್ಗು' ಕಾಲಿಡುವ ಶುಭದಿನ. ತುಳುವರ 'ಯುಗಾದಿ' ಸೌರಮಾನದ ಲೆಕ್ಕದಲ್ಲಿ ಬರುತ್ತದೆ. ಯುಗಾದಿಯನ್ನು ತುಳುವರು 'ಬಿಸು' (ವಿಶು) ಎನ್ನುತ್ತಾರೆ. ಆ ದಿನ 'ಕಣಿ ಇಡುವುದು' ಎಂಬ ಆಚರಣೆಯನ್ನು ಮಾಡುತ್ತಾರೆ.

ಸಾಂತೇರ್‌ಗುತ್ತಿನಲ್ಲಿ ಗುತ್ತಿನ ಚಾವಡಿಯಲ್ಲಿ ಶಾಂತಕ್ಕೆಯೇ ಮಂಡಲವನ್ನು ಬರೆದು ಅದರ ಹಿಂಬದಿಯಲ್ಲಿ ಪೂರ್ವಾಭಿಮುಖವಾಗಿ ಒಂದು ನಿಲುಗನ್ನಡಿಯನ್ನು ಗೋಡೆಗೆ ಆನಿಸಿ ಇಡುತ್ತಾರೆ. ಆ ಬಳಿಕ ಮೂಲದಾಳುಗಳು, ಗೇಣಿದಾರರು ತಂದೊಪ್ಪಿಸಿದ ಎಣ್ಣೆ, ತಾವೇ ನೇಯ್ದ ಹೊಸ ಸೀರೆ, ಹೊಸ ನೇಗಿಲು, ಪೈರು ಕೊಯ್ಯುವ ಕತ್ತಿ, ಹೊಸ ಬಾವಡೆಗಳು (ಮುಚ್ಚಳಗಳು) ಮತ್ತು ಬೀಜದ ಬೆಂಡು (ಗೇರು ಬೀಜದ ತಿರುಳು) ಎಲ್ಲವನ್ನೂ ಕನ್ನಡಿಯೆದುರು ಇಡುತ್ತಾರೆ. ಗುತ್ತಿನ ಯಜಮಾನ, ಯಜಮಾನಿಗೆ ಇದನ್ನು ನೋಡಿ ಕಣ್ತುಂಬಿ ಬರುತ್ತಿತ್ತು. ಮರುದಿನ ಬೆಳಗ್ಗೆ ಗುತ್ತಿನ ಗೇಣಿದಾರರ ಮನೆಯ ಯಜಮಾನರೆಲ್ಲಾ ಒಬ್ಬೊಬ್ಬರಾಗಿ ಬಂದು ಗುತ್ತಿನ ಯಜಮಾನ, ಯಜಮಾನಿಗೆ ನಮಸ್ಕರಿಸಿ ಜಗಲಿಯಲ್ಲಿ ನಿಲ್ಲುತ್ತಿದ್ದರು. ಮುಂದೆ, ಈ ವರ್ಷ ಯಾರಿಗೆಲ್ಲಾ ಭೂಮಿಯನ್ನು ಗೇಣಿಗೆ ಕೊಡುವುದೆಂದು ಆ ದಿನ ನಿಷ್ಕರ್ಷೆಯಾಗುತ್ತಿತ್ತು. ಗುತ್ತಿನ ಯಜಮಾನಿಯ ಆಣತಿಯಂತೆ ಈ ಕಾರ್ಯ ನಡೆಯುತ್ತಿತ್ತು. ಯಜಮಾನಿಯ ವಿರುದ್ಧವಾಗಿ 'ಗುತ್ತಿನಾರ್'ರು ನಡೆದುಕೊಳ್ಳುವುದು ಯಾವ ಗುತ್ತಿನಲ್ಲೂ, ಎಂದೂ ಸಾಧ್ಯವಿರಲಿಲ್ಲ. ಹೀಗೆ ಪ್ರತಿಯೊಬ್ಬ ಗೇಣಿದಾರರೂ ತಮ್ಮ ತಮ್ಮ ಪ್ರವರ ಒಪ್ಪಿಸುತ್ತಿದ್ದರು. ಎಲ್ಲವೂ ಸರಿಯಿದೆ ಎಂದಾದ ಮೇಲೆ ಆ ದಿನ ಬಂದ ಗೇಣಿ ಅಕ್ಕಿಯನ್ನು 'ಕುತ್ತಟ್ಟ'(ಅಕ್ಕಿ ಮುಡಿಗಳನ್ನು ಹಾಕುವ ಎತ್ತರವಾದ ಅಟ್ಟ)ಕ್ಕೆ ಹಾಕಿಸುತ್ತಿದ್ದರು. ಈ ದೃಶ್ಯದಿಂದ ಶಾಂತಕ್ಕೆ ತುಂಬಾ ಸಂಭ್ರಮಿಸುತ್ತಾರೆ.

ಯುಗಾದಿಯ ದಿನ ಮೂಲದಾಳು ಉತ್ತ ಹೊಲಕ್ಕೆ 'ಗುತ್ತಿನಾರ್' ಸಾಂಕೇತಿಕವಾಗಿ ಬೀಜ ಹಾಕಬೇಕೆಂಬ ಸಂಪ್ರದಾಯ ಮೊದಲಿನಿಂದಲೂ ನಡೆದು ಬಂದಿದೆ. ತಮ್ಮ ಮನೆ ದೈವವನ್ನು ಸ್ಮರಿಸಿಕೊಂಡು ಗದ್ದೆಗೆ 'ಗುತ್ತಿನಾರ್' ಬೀಜ ಹಾಕುತ್ತಾರೆ. ಮನೆ ಮಂದಿಯೆಲ್ಲಾ ಇವರ ಜೊತೆಗೆ ಸಂಭ್ರಮಿಸುತ್ತಾರೆ. ಆ ದಿನ

ಗುತ್ತಿನವರಿಗೆ ಮಾತ್ರವಲ್ಲ, ಗೇಣಿದಾರರಿಗೆ, ಮೂಲದಾಳುಗಳಿಗೆಲ್ಲಾ ಹಬ್ಬದ ಊಟ. ಯಾರೂ ಇದರಿಂದ ತಪ್ಪಿಸಿಕೊಳ್ಳುವಂತಿಲ್ಲ. ಎಲ್ಲರೂ ಹೊಟ್ಟೆ ತುಂಬಾ ಉಂಡು 'ಗುತ್ತಿನ ಮನೆಗೆ ಒಳ್ಳೆಯದಾಗಲಿ' ಎಂದು ಹಾರೈಸುತ್ತಿದ್ದರು. ಅಲ್ಲಿ ಊಟ ಸ್ವೀಕರಿಸದ ಬ್ರಾಹ್ಮಣ ಗೇಣಿದಾರರೂ ಕೂಡಾ ಆ ದಿನ ಬಂದು ಗೇಣಿಯ ಕುರಿತು ಮಾತುಕತೆ ನಡೆಸಿ ಹೋಗುತ್ತಿದ್ದರು. ಅಂತಹ ಬ್ರಾಹ್ಮಣರಿಗೆ ಯಜಮಾನಿ ಪ್ರತಿವರ್ಷವೂ ಗುತ್ತಿನ ಗೌರವ ಎಂದು ಬಾಳೆಹಣ್ಣು ಮತ್ತು ಸಕ್ಕರೆಯನ್ನು ಕೊಡುತ್ತಿದ್ದರು. ಒಟ್ಟಿನಲ್ಲಿ ಸಾಂತೇರುಗುತ್ತಿನಲ್ಲಿ ಯುಗಾದಿ ಹಬ್ಬದಂದು ಎಲ್ಲರೂ ಸೇರಿ ಸಂತೋಷ ಪಡುತ್ತಿದ್ದರು. ಇಂದು ಅಡಿಕೆ ತೋಟಗಳ ಕಾರಣದಿಂದ ಈ ಸಂಭ್ರಮವನ್ನು ನೋಡುವುದು ಕಷ್ಟ ಸಾಧ್ಯ. ಗುತ್ತಿನ ಬಾಕಿಮಾರ್ ಗದ್ದೆಯು ಅಡಿಕೆ ತೋಟವಾಗಿ ಪರಿವರ್ತನೆಗೊಂಡ ಬಳಿಕ ಕುರಲ್ ಹಬ್ಬವಾಗಲೀ, ಹೊಸಕ್ಕಿ ಊಟವಾಗಲೀ ಕಷ್ಟದ ಮಾತು.

ಭೂತಾರಾಧನೆ: ತುಳುನಾಡಿನಲ್ಲಿ ಭೂತ(ದೈವ)ದ ಆರಾಧನೆ ಸರ್ವೇ ಸಾಮಾನ್ಯ. ಇಲ್ಲಿ ದೈವವನ್ನು 'ಭೂತ' ಎನ್ನುವುದಕ್ಕಿಂತ ಹೆಚ್ಚಾಗಿ 'ಸತ್ಯ' ಎಂದು ಸಂಬೋಧಿಸುತ್ತಾರೆ. ಇದಕ್ಕೆ ಸಂಬಂಧಿಸಿದಂತೆ 'ಸತ್ಯದ ಚಾವಡಿ', 'ಸತ್ಯದ ದೈವ', 'ಸತ್ಯದ ಮಣ್ಣು' ಎಂಬ ಪದಗಳು ಹೆಚ್ಚಾಗಿ ಬಳಕೆಯಾಗುತ್ತವೆ. ಪ್ರತಿಯೊಂದು ಗುತ್ತಿನಲ್ಲಿಯೂ ಒಂದೊಂದು ದೈವವನ್ನು ನಂಬಿಕೊಂಡು ಬರುತ್ತಾರೆ. ಸಾಮಾನ್ಯವಾಗಿ ದೈವ ದರುಶನದ ಪ್ರಾರಂಭದಲ್ಲಿ ದೈವ ಕೊಡುವ ಮೊದಲ ನುಡಿಯೇ, "ಸತ್ಯದ ಚಾವಡಿ ಇದು. ಸತ್ಯದ ದೈವ ನಾನು. ಸತ್ಯದ ಮಣ್ಣಿಗೆ, ಸತ್ಯದ ಚಾವಡಿಗೆ ಬಲದ ಕಾಲಿಟ್ಟು ಬಂದ ಸತ್ಯ ನಾನು. ಸೂರ್ಯ ಚಂದ್ರರಿರುವಷ್ಟು ಕಾಲ ಈ ನಾಡಿನ, ಈ ಚಾವಡಿಯ, ಈ ಮಣ್ಣಿನ ಸತ್ಯಕ್ಕೆ ಚ್ಯುತಿ ಬಾರದಂತೆ ನೋಡಿಕೊಳ್ಳುತ್ತೇನೆ" ಎಂಬುದಾಗಿದೆ. (ಇಂದಿರಾ ಹೆಗ್ಗಡೆ, ೨೦೦೪, ಪುಟ ೪೩೪).

ಮನೆಗಳ ಚಾವಡಿಯಲ್ಲಿ ದೈವಗಳ ಭಂಡಾರಗಳನ್ನಿಡಲು ನಿರ್ದಿಷ್ಟವಾದ ಜಾಗವಿದೆ. ಆ ಗ್ರಾಮಕ್ಕೆ ವಲಸೆ ಬಂದು ನೆಲೆ ನಿಂತ ಯಾರೇ ಆದರೂ ಅಥವಾ ಗುತ್ತನ್ನು ಖರೀದಿ ಮಾಡಿದ ಬಂಟ ಕುಟುಂಬವಾದರೂ ಆ ಗ್ರಾಮದ ಗುತ್ತಿನಲ್ಲಿ ನೆಲೆಸಿದ ಮೇಲೆ ಆ ಗುತ್ತಿನ ಪೂರ್ವ ಪರಂಪರೆಯ ಮರ್ಯಾದೆಗಳಿಗೆ,

ವಿಧಿನಿಯಮಗಳಿಗೆ ಬದ್ಧರಾಗಬೇಕು. ಅವನು ಮೂಲ ಮನೆಯಿಂದ ಬಿಟ್ಟು ಬಂದ ದೈವ ಅವನ ಹಿಂದೆ ಬರುವುದಿಲ್ಲ. ಅವನು ನೆಲೆಸಿರುವ ಗುತ್ತಿನ ಚಾವಡಿ ದೈವವೇ ಅವನ ಕುಟುಂಬ ದೈವವಾಗಿರುತ್ತದೆ.

'ಉಲ್ಲಂಘನೆ' ಕಾದಂಬರಿಯಲ್ಲಿ ಬರುವ ಸಾಂತೇರುಗುತ್ತಿನಲ್ಲಿ ಜುಮಾದಿ ದೈವವನ್ನು ಬಹಳ ಭಕ್ತಿಯಿಂದ ನಂಬಿಕೊಂಡು ಬಂದಿದ್ದಾರೆ. ಗುತ್ತಿನ ಮತ್ತು ಕುಟುಂಬದವರ ಎಲ್ಲಾ ಒಳಿತು ಕೆಡುಕುಗಳು ಆ ತಾಯಿಯದು ಎಂದು ಭಾವಿಸುತ್ತಾರೆ. ಪ್ರತಿದಿನ ಬೆಳಗ್ಗೆ ಚಾವಡಿಯಲ್ಲಿ ದೈವಕ್ಕೆ ಹೂ, ನೀರನ್ನು ಇಡುವ ಸಂಪ್ರದಾಯವಿದೆ. ಗುತ್ತಿನ ಯಜಮಾನನಾದ 'ಗುತ್ತಿನಾರ್' ಈ ಕೆಲಸವನ್ನು ಬಹಳ ನಿಷ್ಠೆಯಿಂದ ಮಾಡುತ್ತಾರೆ. ವರ್ಷಕ್ಕೊಮ್ಮೆ ತಂಬಿಲ ಅಥವಾ ಕೋಲವನ್ನು ಕೊಡುವ ಮೂಲಕ ಎಲ್ಲಾ ಜನರು ಒಟ್ಟು ಸೇರುವಂತೆ ಮಾಡುತ್ತಾರೆ. ಗುತ್ತಿನ ಮನೆಯ ಮೂಲದಾಳುಗಳು ಕೂಡಾ ಗುತ್ತಿನ ದೈವದ ಬಗ್ಗೆ ತುಂಬಾ ನಂಬಿಕೆಯನ್ನಿಟ್ಟುಕೊಂಡಿರುತ್ತಾರೆ. ಕಾದಂಬರಿಯಲ್ಲಿ ಎರಡು ತಲೆಮಾರುಗಳಾದ ವೆಂಕಪ್ಪ ಹೆಗ್ಡೆ ಮತ್ತು ಶೀನಪ್ಪ ಹೆಗ್ಡೆ ಚಾಚೂ ತಪ್ಪದೆ ಎಲ್ಲ ಕ್ರಮಗಳನ್ನು ನಡೆಸಿಕೊಂಡು ಬರುತ್ತಾರೆ. ಮೂರನೆಯ ತಲೆಮಾರಿನವರಾದ ಸಂಕಪ್ಪ ಹೆಗ್ಡೆ ಕಾಲಕ್ಕೆ ಬಹಳಷ್ಟು ಸ್ಥಿತ್ಯಂತರಗಳು ಉಂಟಾಗುತ್ತವೆ. ಸಂಕಪ್ಪ ಹೆಗ್ಡೆಗೆ ತಮ್ಮ ಪೂರ್ವಜರಂತೆ 'ಗುತ್ತಿನಾರ್' ಎಂದೆನಿಸಿಕೊಳ್ಳುವ ಮನಸ್ಸಿಲ್ಲ. 'ಪರಕೀಯರ ಅಧೀನದಲ್ಲಿರುವ ನಾವು ನಿಜವಾದ ಒಡೆತನ ಸಿಗಬೇಕಾದರೆ ಅದರಿಂದ ಬಿಡುಗಡೆಗೊಳ್ಳಬೇಕು' ಎಂಬ ಗಾಂಧೀಜಿಯವರ ಕರೆಗೆ ಓಗೊಟ್ಟು ಗುತ್ತಿನಿಂದಲೇ ದೂರವಾಗುತ್ತಾರೆ. ಆದರೆ ಯಾವುದೂ ತಾನೆಣಿಸಿದಂತೆ ಆಗಲಿಲ್ಲ. ಜೊತೆಗೆ ತಾಯಿ ಶಾಂತಕ್ಕೆಯ ಕರುಳ ಕರೆ ಮತ್ತೆ ಅವರನ್ನು ಗುತ್ತಿಗೆ ಬರುವಂತೆ ಮಾಡುತ್ತದೆ. 'ತಾವು ನಂಬಿದ ದೈವಕ್ಕೆ ಹರಕೆ ಹೇಳಿದ ಪರಿಣಾಮವೇ ಸಂಕಪ್ಪ ಹೆಗ್ಡೆ ಮತ್ತೆ ಮನೆಗೆ ಬರಲು ಸಾಧ್ಯವಾಯಿತು' ಎಂಬ ನಂಬಿಕೆಯೊಂದಿಗೆ ಕೋಲವನ್ನು ನಡೆಸಲು ಏರ್ಪಾಡು ಮಾಡುತ್ತಾರೆ.

ಭೂತ ಕೋಲದ ದಿನ ಶೀನಪ್ಪ ಹೆಗ್ಡೆಯವರು ಅಳಿಯ ಸಂಕಪ್ಪನನ್ನು ಕರೆದು ಭೂತದ ಎದುರು ನಿಲ್ಲಿಸುತ್ತಾರೆ. "ತಾನು ಹಿಂದೆ ಭೂತಕ್ಕೆ 'ಹೂ ನೀರು' ಇಡುತ್ತಿದ್ದ ಕೆಲಸವನ್ನು ಇನ್ನು ಮುಂದೆ ತನ್ನ ಅಳಿಯನೇ ಮುಂದುವರಿಸುತ್ತಾನೆ" ಎಂದು

ಅವನಲ್ಲಿ ಕೇಳದೆಯೆ ಭೂತದ ಎದುರು ಹೇಳಿಕೊಳ್ಳುತ್ತಾರೆ. ಭೂತವು ಇದಕ್ಕೆ ಸಂತೋಷದಿಂದ ಒಪ್ಪಿಗೆ ಸೂಚಿಸುತ್ತದೆ. ಸಂಕಪ್ಪನಿಗೆ 'ನಾನು ಜುಮಾದಿ ಭೂತಕ್ಕೆ ಹರಕೆ ಹೇಳಿದ ಕಾರಣ ಬಂದುದಲ್ಲ' ಎಂದು ಹೇಳಬೇಕೆನಿಸಿದರೂ ಮಾವನನ್ನು ನೋಯಿಸಲು ಇಷ್ಟವಿಲ್ಲದೆ ಸುಮ್ಮನಾದ. ಜೊತೆಗೆ ಗಾಂಧೀಜಿ ಹಿಂದೆ ಭಾಷಣದಲ್ಲಿ ಹೇಳಿದ ಮಾತು ಆತನಿಗೆ ನೆನಪಾಯಿತು. "ಯಾರೊಬ್ಬರ ನಂಬಿಕೆಯನ್ನು ಕೆಣಕಲು ಹೋಗಬೇಡಿ. ಆ ನಂಬಿಕೆಯಿಂದ ಇನ್ನೊಂದು ಜೀವಕ್ಕೆ ತೊಂದರೆ ಇಲ್ಲವೆಂದಾದರೆ, ಅಂತಹ ಆಚರಣೆ ಆದರಣೀಯವೇ!" (ಉಲ್ಲಂಘನೆ, ಪುಟ ೨೯೬). ತುಂಬಾ ಆತಂಕಕ್ಕೆ ಒಳಗಾದ ಸಂಕಪ್ಪ ತನ್ನ ಸ್ವಾತಂತ್ರ್ಯದ ಹರಣವಾಗುತ್ತಿದೆ ಅನ್ನಿಸಿದರೂ ಪ್ರತಿಭಟಿಸದೆ ಕೈ ಕಟ್ಟಿ ನಿಂತುಬಿಡುತ್ತಾನೆ.

ಸಂಕಪ್ಪ ಹೆಗ್ಡೆ ಮುಂದೆ ಗುತ್ತಿನ ಯಜಮಾನನಾಗಿ ಗುತ್ತಿನ ಎಲ್ಲಾ ಜವಾಬ್ದಾರಿಗಳನ್ನು ಸಾಕಷ್ಟು ಬದಲಾವಣೆಗಳೊಂದಿಗೆ ನಡೆಸಿಕೊಂಡು ಹೋಗುತ್ತಾರೆ. ಕಾದಂಬರಿಯ ಕೊನೆಯ ಭಾಗದಲ್ಲಿ ಅಂಬಕ್ಕೆಯ ಸೊಸೆ ಸ್ಮಿತಾ, ಭೂತದ ಕುರಿತಾಗಿ ಹಲವಾರು ಪ್ರಶ್ನೆಗಳನ್ನು ಕೇಳುತ್ತಾಳೆ. ಭೂತಾರಾಧನೆಯನ್ನು ಆಕೆ ಖಂಡಿಸುವುದಿಲ್ಲ. ಆದರೆ 'ಇಲ್ಲಿ ಮಹಿಳೆಯರಿಗೆ ಕೆಲವು ನಿಷಿದ್ಧಗಳಿರುವುದು ಸರಿಯಲ್ಲ' ಎಂದು ಸ್ಮಿತಾ ಹೇಳಿದಾಗ ಸಂಕಪ್ಪ ಹೆಗ್ಡೆ ಆಕೆಯ ಮಾತನ್ನು ಪುಷ್ಟೀಕರಿಸುತ್ತಾರೆ. ಕಾದಂಬರಿಕಾರರಿಗೆ ಈ ರೀತಿಯ ನಿಲುವುಗಳು ಸರಿಯಲ್ಲ ಎಂಬ ಭಾವನೆ ಇದೆ. ನಮ್ಮ ಸಮಾಜದಲ್ಲಿ ಯಾರೋ ಪುರುಷರು ಮಾಡಿದ ನಿಯಮಗಳನ್ನು ಮಹಿಳೆಯರು ಚಾಚೂ ತಪ್ಪದೆ ಪಾಲಿಸುತ್ತಾರೆ. ಇತರರು ಅದನ್ನು ಪ್ರಶ್ನಿಸಿದಾಗ ಅಥವಾ ಮೀರಿದಾಗ ಸ್ತ್ರೀ ಸಮುದಾಯವೇ ಇದನ್ನು ವಿರೋಧಿಸುತ್ತದೆ. ಯಾವುದೇ ತಾರತಮ್ಯಗಳಿಲ್ಲದೆ ಉತ್ತಮ ರೀತಿಯಲ್ಲಿ ಇಂತಹ ಆರಾಧನೆಗಳನ್ನು ನಡೆಸಿಕೊಂಡು ಹೋಗಬೇಕೆನ್ನುವ ಆಶಯ ಅವರದು.

ಒಟ್ಟನಲ್ಲಿ ಹೇಳುವುದಾದರೆ ಹಲವಾರು ರೀತಿಯ ಬದಲಾವಣೆಗಳೊಂದಿಗೆ ಬಂಟ ಜನಾಂಗದಲ್ಲಿ ಇಂದಿಗೂ ಗುತ್ತಿನ ಮನೆಗಳಲ್ಲಿ ಆರಾಧನೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ಒಂದು ತಲೆಮಾರಿನಲ್ಲಿ ಮುಖ್ಯವೆಂದು ಅನ್ನಿಸಿದ ಆಚರಣೆಗಳು ಇನ್ನೊಂದು ತಲೆಮಾರಿಗೆ ಅಮುಖ್ಯವೆನಿಸಿಕೊಳ್ಳುತ್ತವೆ. 'ಉಲ್ಲಂಘನೆ'

ಕಾದಂಬರಿಯಲ್ಲಿ ಈ ರೀತಿಯ ಚಿತ್ರಣವನ್ನೇ ಕಾಣಬಹುದು. ಮಾತೃರೂಪಿ ಸಂಸ್ಕೃತಿಯಿರುವ ಇಲ್ಲಿ ಮಹಿಳೆಯರು ಎಲ್ಲಾ ಆಚರಣೆಗಳನ್ನು ಉಳಿಸಿಕೊಳ್ಳಲು ಹವಣಿಸುತ್ತಾರೆ. ಕಾದಂಬರಿಕಾರರು ಸಂದರ್ಭ ಒದಗಿದಾಗಲೆಲ್ಲಾ ಸಮಾಜದಲ್ಲಿ, ಊರಿನಲ್ಲಿ ನಡೆಯುವ ಉತ್ಸವ, ಹಬ್ಬ-ಹರಿದಿನಗಳು, ಆಚರಣೆಗಳನ್ನು ವಿವರವಾಗಿ ದಾಖಲಿಸುತ್ತಾರೆ. ಉದಾಹರಣೆಗೆ ಉಡುಪಿಯ ಪರ್ಯಾಯ ಉತ್ಸವ, ಕೋಟೇಶ್ವರ ಶಂಕರನಾರಾಯಣ ದೇವರ ಉತ್ಸವ, ಯಕ್ಷಗಾನ, ಕಂಬಳ, ವಿಶು, ಸಂಕ್ರಾಂತಿ ಮುಂತಾದವುಗಳ ಕುರಿತು ಬಹಳಷ್ಟು ಮಾಹಿತಿಗಳು ಸಿಗುತ್ತವೆ. ನಮ್ಮ ಹಿಂದಿನ ಸಂಸ್ಕೃತಿ ಹೇಗಿತ್ತು ಮತ್ತು ಇಂದು ಎಷ್ಟರ ಮಟ್ಟಿಗೆ ಅವುಗಳು ಉಳಿದುಕೊಂಡಿವೆ ಮಾತ್ರವಲ್ಲದೆ ಮುಂದೆ ಅವುಗಳನ್ನು ಉಳಿಸಿಕೊಳ್ಳಬೇಕೆಂಬ ಕಾಳಜಿಯು ಇಲ್ಲಿ ವ್ಯಕ್ತವಾಗುತ್ತದೆ. ನಂಬಿಕೆ ಮತ್ತು ವೈಚಾರಿಕತೆಯನ್ನು ಪರಸ್ಪರ ಮುಖಾಮುಖಿಗೊಳಿಸುವ ಪ್ರಯತ್ನದಲ್ಲೂ ಕಾದಂಬರಿಕಾರರು ಆಚರಣೆಗಳನ್ನು ಅಲ್ಲಲ್ಲಿ ಕಾಲ-ದೇಶಗಳ ಪರೀಕ್ಷೆಗೊಡ್ಡಲು ಯತ್ನಿಸುತ್ತಾರೆ. ಅರ್ಥ ಕಳಕೊಂಡ ಆಚರಣೆಗಳ ಉಳಿವು ಕಷ್ಟಸಾಧ್ಯ ಎಂಬ ಅಂಶ ಇಲ್ಲಿದೆ.

೪.೨ ಜೀವನಾವರ್ತನ ಮತ್ತು ಸಾಂಸ್ಕೃತಿಕ ಪಲ್ಲಟ:

ಮಾನವನ ಜೀವನದಲ್ಲಿ ಹುಟ್ಟು, ಮದುವೆ ಮತ್ತು ಸಾವು ಇವು ಮೂರು ಪ್ರಮುಖ ಘಟ್ಟಗಳಾಗಿವೆ. ಇದಕ್ಕೆ ಸಂಬಂಧಪಟ್ಟಂತೆ ಹಲವಾರು ರೀತಿಯ ಆಚರಣೆಗಳನ್ನು ಬಹಳ ಹಿಂದಿನ ಕಾಲದಿಂದಲೂ ಆಚರಿಸುತ್ತಲೇ ಬಂದಿದ್ದಾರೆ. ಆದರೆ ಇಂದು ನಾನಾ ಕಾರಣಗಳಿಂದ ಅವುಗಳಲ್ಲಿ ಬದಲಾವಣೆಗಳೂ ಆಗಿವೆ. ಆಧುನಿಕ ಶಿಕ್ಷಣ, ನಗರೀಕರಣದ ಕಾರಣದಿಂದ ಹೊಸ ತಲೆಮಾರುಗಳಲ್ಲಿ ಹಳೆಯ ಆಚರಣೆ, ಕ್ರಮಗಳನ್ನು ಉಳಿಸಿಕೊಳ್ಳಬೇಕೆಂಬ ಪ್ರಜ್ಞೆ ಮತ್ತು ಆಸಕ್ತಿಯು ಕಡಿಮೆಯಾಗುತ್ತಾ ಹೋಗುತ್ತದೆ. ಇವೆಲ್ಲ ಅರ್ಥವಿಲ್ಲದ ಹುರುಳಿಲ್ಲದ ಆಚರಣೆಗಳೆಂದು ಭಾವಿಸುತ್ತಾರೆ. ಕಾದಂಬರಿಯುದ್ದಕ್ಕೂ ಈ ರೀತಿಯ ಚಿತ್ರಣಗಳನ್ನು ಗಮನಿಸಬಹುದು.

ಬಾಣಂತನ: ಗುತ್ತಿನ ಮನೆಗಳಲ್ಲಿ ಚಾವಡಿಯಲ್ಲಿ ದೈವಗಳ ಉಯ್ಯಾಲೆ ಇರುವ ಕಾರಣ ಮೈಲಿಗೆಯ ದೃಷ್ಟಿಯಿಂದ ಬಂಟರ ಮನೆಗಳ ಸಂಕೀರ್ಣದೊಳಗೆ ಹೆರಿಗೆಯಾಗಬಾರದು ಎಂಬ ನಿಯಮವಿದೆ. ಹೆರಿಗೆಗೆಂದೇ ಮನೆಯ ಹೊಗರಡೆ

'ಅಮೆ ಕೋಣೆ'ಯನ್ನು ಕಟ್ಟಿಸಿರುತ್ತಾರೆ. ಹೆರಿಗೆ ನೋವು ಬಂದ ತಕ್ಷಣ ಗರ್ಭಿಣಿಯನ್ನು ಆ ಕೋಣೆಗೆ ಕರೆದುಕೊಂಡು ಹೋಗುತ್ತಾರೆ. ಸಾಂತೇರುಗುತ್ತಿನಲ್ಲೂ ಅಂತಹ ವ್ಯವಸ್ಥೆಯಿತ್ತು. ಅಂಬಕ್ಕೆಯ ಕಾಲದವರೆಗೆ ಆ ಕೋಣೆ ಉಪಯೋಗವಾಗುತ್ತದೆ. ಆಕೆಯ ಮಗಳು ಶಾರದಾ ಸೀಮಂತ ಕಳೆದ ತಕ್ಷಣ ಮುಂಬಯಿಯಲ್ಲೇ ತನ್ನ ಹೆರಿಗೆ ಎಂದು ಹೇಳಿದಾಗ ಅಂಬಕ್ಕೆ "ಗುತ್ತಿನ ಮನೆಯಲ್ಲಿ ಒಂದು ಬಾಣಂತಿಕೋಣೆ ಅಂತಲೇ ಇದೆ ಮಾರಾಯ್ತಿ. ನಾನು ನಿನ್ನನ್ನು ಹೆತ್ತು ಮಲಗಿದ್ದು ಅಲ್ಲೇ. ಇನ್ನೆಲ್ಲ ಇದು ಯಾರಿಗೆ?" ಎಂದಾಗ ಶಾರದೆ "ಆ ಕತ್ತಲು ಕೋಣೆಯಲ್ಲಿ ಯಾರು ಮಲಗುತ್ತಾರಮ್ಮ? ನೀನು ನನ್ನನ್ನು ಹೆತ್ತ ಸಮಯದಲ್ಲಿ ನಮ್ಮ ಗುತ್ತಿನ ಮನೆಯಲ್ಲಿ ವಿದ್ಯುತ್ತಿನ ಬೆಳಕೂ ಇರಲಿಲ್ಲ ನಿಜ! ಆದರೆ, ಈಗ ಹುಟ್ಟುವ ಮಕ್ಕಳು ಇಂಥ ಕತ್ತಲು ಕೋಣೆಯಲ್ಲಿ ಇರುವುದು ಬಿಡು, ನೆಲಕ್ಕೆ ಬಿದ್ದ ಕೂಡಲೇ – ಅವಕ್ಕೆ ಬಾಯಿ ಬರುವುದಾದಲ್ಲಿ – ಫೇನು ಹಾಕಿ ಅಂತನೂ ಅಂದಾವೇ!" ಎನ್ನುತ್ತಾಳೆ. (ಉಲ್ಲಂಘನೆ, ಪುಟ ೪೩೬)

ಅಂಬಕ್ಕೆಗೆ ಗುತ್ತಿನ ಮನೆಯ ಸಂಪ್ರದಾಯವನ್ನು ಉಳಿಸುವ ಹಂಬಲ ಇಲ್ಲಿ ವ್ಯಕ್ತವಾಗುತ್ತದೆ. ಆದರೆ ಮುಂದಿನ ತಲೆಮಾರಿಗೆ ಅದರ ಬಗ್ಗೆ ಆಸಕ್ತಿಯೇ ಇಲ್ಲವಾಗುತ್ತದೆ. ಹೆರಿಗೆಯ ಸಮಯದಲ್ಲಿ ಆಧುನಿಕ ವ್ಯವಸ್ಥೆಗಳ ಅಗತ್ಯವಿರುವುದು ಹೌದಾದರೂ ಕೂಡ ಹಳೆಯ ವ್ಯವಸ್ಥೆಗಳ ಬಗ್ಗೆ ಒಂದು ರೀತಿಯ ತಾತ್ಸಾರ ಭಾವ ಇಲ್ಲಿ ಎದ್ದು ಕಾಣುತ್ತದೆ. ಮಗುವನ್ನು ತೊಟ್ಟಿಲಿಗೆ ಹಾಕುವ ಕಾರ್ಯಕ್ರಮವೂ ಮುಂಬಯಿಯಲ್ಲಿಯೇ ನಡೆಯುತ್ತದೆ.

ಮೈ ನೆರೆಯುವುದು (ಪುಷ್ಪವತಿಯಾಗುವುದು): ಹೆಣ್ಣು ವಯಸ್ಸಿಗನುಗುಣವಾಗಿ ಪುಷ್ಪವತಿಯಾದಾಗ ಬಂಟ ಜನಾಂಗದಲ್ಲಿ ಬಹಳಷ್ಟು ಸಂಭ್ರಮ ಪಡುತ್ತಾರೆ. ಇದು ಸಂತಾನ ವೃದ್ಧಿಯ ಸಂಕೇತ. ಅವಳನ್ನು ತೆಂಗಿನಮರದ ಬುಡದಲ್ಲಿ ಕೂರಿಸುತ್ತಾರೆ. ನಾಲ್ಕು ಮುಖ್ಯ ಗುತ್ತುಗಳ ಮಹಿಳೆಯರಿಗೆ ಮಡಿವಾಳ್ತಿಯ ಮೂಲಕ ಸಂದೇಶ ಕಳುಹಿಸುತ್ತಾರೆ. ಒಟ್ಟು ಐದು ಗುತ್ತುಗಳ ಐದು ಮುತ್ತೈದೆಯರು ಅವಳ ತಲೆಗೆ ೪೮ ಕಲಶ ನೀರು ಸುರಿಯುತ್ತಾರೆ. ನಾಲ್ಕು ದಿನ ಕಳೆದ ಬಳಿಕ ಅವಳಿಗೆ 'ಕರ ಪತ್ತಾವುನು' (ಮಡಿಕೆ ಮುಟ್ಟಿಸುವುದು) ಎಂಬ ಕ್ರಮವನ್ನು ಮಾಡುತ್ತಾರೆ. ಆ ದಿನ

ಚಾವಡಿಯ ದೈವದ ಕೂಜಿ(ಬಿಂದಿಗೆ)ಯ ನೀರನ್ನು ಇಡೀ ಮನೆಗೆ ಹಾಗೂ ಹುಡುಗಿಯ ಮೈಮೇಲೆ ಸಿಂಪಡಿಸುತ್ತಾರೆ. ಹುಡುಗಿಯನ್ನು ಸ್ನಾನ ಮಾಡಿಸಿ ಹೊಸಬಟ್ಟೆ ಉಡಿಸಿ, ಅಲಂಕಾರ ಮಾಡಿ ದೇವರ ಎದುರು ನಿಂತು ಕುಟುಂಬದ ಸಂತತಿಯು ಇವಳಿಂದ ವೃದ್ಧಿಸಲಿ ಎಂದು ಪ್ರಾರ್ಥಿಸಿಕೊಳ್ಳುತ್ತಾರೆ. ಹುಡುಗಿಗೆ ಆರತಿಯನ್ನು ಬೆಳಗುತ್ತಾರೆ. ಸೇಸೆಯನ್ನು ಹಾಕುತ್ತಾರೆ. ವಧುವು ಹಿರಿಯರ ಕಾಲು ಮುಟ್ಟಿ ಆಶೀರ್ವಾದ ಪಡೆದುಕೊಳ್ಳುತ್ತಾಳೆ. ಅಂಬಕ್ಕೆ ಪುಷ್ಪವತಿಯಾದಾಗ ಈ ಎಲ್ಲಾ ಕ್ರಮಗಳನ್ನು ಬಹಳ ವಿಜೃಂಬಣೆಯಿಂದ ಆಚರಿಸಿದರು. ಮೈಲಿಗೆಯೆಲ್ಲಾ ಕಳೆದು ಅವಳು ಎಲ್ಲರಂತೆ ಮನೆಯ ಒಳಗೆ ಹೊರಗೆ ಓಡಾಡುವುದಕ್ಕೆ ಅನುವು ಮಾಡಿಕೊಡುವಂತೆ ಹಲಸು, ತೆಂಗಿನ ಮರಗಳನ್ನು, ತುಳಸಿಕಟ್ಟೆ, ಬಾವಿಯ ಕಟ್ಟೆ, ಅಡುಗೆ ಕೋಣೆಯ ಪರಿಕರಗಳನ್ನೆಲ್ಲಾ ಅವಳಲ್ಲಿ ಮುಟ್ಟಿಸಿದರು. ಅಂಬಕ್ಕೆಯನ್ನು ಕೂರಿಸಿದ ತೆಂಗಿನಕಾಯಿ ಮತ್ತು ಭತ್ತದ ಮುಡಿಯನ್ನು ಮುಂದೆ ಕೃಷಿಯಲ್ಲಿ ಬಳಸಿಕೊಳ್ಳುತ್ತಾರೆ. ಅಂದರೆ ಸಂತಾನ ಮತ್ತು ಸಮೃದ್ಧಿಯ ಸಂಕೇತವಾಗಿ ಈ ಕ್ರಮಗಳನ್ನು ಮಾಡುವುದು ಇಲ್ಲಿ ತಿಳಿದು ಬರುತ್ತದೆ.

ಅಂಬಕ್ಕೆಯ ಮಗಳು ಶಾರದಾಳಿಗೆ ಈ ಎಲ್ಲಾ ಕ್ರಮಗಳನ್ನು ಮಾಡಿದ್ದರು. ಆದರೆ ಮುಂದೆ ಆಕೆಯ ಮಕ್ಕಳ ಕಾಲಕ್ಕೆ ಇದು ಇಲ್ಲವಾಗುತ್ತದೆ. ಅಂಬಕ್ಕೆಯ ಸೊಸೆ ಸ್ಮಿತಾಳಿಗೆ ಈ ರೀತಿಯ ಆಚರಣೆಗಳ ಬಗ್ಗೆ ತಿಳಿಸಿದಾಗ ಆಕೆ ಆಶ್ಚರ್ಯಚಕಿತಳಾಗುತ್ತಾಳೆ. "ಇವೆಲ್ಲ ನಮ್ಮ ಆಚರಣೆಯಲ್ಲಿ ಇಲ್ಲ, ಅದ್ಭುತ" ಎನ್ನುತ್ತಾಳೆ.

ಮದುವೆ: ಬಂಟರಲ್ಲಿ ಹೆಣ್ಣಿನ ಮನೆಯವರು ಮಗಳಿಗೆ ಸೂಕ್ತ ವರನನ್ನು ಹುಡುಕುತ್ತಾರೆ. ಹೆಚ್ಚಾಗಿ ಸಂಬಂಧದೊಳಗೆ ವಿವಾಹಗಳು ಏರ್ಪಡುತ್ತವೆ. ತಮ್ಮ ಮನೆತನಕ್ಕೆ, ಹಿರಿಮೆ-ಗರಿಮೆಗೆ ಸರಿ ಹೊಂದುವ ಮನೆತನದ ಗಂಡನ್ನು ಆಯ್ಕೆ ಮಾಡುತ್ತಾರೆ. ಎರಡೂ ಕಡೆಯವರಿಗೆ ಒಪ್ಪಿತವಾದ ಮೇಲೆ ಮದುವೆ ನಿಶ್ಚಯ ಮಾಡುತ್ತಾರೆ. ಈ ಸಮಯದಲ್ಲಿ ವಧು-ವರರ ಊರಿನ ಗುತ್ತುಗಳ ಮುಖ್ಯಸ್ಥರೂ ಸೇರುತ್ತಾರೆ. ಊರಿನ ಎಲ್ಲಾ ಜನರನ್ನು ಆಹ್ವಾನಿಸಿ, ಅವರ ಸಹಕಾರವನ್ನು ಪಡೆದು ನಾಲ್ಕೈದು ದಿನಗಳವರೆಗೆ ಮದುವೆ ಕಾರ್ಯಕ್ರಮಗಳು ನಡೆಯುತ್ತವೆ.

ಕಾದಂಬರಿಕಾರರು ಅಂಬಕ್ಕೆಯ ವಿವಾಹವನ್ನು ಬಹಳ ವಿವರವಾಗಿ ನೀಡುತ್ತಾರೆ. ಕೋಳ್ಯೂರು ಸೀಮೆ, ವಿಟ್ಲ ಸೀಮೆ, ಮಂಗಳೂರು ಸೀಮೆಯ ಗ್ರಾಮ ಗುತ್ತಿನವರು, ಸೀಮೆ ಗುತ್ತಿನವರು ಎಲ್ಲರೂ ಬರುವ ಹಾಗೆ ಸಾಂತೇರು ಗುತ್ತಿನವರು ಮದುವೆ, ನಿಶ್ಚಯಕ್ಕೆ ಆಹ್ವಾನಿಸುತ್ತಾರೆ. ಮನೆಯ ಎದುರು ಭಾಗದಲ್ಲಿ ದೊಡ್ಡ ಚಪ್ಪರ ಹಾಕುತ್ತಾರೆ. ಮೂರ್‍ನಾಲ್ಕು ಜನ ಪಾಕ ಪ್ರವೀಣರ ಮೂಲಕ ಕೋಳಿ-ರೊಟ್ಟಿ ಅಡುಗೆಯ ವ್ಯವಸ್ಥೆಯಾಗುತ್ತದೆ. ಗುತ್ತಿನ ಗತ್ತಿಗನುಗುಣವಾಗಿ ಹುಡುಗಿಗೆ ಐದು ಸಾವಿರ ನಗದು ಮತ್ತು ನೂರು ಪವನು ಚಿನ್ನ ಕೊಡುವ ಯೋಚನೆ ಮಾಡುತ್ತಾರೆ. ನಾಲ್ಕು ಎತ್ತಿನ ಗಾಡಿಗಳ ಮೂಲಕ ವರನ ಕಡೆಯವರು ಕೊಂಡೆ ಗುತ್ತಿನಿಂದ ಸಾಂತೇರು ಗುತ್ತಿಗೆ ಬರುತ್ತಾರೆ. ಕೆಲವರು ರೈಲಿನ ಮೂಲಕವೂ ಬರುತ್ತಾರೆ. ಕ್ರಮಬದ್ಧವಾಗಿ ಅವರನ್ನು ಸ್ವಾಗತಿಸಿ, ತಾಂಬೂಲ ವಿನಿಮಯ ಕ್ರಮವನ್ನು ಬಹಳ ವಿಜೃಂಬಣೆಯಿಂದ ನಡೆಸುತ್ತಾರೆ.

ಮೂರು ದಿನಗಳವರೆಗೆ ಅಂಬಕ್ಕೆಯ ಮದುವೆ ನಡೆಯಿತು. ಬಳೆ ಇಡುವ ಕ್ರಮದೊಂದಿಗೆ ಆರಂಭಗೊಂಡು, ಮದುರಂಗಿ ಶಾಸ್ತ್ರವನ್ನು ಮುಗಿಸಿ, ಮನೆ ದೈವ ಜುಮಾದಿಯ ಆಶೀರ್ವಾದ ಪಡೆದು ಕೊಂಡೆಗುತ್ತಿಗೆ ಹೊರಡುತ್ತಾರೆ. ನಲವತ್ತೆರಡು ಎತ್ತಿನಗಾಡಿಗಳಲ್ಲಿ ಜನ ದಿಬ್ಬಣ ಹೋಗುತ್ತಾರೆ. ಗರ್ನಾಲಿನ ಶಬ್ದದೊಂದಿಗೆ, ವಾಲಗದ ಮೇಳದೊಂದಿಗೆ ಮದುಮಗಳನ್ನು ಹೊತ್ತ 'ಮಂಚಿಲ್'(ಪಲ್ಲಕ್ಕಿ)ನೊಂದಿಗೆ ಮನೆಯವರೆಲ್ಲರೂ ಹೊರಟರು. ಹುಡುಗನ ಮನೆಯ ಅಂಗಳದಲ್ಲಿ ತಾಂಬೂಲ ವಿನಿಮಯದೊಂದಿಗೆ ಶಾಸ್ತ್ರೋಕ್ತವಾಗಿ ಮದುವೆ ನಡೆಯಿತು. ಹುಡುಗಿಯನ್ನು ಹುಡುಗನಿಗೆ ಒಪ್ಪಿಸಿ ಕೊಡುವ ಶಾಸ್ತ್ರವನ್ನು ಮುಗಿಸಿ ಎಲ್ಲರೂ ತಮ್ಮ ತಮ್ಮ ಮನೆಗೆ ಹಿಂತಿರುಗಿದರು. ಒಟ್ಟಿನಲ್ಲಿ ಅಂಬಕ್ಕೆಯ ವಿವಾಹದಂತೆ ಸದ್ಯ ಎಲ್ಲೂ ಆಗಿಲ್ಲ ಎನ್ನುವಂತೆ ವಿಜೃಂಬಣೆಯಿಂದ ನಡೆಯಿತು.

ಮುಂದೆ ಅಂಬಕ್ಕೆಯ ಅಣ್ಣ ಸಂಕಪ್ಪನಿಗೂ ಇದೇ ರೀತಿಯಲ್ಲಿ ಮದುವೆ ಮಾಡಬೇಕೆಂಬ ಪ್ರಸ್ತಾಪ ಮಾಡಿದಾಗ ಸಂಕಪ್ಪ ಅದಕ್ಕೆ ಒಪ್ಪಲಿಲ್ಲ. ಮಾವನ ಮಗಳು ಗಿರಿಜೆಯನ್ನು ಮದುವೆಯಾಗಲು ಒಪ್ಪಿಕೊಳ್ಳುತ್ತಾರೆ. ಬಂಟ ಜನಾಂಗದಲ್ಲಿ ವರದಕ್ಷಿಣೆ ತೆಗೆದುಕೊಳ್ಳುವುದೆಂದರೆ ಅದು ಗುತ್ತಿಗೆ ಗೌರವ ಎಂಬ ಭಾವನೆ ಇದೆ. ಆದರೆ ಸಂಕಪ್ಪ ವರದಕ್ಷಿಣೆಯನ್ನು ವಿರೋಧಿಸುತ್ತಾರೆ, ಮಾತ್ರವಲ್ಲ ವರದಕ್ಷಿಣೆಯನ್ನು

ತೆಗೆದುಕೊಳ್ಳಲು ಒತ್ತಾಯಿಸುವುದಾದರೆ ಗಿರಿಜಾಳನ್ನು ಮದುವೆಯೇ ಆಗುವುದಿಲ್ಲ ಎಂದು ಹೇಳಿಬಿಡುತ್ತಾರೆ. ತಮ್ಮ ಗುತ್ತಿನಲ್ಲೇ ಇದು ಹೊಸದು ಎನ್ನುವಂತೆ ಸಂಕಪ್ಪನ ಧೋರಣೆಗೆ ಗುತ್ತಿನವರು ತಲೆ ಬಾಗಲೇಬೇಕಾಗುತ್ತದೆ. ಬಹಳ ಸರಳವಾಗಿ ವಿವಾಹವು ನಡೆದುಬಿಡುತ್ತದೆ.

ಅಂಬಕ್ಕೆಯ ಮಗಳು ಶಾರದಾಳ ಮದುವೆಯಲ್ಲಿ ಗುತ್ತಿನ ಸಂಸ್ಕೃತಿ ಇನ್ನಷ್ಟು ಪಲ್ಲಟಗೊಳ್ಳುತ್ತದೆ. ಈ ತನಕ ಮನೆಯ ಮಗಳನ್ನು ಯಾವುದಾದರೂ ಗುತ್ತಿನವರಿಗೇ ಮದುವೆ ಮಾಡಿ ಕೊಡುತ್ತಿದ್ದ ಸಂಪ್ರದಾಯವೇ ಬಿದ್ದು ಹೋಗುವುದನ್ನು ಇಲ್ಲಿ ಗಮನಿಸಬಹುದು. ಶಾರದಾಳನ್ನು ಮುಂಬಯಿಯಲ್ಲಿ ದೊಡ್ಡ ಬಾರ್ ಅಂಡ್ ರೆಸ್ಟೋರೆಂಟ್ ಇಟ್ಟುಕೊಂಡಿರುವ ಕರ್ಮಾಳು ಸದಾಶಿವ ಶೆಟ್ಟರ ಮಗ ರಮಾನಂದನಿಗೆ ವಿವಾಹ ಮಾಡಲು ನಿಶ್ಚೈಸುತ್ತಾರೆ. ಆ ಕಾಲದಲ್ಲಿ ಗುತ್ತು ಬರ್ಕೆಯವರು ಹೋಟೆಲ್ ಸೇಠ್‌ಗಳಿಗೆ ಹೆಣ್ಣು ಕೊಡಲು ಮುಂದೆ ಬರುವ ಉತ್ಸಾಹ ತೋರಿಸುತ್ತಿರಲಿಲ್ಲ ಏಕೆಂದರೆ ಅವರು ಹಿಂದೆ ಯಾವುದೋ ಗುತ್ತು ಬರ್ಕೆಯ ಗೇಣಿದಾರರೋ ಅಥವಾ ಕೂಲಿಕಾರರೋ ಆಗಿದ್ದವರ ಮಕ್ಕಳು ಇಲ್ಲವೆ ಅಳಿಯಂದಿರು ಆಗಿದ್ದರು. ಹಾಗಾಗಿ ಅವರಿಗೆ ಅಂತಹ ಗೌರವವಿರಲಿಲ್ಲ. ಆದರೆ ಅವರು ಆಗರ್ಭ ಶ್ರೀಮಂತರು. ಆ ಕಾರಣದಿಂದ ಅವರೊಂದಿಗೆ ಮದುವೆಗಳನ್ನು ಏರ್ಪಡಿಸಲು ಜನ ಇಷ್ಟಪಡುತ್ತಿದ್ದರಷ್ಟೆ.

ಶಾರದೆಯ ಮದುವೆಯ ವಿಷಯದಲ್ಲಿ ಸಂಕಪ್ಪ ಹೇಳುವ ಮಾತುಗಳು ಮುಖ್ಯವೆನಿಸುತ್ತವೆ. "ಗುತ್ತು ಬರ್ಕೆಯವರು ಮಾತ್ರ ದೊಡ್ಡವರು, ಉಳಿದ ಮಂದಿ ಅಲ್ಲ ಎಂಬುದನ್ನೆಲ್ಲಾ ನಾವು ಇನ್ನು ಅಲ್ಲಗಳೆಯಬೇಕು. ಮನೆತನ-ಮರ್ಯಾದೆ ಎನ್ನುವ ಕಾಲ ಹೋಯಿತು. ಇನ್ನು ಏನಿದ್ದರೂ-ಮರ್ಯಾದೆ ಇರುವುದು ಉದ್ಯೋಗಕ್ಕೇ. ಹಾಗಂತ ಯಾರಾದರೂ ಒಟ್ಟಾರೆ ದುಡ್ಡು ಮಾಡುವ ವ್ಯವಹಾರವನ್ನು ಹಮ್ಮಿಕೊಳ್ಳಬಾರದು. ನಾನು ಹುಡುಗನನ್ನು ಮಾತನಾಡಿಸಿದ್ದೇನೆ. ಆತ ಒಳ್ಳೆಯ ವಿದ್ಯಾವಂತ. ಆತನ ಉದ್ಯಮವು ಹೋಟೆಲ್ ಆದರೂ ಚಿಂತಿಲ್ಲ. ನಿನಗೆ ಮುಂಬಯಿಯ ವಾಸ ಇಷ್ಟ ಅಂತ ಆದರೆ, ಒಪ್ಪಿಕೊ. ಇಲ್ಲ ಅಂದರೆ ಬೇಡ! " ಎನ್ನುತ್ತಾರೆ. (ಉಲ್ಲಂಘನೆ, ಪುಟ ೪೩೧). ಶಾರದೆ ಮತ್ತು ಅಂಬಕ್ಕೆಗೆ ಶಾರದೆಯ

ಮದುವೆ ಬಹಳ ಅದ್ದೂರಿಯಾಗಿ ವರನ ಗುತ್ತಿನ ಮನೆಯಲ್ಲಿ ನಡೆಯಬೇಕೆಂಬ ಆಸೆಯಿತ್ತು. ಆದರೆ ರಮಾನಂದ ಗುತ್ತಿನ ಮನೆಯವನಲ್ಲದ ಕಾರಣ ಕಲ್ಯಾಣ ಮಂಟಪದಲ್ಲಿ ಮದುವೆ ಮಾಡುವ ವ್ಯವಸ್ಥೆ ಮಾಡುತ್ತಾರೆ. ಇನ್ನು ಮಗಳಿಗೆ ವರದಕ್ಷಿಣೆ ಕೊಡಬೇಕೆಂಬ ಆಸೆಯಿದ್ದರೂ ಮಗ ರಂಜಿತ್ ಇದನ್ನು ವಿರೋಧಿಸುತ್ತಾನೆ. ತನ್ನ ಮಡದಿ ಸ್ಮಿತಾಳಿಗೆ ಈ ವಿಚಾರ ತಿಳಿದರೆ ನಮ್ಮನ್ನೆಲ್ಲಾ 'ಗುಗ್ಗು' ಎಂದು ತಿಳಿಯಬಹುದೆಂದು ಭಾವಿಸುತ್ತಾನೆ. ಗುತ್ತಿನ ಮನೆಯಲ್ಲಿಯಂತೂ ಇನ್ನು ಮುಂದೆ ಸುಧಾರಣೆ ಆಗಲೇಬೇಕೆಂಬುದು ಆತನ ಅಭಿಪ್ರಾಯ. ಯಾವುದರಿಂದ ಗುತ್ತಿನ 'ಪ್ರಾಶಸ್ತ್ಯ' ಹೆಚ್ಚಾಗುತ್ತದೆಯೆಂದು ಹಿಂದಿನ ತಲೆಮಾರಿನವರು ತಿಳಿದಿದ್ದರೋ, ಅದನ್ನೇ 'ಕುಂದು' ಎಂದು ಹೊಸ ತಲೆಮಾರಿನವರು ಸಾಧಿಸುತ್ತಾರೆ. ಯಾರು ಏನೇ ಹೇಳಿದರೂ ಅಂಬಕ್ಕೆಗೆ ಮಾತ್ರ ಇದನ್ನು ಸುಲಭದಲ್ಲಿ ಜೀರ್ಣಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಅಂಬಕ್ಕೆಯ ಮಗ ರಂಜಿತ್‌ನ ವಿವಾಹ ಮಾತ್ರ ಪೂರ್ತಿಯಾಗಿ ಆಕೆಯ ಇಷ್ಟಕ್ಕೆ ವಿರುದ್ಧವಾಗಿಯೇ ನಡೆಯಿತು. ರಂಜಿತ್, ತಾಯಿಗೂ ಮದುವೆಯ ವಿಷಯವನ್ನು ಹೇಳದೆ ಸ್ನೇಹಿತರನ್ನು ಸೇರಿಸಿಕೊಂಡು ಮದುವೆಯಾದ. 'ಡಿನ್ನರ್'(ಔತಣ)ಗೆ ಮಾತ್ರ ಇತರರಿಗೆ ಆಮಂತ್ರಣ ಕೊಟ್ಟ.

ಅಂಬಕ್ಕೆ ಇದರಿಂದ ತುಂಬಾ ನೊಂದುಕೊಡರೂ ಸಂಕಪ್ಪ ಹೆಗ್ಡೆಯವರು ಮಾತ್ರ ಇದೆಲ್ಲಾ ಇನ್ನು ಮುಂದೆ ಸಾಮಾನ್ಯ ಎಂಬಂತೆ ನಡೆದುಕೊಂಡರು. ಅಂಬಕ್ಕೆಯ ಗಂಡನೂ ಅಷ್ಟೇ. "ಬಿಟ್ಟು ಬಿಡೇ ಆ ವಿಚಾರ, ಅವರ ಇಷ್ಟಾನೇ ನಮ್ಮ ಇಷ್ಟ ಎಂದು ನಾವು ಒಪ್ಪಿಕೊಳ್ಳುವ ಕಾಲ ಇದು" ಎಂದು ಸುಮ್ಮನಿದ್ದರು. (ಉಲ್ಲಂಘನೆ, ಪುಟ ೪೨೧). ರಂಜಿತ್‌ನ ವಿವಾಹದ ಡಿನ್ನರ್‌ಗೆ ಹೋಗಲು ಅವನ ತಂದೆ, ಮಾವ ಹೊರಟು ನಿಂತರೂ ಅಂಬಕ್ಕೆಗೆ ಮಾತ್ರ 'ಹೊರಡ ಬೇಕು, ಬೇಡ' ಎನ್ನುವ ದ್ವಂದ್ವ. ಕೊನೆಗೆ ಕರುಳಕರೆ ಆಕೆಯನ್ನು ಹೋಗುವಂತೆ ಮಾಡಿತು. ಇಲ್ಲಿ ಬದಲಾವಣೆಯನ್ನು, ಆಧುನಿಕ ಜೀವನ ವಿಧಾನವನ್ನು ಅಂಬಕ್ಕೆ ವಿರೋಧಿಸಿದರೂ ಕೊನೆಗೆ ಅದಕ್ಕೆ ಒಗ್ಗಿಕೊಳ್ಳಬೇಕಾದ ಸಂದರ್ಭ ಬರುತ್ತದೆ. ಹೊಸ

ತಲೆಮಾರಿನೊಂದಿಗೆ ತಾನೂ ಹೊಸತನ ರೂಢಿಸಿಕೊಳ್ಳಬೇಕಾಗುತ್ತದೆ ಎಂಬ ಕಾದಂಬರಿಕಾರರ ನಿಲುವು ಇಲ್ಲಿ ವ್ಯಕ್ತವಾಗುತ್ತದೆ. ವಿಮಾನದಲ್ಲೇ ಅವರು ದಿಲ್ಲಿಗೆ ಹೋಗುತ್ತಾರೆ. ಆ ಅನುಭವವೂ ಅಂಬಕ್ಕಗೆ ಹೊಸದು. ಎತ್ತಿನಗಾಡಿ, ಕುದುರೆ ಸಾರೋಟುಗಳ ಅನುಭವವಿದ್ದ ಅಂಬಕ್ಕಗೆ, ತನ್ನ ಮಾವ ಅನುಭವಿಸದ ಪುಣ್ಯ ತನಗೆ ದೊರೆಯಿತೆಂದು ಸಂಭ್ರಮಿಸಿದರು. ಆದರೂ ಮನಸ್ಸಿನೊಳಗೆ ಆಧುನಿಕತೆಯ ಕುರಿತ ತಾಕಲಾಟಗಳು ಇದ್ದೇ ಇತ್ತು. “ಹೊಸ ಹೊಸ ಆವಿಷ್ಕಾರಗಳು ಮನುಷ್ಯ ಹೆಚ್ಚೆಚ್ಚು ಸಂಭ್ರಮಿಸಲು ಕಾರಣವಾಗುವುದು ಸಹಜ. ಆದರೆ ಅದರ ಜೊತೆಗೆ, ಅವು ಮನುಷ್ಯ ಸಂಬಂಧಗಳನ್ನೂ ಹಾಳು ಮಾಡುತ್ತಿವೆಯಲ್ಲ? ಈ ರಂಜಿತ್ ಕೂಡಾ ಇಷ್ಟು ಓದದೇ ಇದ್ದಿದ್ದರೆ ಈ ಹುಡುಗಿಯನ್ನು ನೋಡಿ, ಮದುವೆಯಾಗಲು ಸಾಧ್ಯವಿತ್ತೇ? ಇಲ್ಲ! ತಾನು ಅಥವಾ ಅವನಪ್ಪನೇ ಹೇಳಿದ ಹುಡುಗಿಯನ್ನೇ ಈತ ಮದುವೆಯಾಗುತ್ತಿದ್ದ; ವರದಕ್ಷಿಣೆಯನ್ನೂ ಸಹ ತೆಗೆದುಕೊಳ್ಳುತ್ತಿದ್ದ” (ಉಲ್ಲಂಘನೆ, ಪುಟ ೪೨೨) ಅಂದು ಕೊಳ್ಳುತ್ತಾರೆ.

ಸಾಂತೇರುಗುತ್ತಿನಲ್ಲಿ ನಡೆಯುವ ಮದುವೆಯ ವೈಭವವೇ ಮೇಲೆಂದು ಭಾವಿಸಿಕೊಂಡಿದ್ದವರು ಅಂಬಕ್ಕ. ಆದರೆ ದಿಲ್ಲಿಯ ಔತಣಕೂಟವನ್ನು ನೋಡಿದ ಬಳಿಕ ಅಂಬಕ್ಕಗೆ ಸಾಂತೇರುಗುತ್ತಿನ ಮದುವೆ ಏನೇನೂ ಅಲ್ಲ ಅನಿಸಿತ್ತು. ಕರಿಕೋಟು, ಟೈ ಕಟ್ಟಿಕೊಂಡು, ಮಿರ ಮಿರ ಮಿಂಚುವ ಶೂಗಳನ್ನು ಧರಿಸಿಕೊಂಡಿದ್ದ ಅಲ್ಲಿಯ ಜನರನ್ನು ಮಗ ರಂಜಿತ್ ಪರಿಚಯ ಮಾಡಿಕೊಟ್ಟಾಗ ಅವರು ಹತ್ತಿರಬಂದು ಕೈ ಕುಲುಕುವಾಗ ಅಂಬಕ್ಕಗೆ ತುಂಬಾ ಮುಜುಗರವಾಗಿತ್ತು. ಆದರೂ ತನ್ನ ಮಗನನ್ನು ಎಣಿಸಿಕೊಂಡು ಹೆಮ್ಮೆ ಪಡುತ್ತಾರೆ. ತನ್ನ ಮಗ ಯಾವುದೋ ಜಾತಿಯ ಹೆಣ್ಣನ್ನು ಮದುವೆಯಾಗಿದ್ದಾನೆ ಎಂಬ ವಿಚಾರವನ್ನು ಗಂಡನ ಮುಂದಿಟ್ಟಾಗ ಅವರು “ಆಕೆ ಅವಳ ಊರಿನಲ್ಲಿ, ನಮ್ಮ ಜಾತಿಗೆ ಸಮಾನವಾದ ಜಾತಿಗೆ ಸೇರಿದವಳಂತೆ” ಎನ್ನುತ್ತಾರೆ. ಕೊನೆಗೂ ಮದುವೆ ಮಾಡಿಕೊಂಡ ಬಳಿಕ ಇನ್ನು ಜಾತಿಯ ಮೂಲವನ್ನು ಹುಡುಕಿ ಮಾಡುವುದೇನೆಂದು ಸಮಾಧಾನ ಪಟ್ಟುಕೊಳ್ಳುತ್ತಾರೆ. ಆಧುನಿಕ ಫ್ಯಾಶನ್‌ಗೆ ಒಗ್ಗಿಕೊಂಡ ತನ್ನ ಸೊಸೆ ಮಗಳಷ್ಟು ಸುಂದರಿಯಲ್ಲವೆನಿಸುತ್ತದೆ ಅಂಬಕ್ಕಗೆ.

ರಂಜಿತ್‌ನ ವಿವಾಹವನ್ನು ಅಂಬಕ್ಕೆ ಮನಃಪೂರ್ವಕವಾಗಿ ಒಪ್ಪಿಕೊಳ್ಳದಿದ್ದರೂ ಮುಂದೆ ಸಾಕಷ್ಟು ಬದಲಾವಣೆ ಹೊಂದುತ್ತಾರೆ. ಅಂತರ್ ಜಾತೀಯ ವಿವಾಹಗಳಿಗೆ ತಾನೇ ಬೆಂಬಲ ಕೊಡುತ್ತಾರೆ. ಶಾರದಾಳ ಮಗಳು ಪ್ರಜ್ಞಾಳಿಗೆ ತನ್ನ ಮದುವೆಯ ಕುರಿತಾಗಿ ಅಜ್ಜಿಯಲ್ಲಿ ಹೇಳಿಕೊಳ್ಳುವುದು ದೊಡ್ಡ ಸವಾಲೆಂದೆನಿಸಿತು. ಆದರೆ ಅಜ್ಜಿಯ ಭಾವನೆಗಳನ್ನು ಅರ್ಥಮಾಡಿಕೊಂಡ ಆಕೆಗೆ ಅದು ಕ್ಲಿಷ್ಟಕರವಲ್ಲ ಎಂಬ ಧೈರ್ಯವು ಮೂಡಿತು. ಆಕೆಯ ಗಂಡನಾದ ಜೈನ ಧರ್ಮದ ಶಾಂತಿರಾಜನನ್ನು ಅಂಬಕ್ಕೆ ಮನಸಾರೆ ಒಪ್ಪಿಕೊಳ್ಳುತ್ತಾಳೆ. ಹೀಗೆ ಸಾಂತೇರುಗುತ್ತಿನಲ್ಲಿ ಪೀಳಿಗೆಯಿಂದ ಪೀಳಿಗೆಗೆ ವಿವಾಹಕ್ಕೆ ಸಂಬಂಧಪಟ್ಟಂತೆ ಬದಲಾವಣೆಗಳಾಗುತ್ತಾ ಹೋಗುತ್ತವೆ. ಗುತ್ತಿನ ಸಂಪ್ರದಾಯಕ್ಕೆ ವಿರುದ್ಧವಾದ ವಿಚಾರಗಳನ್ನು ಅಂಬಕ್ಕೆ ಮೊದಲು ನಿರಾಕರಿಸಿದರೂ ಕೊನೆಗೆ ಆ ಎಲ್ಲಾ ಬೇಲಿಗಳನ್ನು ಕಳಚಿ ಹೊರಬರುತ್ತಾರೆ. ನಮ್ಮ ಸಮಾಜದಲ್ಲಿ ಯಾವ ರೀತಿಯ ಸುಧಾರಣೆಗಳಾಗಬೇಕೆಂಬ ಸೂಚನೆಯನ್ನು ಅಂಬಕ್ಕೆಯ ಪಾತ್ರದ ಮೂಲಕ ಕಾದಂಬರಿಕಾರರು ಚಿತ್ರಿಸಿದ್ದಾರೆ. ಅದೆಲ್ಲಕ್ಕಿಂತ ಹೆಚ್ಚಾಗಿ ಜ್ಞಾನದ ಸ್ಫೋಟ, ಆಧುನಿಕ ವಿದ್ಯಾಭ್ಯಾಸದ ಫಲ, ಸಂವಹನದ ಸಾಧ್ಯತೆ ಇವೆಲ್ಲಾ ರೂಢ ಮೂಲ ಸಂಪ್ರದಾಯಗಳನ್ನು ಶಿಥಿಲಗೊಳಿಸುವುದು ಸಾಮಾನ್ಯ. ಹಾಗೆಯೇ ಸೂಕ್ತ ಕಾವಲುಗಳಿಲ್ಲದಾಗ ಸಂಪ್ರದಾಯದ ಹೆಜ್ಜೆಗುರುತು ಮಾಯವಾಗುವುದು ಕಾಲಧರ್ಮವಾಗಿರುತ್ತದೆ. ಇದಕ್ಕೆ ಆಧುನಿಕತೆ ಸೂಕ್ತ ಮನೋವೇದಿಕೆಯನ್ನು ನಿರ್ಮಿಸುತ್ತದೆ.

ಸಾಂತೇರುಗುತ್ತಿನಲ್ಲಿ ವಿವಾಹದ ವಿಚಾರವಾಗಿ ಕುಲ-ಮರ್ಯಾದೆಗಳಿಗೆ ಬಹಳ ದೊಡ್ಡ ಧಕ್ಕೆ ತರುವ ಅಂಶವೆಂದರೆ ಕೊರಪೊಳುವಿನ ವಿವಾಹ. ಉಳ್ಳಾಲದಲ್ಲಿ ರಾತ್ರೆ ಕ್ಯಾಂಪ್ ಹೂಡಿದ್ದ ಕೋಚ್‌ಮನ್ ದೊರೆ ಸಾಂತೇರು ಗುತ್ತಿನ ಅಂಗಳದಲ್ಲಿದ್ದ ಕೊರಪೊಳುವನ್ನು ನೋಡಿ ತಾನು ಅವಳನ್ನು ಮದುವೆಯಾಗುವ ಇಷ್ಟವನ್ನು ವ್ಯಕ್ತಪಡಿಸುತ್ತಾನೆ. ತಾಯಿ ತುಂಗಕ್ಕೆ ಇದರಿಂದ ಬಹಳಷ್ಟು ನೊಂದುಕೊಳ್ಳುತ್ತಾರೆ. ಇಲ್ಲಿ ಗುತ್ತಿನ ಇಷ್ಟಕ್ಕಿಂತ ಪ್ರಬಲವಾದ ಬ್ರಿಟಿಷ್ ಅಧಿಕಾರದ ಎದುರು ಗುತ್ತು ತಲೆ ಬಾಗಲೇ ಬೇಕಾಗುತ್ತದೆ. ಅದಕ್ಕೆ ಸರಿಯಾಗಿ ಕೊರಪೊಳು ತನ್ನ ಸಮ್ಮತಿಯನ್ನೂ ಸೂಚಿಸುತ್ತಾಳೆ. ಊರಿನ ಜನರು ‘ಬ್ರಿಟಿಷ್ ದೊರೆಗೇ ಹೆಣ್ಣು

ಕೊಟ್ಟ ಮನೆತನ’ ಎಂದು ಆಡಿಕೊಳ್ಳುತ್ತಾರೆ. ಬ್ರಿಟಿಷ್ ದೊರೆಗಳು ಗೌರವದಿಂದ ನೀಡಿದ ‘ಪಠೇಲಿಕೆ’ ಮತ್ತು ‘ತೋಟೆಯ ಕೋವಿ’ ಗುತ್ತಿನ ಪ್ರತಿಷ್ಠೆಯನ್ನು ಹೆಚ್ಚಿಸಿತು. ಆದರೂ ಈ ಕುರಿತು ಹುಟ್ಟಿಕೊಂಡ ಇಲ್ಲ ಸಲ್ಲದ ಊಹಾಪೋಹದಿಂದ ಕೊರಪೊಳುವಿನ ತಂದೆ ಮರಣ ಹೊಂದುತ್ತಾರೆ. ಗುತ್ತಿನ ಸಂಪ್ರದಾಯಗಳನ್ನು ಮೀರಿ ಹೋದಾಗ ಅದನ್ನು ಸಹಿಸಿಕೊಳ್ಳುವ ಶಕ್ತಿಯನ್ನು ರೂಢಿಸಿಕೊಂಡರೂ, ವಾಸ್ತವದಲ್ಲಿ ಅದು ಸಾಧ್ಯವಾಗುವುದಿಲ್ಲ ಎಂಬ ಅಂಶವು ಇಲ್ಲಿ ಸ್ಪಷ್ಟವಾಗುತ್ತದೆ. ಹೀಗೆಯೇ ವಿವಾಹಕ್ಕೆ ಸಂಬಂಧಪಟ್ಟಂತೆ ಗುತ್ತಿನ ಸಂಪ್ರದಾಯದಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತವೆ. ಆಧುನಿಕ ಶಿಕ್ಷಣ, ನಗರೀಕರಣ, ಉದ್ಯೋಗ, ಬ್ರಿಟಿಷರ ದಬ್ಬಾಳಿಕೆ ಈ ಎಲ್ಲಾ ಕಾರಣಗಳಿಂದ ಉಂಟಾದ ಬದಲಾವಣೆಗಳಿಗೆ ಗುತ್ತು ತಲೆಬಾಗಲೇಬೇಕಾಗುತ್ತದೆ.

ಗಡಿಹಿಡಿಯುವುದು: ತುಳುನಾಡಿನಲ್ಲಿ ಹಿಂದೆ ಸೀಮೆಯ ಅರಸನಾಗುವವನಿಗೆ ಇಲ್ಲವೆ ಗ್ರಾಮದ ಅಧಿಕಾರ ವಹಿಸಿಕೊಳ್ಳುವವರಿಗೆ ‘ಗಡಿ ಹಿಡಿಯುವ’ ಅಂದರೆ ಪಟ್ಟಾಭಿಷೇಕದ ರೀತಿಯ ಒಂದು ಧಾರ್ಮಿಕ ಆಚರಣಾ ವಿಧಾನ ರೂಢಿಯಲ್ಲಿತ್ತು. ಪಟ್ಟಾಭಿಷೇಕವಾಗಬೇಕಾದರೆ ಬ್ರಿಟಿಷ್ ಸರಕಾರದ ಪರವಾನಿಗೆ ಬೇಕು. ‘ಗಡಿ ಹಿಡಿಯುವ’ ಕ್ರಮಕ್ಕಾದರೆ ಇಂತಹ ಪರವಾನಿಗೆಯ ಅವಶ್ಯಕತೆ ಇರಲಿಲ್ಲ. ಆದರೆ ಬ್ರಿಟಿಷ್ ಸರಕಾರಿಂದ ಒಪ್ಪಿಗೆ ಪಡೆದು ಪಟ್ಟಾಭಿಷಿಕ್ತವಾದ ಅರಸರು ‘ಗಡಿ ಹಿಡಿಯುವ’ ಕಾರ್ಯಕ್ರಮದಲ್ಲಿ ವಿಧಿವತ್ತಾಗಿ ಭಾಗವಹಿಸಬೇಕಾಗುತ್ತಿತ್ತು. ಹಾಗೆ ಭಾಗವಹಿಸಿದ ಅರಸರು ಗಡಿಹಿಡಿದ ಗುತ್ತಿನವನನ್ನು ‘ಇಂದಿನಿಂದ ಈತ ಗಡಿಹಿಡಿದ ಗುತ್ತಿನಾರ್’ ಎಂದು ಘೋಷಿಸಬೇಕಿತ್ತು. ಸೀಮೆಗಳ ಬಹುತೇಕ ಅರಸರು, ಬಂಟ ಸಮುದಾಯದಿಂದ ಬಂದವರೇ ಆಗಿದ್ದರು. ಪಟ್ಟಾಭಿಷೇಕದ ನಂತರ ಅವರವರ ಮನೆತನಕ್ಕೆ ಸಂಬಂಧಿಸಿದ ಮೂಲ ಕುಲನಾಮಗಳಿಂದ ಅವರು ಗುರುತಿಸಲ್ಪಡದೇ ಬಲ್ಲಾಳ, ಹೆಗ್ಗಡೆ, ಆಳ್ವ ಮೊದಲಾದ ಆಯಾ ಗುತ್ತಿನ ಪರಂಪರೆಗೆ ಸಂಬಂಧಿಸಿದ ಬಿರುದುಗಳಿಂದ ಗೌರವಿಸಲ್ಪಡುತ್ತಿದ್ದರು. ‘ಗಡಿಹಿಡಿಯುವುದು’ ಎನ್ನುವುದು ಕೂಡಾ ಪಟ್ಟಾಭಿಷೇಕಕ್ಕೆ ತೀರಾ ಹತ್ತಿರವಾದ ವಿಧಿಯಾಗಿರುತ್ತಿತ್ತು. ಗಡಿಹಿಡಿದವನನ್ನು

'ಗುತ್ತಿನಾರ್' ಎಂದು ಸಂಬೋಧಿಸುತ್ತಿದ್ದರು. ಅರಸರು ಸೀಮೆಯ ಆಡಳಿತಾಧಿಕಾರಿಯಾಗಿರುತ್ತಿದ್ದರೆ, 'ಗುತ್ತಿನಾರ್' ಗ್ರಾಮದ ಆಡಳಿತಾಧಿಕಾರಿ ಮಾತ್ರವಲ್ಲದೆ ಆಯಾಗ್ರಾಮ ಗುತ್ತುಗಳ ದೈವ ಭೂತಗಳ ಪ್ರತಿನಿಧಿಯಾಗಿಯೂ ಇರುತ್ತಿದ್ದರು. ಭೂತಾರಾಧನೆಯ ಸಂದರ್ಭಗಳಲ್ಲಿ ವಿಶೇಷವಾದ ಗೌರವಕ್ಕೆ ಅವರು ಪಾತ್ರರಾಗುತ್ತಿದ್ದರು.

ಹೀಗೆ 'ಗಡಿ ಹಿಡಿದವ' ಎಂದು ಗೌರವಿಸಲ್ಪಟ್ಟವರಿಗೆ ಅವರ ಕುಟುಂಬದ ಯಾವುದೇ (ಹುಟ್ಟು ಅಥವಾ ಸಾವಿನ) ಸೂತಕ ಅನ್ವಯಿಸುವುದಿಲ್ಲ. ಮಠ ಮಂದಿರಗಳ ಸ್ವಾಮಿಗಳ ರೀತಿಯಲ್ಲೇ ಇವರು ದೈವ ಸಮಾನರು. ನಿತ್ಯ ಜೀವನದಲ್ಲಿ ಕೆಲವು ಕ್ರಮಗಳನ್ನು ಇವರು ಅನುಸರಿಸಬೇಕಾಗುತ್ತಿತ್ತು. ಸಾಂತೇರುಗುತ್ತಿನ ಗಡಿಹಿಡಿಯುವ ಸಂಪ್ರದಾಯದಲ್ಲಿ ನಿಧನರಾದ ಹೆಗಡೆಯವರ ಕೈಯಿಂದ ದಾರದ ಮೂಲಕ ಹೊಸತಾಗಿ ಗಡಿಹಿಡಿಯುವವರಿಗೆ ಜೈನ ವಂಶೀಯರು 'ಬಳೆ ಸರಪೊಳಿ' (ಬಳೆ ಸರಪಳಿ) ತೊಡಿಸುವುದು ಪದ್ಧತಿ. ಬೇರೆ ಯಾವ ಗುತ್ತಿನಲ್ಲೂ ಈ ರೀತಿಯ ಸಂಪ್ರದಾಯವಿಲ್ಲ. ಕಾದಂಬರಿಯಲ್ಲಿ ವೆಂಕಪ್ಪ ಹೆಗ್ಡೆಯ ಮರಣಾನಂತರ ಶೀನಪ್ಪ ಹೆಗ್ಡೆಯ ಕಾಲದಲ್ಲಿ ಬಂಟರ 'ಗಡಿಹಿಡಿಯುವ' ಅಂದರೆ ಅಧಿಕಾರ ವಹಿಸಿಕೊಳ್ಳುವಾಗ ವಿಧಿ ವಿಧಾನಗಳು ಮತ್ತು ಆ ಸಮಾರಂಭದ ವೈಭವ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ. ದೂರ ದೂರದ ಊರುಗಳಿಂದ ಜನ ಮೊದಲಿನ ದಿನವೇ ಬಂದು ಸೇರುತ್ತಾರೆ. ನೆರೆಕರೆಯವರ ವಿಶೇಷ ಮುತುವರ್ಜಿಯುಂದ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತಾರೆ. ಗುತ್ತಿನ ಮನೆಯ ಹತ್ತು ಕಡೆಗಳಲ್ಲೂ ದೊಡ್ಡ ದೊಡ್ಡ ಕಾಲುದೀಪಗಳನ್ನು ಉರಿಸಿಡುತ್ತಾರೆ. ಗಡಿಹಿಡಿಯುವ ದಿನ ಗುತ್ತಿನ ಚಾವಡಿಯಲ್ಲಿ ಹಲಸಿನ ಮರದಿಂದ ಸಿದ್ಧಪಡಿಸಿದ ಗುತ್ತಿನ ಹಿರಿಯರ ಕಾಲದ ದೊಡ್ಡ ಕುರ್ಚಿಯನ್ನು ತಂದಿಡುತ್ತಾರೆ. ಮಡಿವಾಳನು ಅದಕ್ಕೆ ಶುಭ್ರವಾದ ಬಟ್ಟೆಯನ್ನು ಹೊದಿಸುತ್ತಾನೆ. ಆ ಬಳಿಕ ಅಗತ್ಯವಿರುವ ಎಲ್ಲಾ ವಸ್ತುಗಳನ್ನು ತಂದಿಡುತ್ತಾರೆ. ಅಂದು ಸಾಂತೇರುಗುತ್ತಿನಲ್ಲಿ ಶೀನಪ್ಪ ಹೆಗ್ಡೆಯವರನ್ನು ಮದುಮಗನಂತೆ ಸಿಂಗರಿಸಿ, ಬಾವ ಕೋಚಣ್ಣ ರೈಗಳು ತನ್ನ ಬಲಗೈಯಲ್ಲಿ ಹಿಡಿದುಕೊಂಡು ಗುತ್ತಿನ ಚಾವಡಿಗೆ ಕರೆದುಕೊಂಡು ಬಂದು ಬಟ್ಟೆ ಹಾಸಿದ್ದ ಕುರ್ಚಿಯಲ್ಲಿ ಕುಳ್ಳಿರಿಸಿದರು. ಶಾಂತಕ್ಕೆ ಅವರ

ಪಾದಗಳನ್ನು ತೊಳೆದರು. ಮುತ್ತೈದೆಯರು ಸೇಸೆ ಹಾಕಿ ಆಶೀರ್ವದಿಸಿದರು. ಆಮೇಲೆ ಭಂಡಾರಿ ಬಂದು ಅವರ ಕ್ಷೌರ ಮಾಡಿದ. ಬಳಿಕ ಹಾಲು, ಅರಶಿನ ಹಚ್ಚಿ ಸ್ನಾನ ಮಾಡಿಸಿದರು.

ಶೀನಪ್ಪ ಹೆಗ್ಡೆಯವರನ್ನು ಮತ್ತೆ ಮದುಮಗನಂತೆ ಅಲಂಕಾರ ಮಾಡಿದರು. ಆ ಬಳಿಕ ಎಲ್ಲರೂ ಜುಮಾದಿ ಭೂತದೆದುರು ನಿಂತು ವಿಧಿವತ್ತಾಗಿ ಪ್ರಾರ್ಥಿಸಿದರು. ವಾಲಗದವರ, ಗರ್ನಾಲುಗಳ ಶಬ್ದವು ಮೊಳಗಿತು. ಮುಂದೆ ಊರಿನ ಹತ್ತು ಸಮಸ್ತರು ಮತ್ತು ಬಂಧು ಬಾಂಧವರನ್ನು ಕೂಡಿಕೊಂಡು ಉಚ್ಚಿಲ ದೇವಸ್ಥಾನಕ್ಕೆ ಹೋಗುತ್ತಾರೆ. ಅಲ್ಲಿ ಸೀಮೆ ಗುತ್ತಿನವರು ಇವರಿಗಾಗಿ ಕಾದು ಕುಳಿತವರಂತೆ ಸೇರಿದ್ದರು. ಅವರಿಗೆ ಸಲ್ಲಬೇಕಾದ ಗೌರವಗಳನ್ನೆಲ್ಲ ಸಾಂತೇರುಗುತ್ತಿನ ಕಡೆಯಿಂದ ಕೊಡಲಾಯಿತು. ಅಲ್ಲಿ ದೇವರ ದರ್ಶನ ಪಡೆದು, ದೇಸ್ಥಾನದಲ್ಲಿ ಆಗಲೇ ಸಿದ್ಧಪಡಿಸಿದ ನಲುವತ್ತೆಂಟು ಪುಣ್ಯಕಲಶಗಳ ನೀರಿನಿಂದ ಮತ್ತೆ ಶೀನಪ್ಪ ಹೆಗ್ಡೆಯವರು ಸ್ನಾನ ಮಾಡಿ, ಸೀಮೆಗುತ್ತಿನವರನ್ನು ಮುಂದಿಟ್ಟುಕೊಂಡು ಮತ್ತೆ ವಾದ್ಯಘೋಷಗಳೊಂದಿಗೆ ಸಾಂತೇರುಗುತ್ತಿಗೆ ಮರಳುತ್ತಾರೆ. ಗುತ್ತಿನ ಹೆಂಗಳೆಯರು ಅವರ ದೃಷ್ಟಿಯನ್ನು ಕಳೆಯುತ್ತಾರೆ.

ಮುಂದೆ ಸೇರಿದ ಸಮಸ್ತರ ಜೊತೆಗೆ ಶೀನಪ್ಪ ಹೆಗ್ಡೆಯವರನ್ನು ಕುಳ್ಳಿರಿಸಿ, ಕೋಟೆಕಾರ್ ಗುತ್ತಿನ ‘ಗುತ್ತಿನಾರ್’ ವೆಂಕಪ್ಪ ರೈಯವರು ಸೀಮೆಯ ‘ಗುತ್ತಿನಾರ್’ರ ಕೈಗೆ ‘ಪಟ್ಟದ ಕತ್ತಿ’ಯನ್ನು ಕೊಡುತ್ತಾರೆ. ಶೀನಪ್ಪ ಹೆಗ್ಡೆಯವರು ಎದ್ದು ನಿಂತು ಆ ಪಟ್ಟದ ಕತ್ತಿಗೆ ಗೌರವ ನೀಡಿದರು. ಆ ಬಳಿಕ ಭೂತದ ಮಂಚದ ಎದುರು ನಿಂತು ಸೀಮೆಯ ‘ಗುತ್ತಿನಾರ್’ ಶೀನಪ್ಪ ಹೆಗ್ಡೆಯ ಕೈಗೆ ಖಡ್ಗವನ್ನು ಹಸ್ತಾಂತರಿಸಿದರು. ಅವರು ಅದನ್ನು ಸ್ವೀಕರಿಸುತ್ತಿದ್ದಂತೆ ಗೌರವದ ಸಂಕೇತವಾಗಿ ‘ಹೆಗ್ಡೇರೆ!, ಹೆಗ್ಡೇರೆ! ಹೆಗ್ಡೇರೆ’ ಎಂದು ಮೂರು ಬಾರಿ ಶೀನಪ್ಪ ಹೆಗ್ಡೆಯವರನ್ನು ಕೂಗಿ ಕರೆದರು. ಶೀನಪ್ಪ ಹೆಗ್ಡೆಯವರು ಅದಕ್ಕೆ ಓಗೊಡದೆ ಮೌನವಾಗಿ ನಿಂತುಕೊಂಡು ತಾನಿನ್ನು ಅಧಿಕೃತವಾಗಿ ಗಡಿಹಿಡಿದ ಹೆಗ್ಡೆ ಎಂಬುದನ್ನು ಭೂತದ ಎದುರು ಒಪ್ಪಿಕೊಂಡೆ ಎನ್ನುವ ಸಂಪ್ರದಾಯದಂತೆ ಮೌನವಾಗಿಯೇ ನಿಂತುಕೊಂಡರು.

ವಾಸ್ತವವಾಗಿ ಗಡಿಹಿಡಿದ ನಂತರವೇ ಗುತ್ತಿನ ಯಜಮಾನ 'ಹೆಗ್ಡೆ' ಎಂಬ ಗೌರವ ವಾಚಕವನ್ನು ಪಡೆಯುತ್ತಾರೆ. ಸೀಮೆ ಗುತ್ತಿನ 'ಗುತ್ತಿನಾರ್'ರು ಭೂತದ ಮಂಚದಲ್ಲಿರುವ 'ಬಂಟಕತ್ತಿ'ಯನ್ನು ಗಡಿಹಿಡಿಯಲ್ಪಡುವವನಿಗೆ ನೀಡಿ ಅವನಿಗೆ 'ಹೆಗ್ಡೆ' ಎಂಬ ಅಭಿನಾಮದಿಂದ ಮೂರು ಬಾರಿ ಕರೆಯುತ್ತಾರೆ. ಭರ್ಜರಿ ಭೋಜನದೊಂದಿಗೆ ವಿಧಿವಿಧಾನಗಳೆಲ್ಲಾ ಕೊನೆಗೊಳ್ಳುತ್ತವೆ. ಮುಂದೆ ಗಡಿಹಿಡಿದವರು 'ಗುತ್ತಿನಾರ್' ಎಂದು ಎಲ್ಲರಿಂದಲೂ ಗೌರವಿಸಲ್ಪಡುತ್ತಾರೆ.

ಶೀನಪ್ಪ ಹೆಗ್ಡೆಯ ನಂತರ ಸಂಕಪ್ಪ ಹೆಗ್ಡೆ ಈ ರೀತಿಯಲ್ಲೇ ಗಡಿಹಿಡಿದು 'ಗುತ್ತಿನಾರ್' ಎನ್ನಿಸಿಕೊಳ್ಳಬೇಕೆಂದು ಅಂಬಕ್ಕಗೆ ತೀವ್ರ ಆಸೆಯಿತ್ತು. ಇದರಿಂದ ಗುತ್ತಿನ ವೈಭವ ಹೆಚ್ಚಾಗಿ ಸಂಪ್ರದಾಯಗಳು ಉಳಿಯುತ್ತವೆ ಎಂದು ಆಕೆ ಸಂಕಪ್ಪನಿಗೆ ಹೇಳಿದಾಗ ಆತ ಅದಕ್ಕೆ ಸುತರಾಂ ಒಪ್ಪಲಿಲ್ಲ. ಅವರಿಗೆ ದೇಶದ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವೇ ಮುಖ್ಯವಾಗಿತ್ತು. ಎಲ್ಲರೂ ಸಮಾನರಾಗಿರುವಾಗ ಈ ಅಧಿಕಾರ ಅಂತಸ್ತು ತನಗೇಕೆ ಎಂದು ತಿರಸ್ಕರಿಸಿದರು. ಶೀನಪ್ಪ ಹೆಗ್ಡೆಗೆ ಇದರಿಂದ ತುಂಬಾ ನೋವಾಯಿತು. ತಾಯಿ ಶಾಂತಕ್ಕ "ನೋಡು, ಸಂಕಪ್ಪ ನಿನಗೆ ಇದೆಲ್ಲಾ ಬೇಡ ಅನಿಸಬಹುದು. ಆದರೆ ನೀನು ಗಡಿಹಿಡಿಯಲು ಒಪ್ಪದಿದ್ದರೆ, ನಿನ್ನ ನಂತರ ನಿನ್ನ ಅಳಿಯಂದಿರಿಗೂ ಹೀಗೆ ಗಡಿಹಿಡಿಯುವ ಅವಕಾಶ ತಪ್ಪಿ ಹೋಗುತ್ತದೆ. ಇದು ನಿನ್ನ ಮುಂದಿನ ಸಂತತಿಗೆ ನೀನು ಅನ್ಯಾಯ ಮಾಡಿದ ಹಾಗಲ್ಲವೇ?" ಎನ್ನುತ್ತಾರೆ. (ಉಲ್ಲಂಘನೆ, ಪುಟ ೩೨೪). ವಂಶಪಾರಂಪರ್ಯವಾಗಿ ಉಳಿದುಕೊಂಡು ಬಂದಿರುವ ಈ ಕ್ರಮವನ್ನು ಸ್ವೀಕರಿಸುವುದು ಧರ್ಮವಾಗುತ್ತದೆ. ಇಲ್ಲವಾದಲ್ಲಿ ಅಧರ್ಮ ಎಂದು ಶಾಂತಕ್ಕ ಎಚ್ಚರಿಸಿದರೂ ಸಂಕಪ್ಪ ಅದಕ್ಕೆ ಕಿವಿಗೊಡಲಿಲ್ಲ.

ಸಂಕಪ್ಪನ ದೃಷ್ಟಿಯಲ್ಲಿ ಅಧಿಕಾರ, ಅಂತಸ್ತು, ಗೌರವ ಎಂಬುದು ಪಾರಂಪರಿಕವಾಗಿ ಬರಬಾರದು. ಅದು ಯಾವಾಗಲೂ ಸ್ವಂತ ಯೋಗ್ಯತೆಯಿಂದಲೇ ಬರಬೇಕು. ಬ್ರಿಟಿಷರ ದಬ್ಬಾಳಿಕೆಯ ಅಡಿಯಲ್ಲಿ ಬದುಕುತ್ತಿರುವ ನಾವು ದಾಸ್ಯ ಜೀವನವನ್ನು ನಡೆಸುತ್ತಿದ್ದೇವೆ. ರಾಜ ವಂಶಸ್ಥರು ತಮ್ಮ ಅಧಿಕಾರವನ್ನು ತಮ್ಮ ಮುಂದಿನ ಸಂತತಿಗೆ ಮುಂದುವರಿಸುವ ಹಾಗೆ, ನಾವು ವಂಶ ಪಾರಂಪರಿಕವಾಗಿ

ಸುಮ್ಮನೆ ಬರುವ 'ಇಲ್ಲದ' ಅಧಿಕಾರವನ್ನು ಒಪ್ಪುವುದು ಸರಿಯಲ್ಲ ಎನ್ನುತ್ತಾನೆ. ನಾವು ಇಡೀ ದೇಶದ ಜನರು 'ಒಂದು' ಎನ್ನುವ ಭಾವನೆಯಿಂದ ಕೂಡಿರಬೇಕು. ನಮ್ಮ ದೇಶವನ್ನು ಬ್ರಿಟಿಷರ ದಾಸ್ಯದಿಂದ ಬಿಡಿಸಿ, ಮತ್ತೆ ನಮ್ಮನ್ನು ಆಳುವವರು ಯಾರೆಂದು ಇಡಿ ದೇಶದ ಜನರು ಚಿಂತಿಸಿ ನಿರ್ಧರಿಸಬೇಕು. ಆಗ ಅದಕ್ಕೆ ಬೆಲೆಯಿದೆ ವಿನಃ ವಂಶಗತವಾಗಿ ಬಂದ ಅಧಿಕಾರಕ್ಕೆ ಬೆಲೆಯಿಲ್ಲ ಎನ್ನುತ್ತಾನೆ. ಇದಕ್ಕೆ ಪೂರಕವಾಗಿ ಅಮ್ಮನಿಗೆ "ಇದು ಗಾಂಧೀಜಿಯವರ ಮಾತು. ಮಾತ್ರವಲ್ಲದೇ ಈ ಇಡಿ ದೇಶದ ಅಂದರೆ ನಮ್ಮೆಲ್ಲರ ಅಂತರಂಗದ ಮಾತಾಗಬೇಕು ಎಂದುಕೊಂಡಿದ್ದೇನೆ ನಾನು!" ಎಂದು ತಿರುಗೇಟು ನೀಡುತ್ತಾನೆ. ಬಹಳಷ್ಟು ನೊಂದಂತಹ ಶಾಂತಕ್ಕಗೆ ಗಂಡ ಕೋಚಣ್ಣ ರೈಗಳು "ಸುಮ್ಮನಿರೇ, ನಿನಗೆ ಆತ ಚಿಕ್ಕವ, ಇನ್ನೂ ಮಗು ಎಂಬ ಭಾವನೆ ಇರಬಹುದು. ಆದರೆ ನಮ್ಮ ಸಂಕಪ್ಪ – ನಮಗೆಲ್ಲರಿಗಿಂತ ದೊಡ್ಡವನೇ! ನಮಗೆ ಗೊತ್ತಿಲ್ಲ, ಅವನ ಯೋಗ್ಯತೆ! ನಾಳೆ ಈ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಅವನ ಸ್ಥಾನಮಾನ ಎಷ್ಟು ಅಂದರೆ, ಸೀಮೆಗುತ್ತಿನ ಗಡಿಹಿಡಿದ 'ಗುತ್ತಿನಾರ್'ಗಿಂತಲೂ ದೊಡ್ಡದಿರಬಹುದು." ಎಂದು ಸಂಕಪ್ಪ ಹೆಗ್ಡೆಯ ವಿಚಾರಗಳಿಗೆ ಸಮರ್ಥನೆಯನ್ನು ನೀಡುತ್ತಾರೆ. ತನ್ನ ಮಗ ವಕೀಲಿ ಓದಿ, ಬೆಂಗಳೂರಿನ ಕೋರ್ಟಿಗೆ ಆತ ಕಪ್ಪು ಕೋಟು ಹಾಕಿ ಹೋಗಬೇಕು ಎಂದು ಕನಸು ಕಂಡಿದ್ದ ರೈಗಳಿಗೆ ಸಂಕಪ್ಪನ ಧೋರಣೆಗಳು ಬೇಸರ ತರಲಿಲ್ಲ. ಆತನ ವಿಚಾರಗಳಿಗೆ ಅರ್ಥವಿದೆ ಹುರುಳಿದೆ ಎಂದೇ ಸಮರ್ಥಿಸಿಕೊಳ್ಳುತ್ತಿದ್ದರು. ಒಂದು ದಿನವಾದರೂ ಸಂಕಪ್ಪನ ವಿಚಾರದಲ್ಲಿ ಅವರು ಬೇಸರ ವ್ಯಕ್ತಪಡಿಸಲಿಲ್ಲ. ಈ ರೀತಿಯಲ್ಲಿ ಸಂಕಪ್ಪ ಹೆಗ್ಡೆಯ ಕಾಲದಲ್ಲಿ ಗಡಿಹಿಡಿಯುವ ವಿಚಾರದಲ್ಲಿ ಸ್ಥಿತ್ಯಂತರಗಳಾಗಿರುವುದನ್ನು ಗಮನಿಸಬಹುದು.

ಮರಣ: ಇತರ ಜನಾಂಗಗಳಂತೆ ಬಂಟ ಜನಾಂಗದಲ್ಲಿಯೂ ಓರ್ವನು ಮರಣಹೊಂದಿದಾಗ ವಿವಿಧ ವಿಧಿಗಳನ್ನು ನೆರವೇರಿಸುತ್ತಾರೆ. ಗಡಿಹಿಡಿಯುವ ಸಂಪ್ರದಾಯದಲ್ಲಿ ನಿಧನರಾದ ಹೆಗಡೆಯವರ ಕೈಯಿಂದ ದಾರದ ಮೂಲಕ ಹೊಸದಾಗಿ ಗಡಿಹಿಡಿಯುವವರಿಗೆ ಜೈನ ವಂಶೀಯರು 'ಬಳೆ ಸರಪೊಳಿ' ತೊಡಿಸುವ ಕ್ರಮದಂತೆ ಜೈನರಾದ ಅಜಿಲರು ಬಂದು ವೆಂಕಪ್ಪ ಹೆಗ್ಡೆಯವರ ಕೈಯ್ಯಲ್ಲಿದ್ದ ನಾಲ್ಕು

ತೊಲೆ ತೂಕದ ಚಿನ್ನದ ಬಳೆ ಸರಪೊಳಿಯನ್ನು ಶೀನಪ್ಪ ಹೆಗ್ಡೆಯವರಿಗೆ ತೊಡಿಸುತ್ತಾರೆ. ಆದರೆ ಅವರ ನಂತರ ಈ ಕ್ರಮವನ್ನು ನಡೆಸುವುದಕ್ಕೆ ಸಂಕಪ್ಪ ಹೆಗ್ಡೆ ಒಪ್ಪುವುದಿಲ್ಲ.

೪.೩ ತಲೆಮಾರುಗಳು ಮತ್ತು ಸಾಂಸ್ಕೃತಿಕ ಪಲ್ಲಟ:

ಜೀವನಾವರ್ತನ ಮತ್ತು ವಾರ್ಷಿಕಾವರ್ತನದಲ್ಲಿ ಹಿಂದಿನ ಕಾಲದಲ್ಲಿದ್ದಂತಹ ಆಚರಣೆಗಳಿಗೂ ಇಂದು ಇರುವ ಆಚರಣೆಗಳಿಗೂ ಬಹಳ ವ್ಯತ್ಯಾಸವಿದೆ. ಕೆಲವೊಂದು ಸಂಪ್ರದಾಯಗಳು ಇಂದು ಕಣ್ಮರೆಯಾಗಿಬಿಟ್ಟಿವೆ. ಉದಾ: ಪುಷ್ಪವತಿಯಾದಾಗ ಆಚರಿಸುವ ಕ್ರಮಗಳು, ಬಾಣಂತಿ ಕ್ರಮ, ಗಡಿಹಿಡಿಯುವುದು ಇತ್ಯಾದಿ. ಕೆಲವು ಸಂಪ್ರದಾಯಗಳು ಮೊದಲಿಗಿಂತಲೂ ವೈಭವಯುತವಾಗಿ ನಡೆಯುತ್ತಿವೆ. ಉದಾ: ನಾಗಾರಾಧನೆ, ಭೂತಾರಾಧನೆ ಇತ್ಯಾದಿ. ಕೆಲವು ಗುತ್ತಿನ ಮನೆಗಳಲ್ಲಿ ಜನರು ಊರು ಬಿಟ್ಟುಹೋದರೂ ಈ ಆರಾಧನೆಗಳ ಸಮಯದಲ್ಲಿ ಗುತ್ತಿನ ಅಂಗಳದಲ್ಲಿ ತುಂಬಾ ಸಂತೋಷದಿಂದ ಸೇರಿಕೊಳ್ಳುತ್ತಾರೆ. ಪರಸ್ಪರ ಕ್ಷೇಮ ಸಮಾಚಾರ ವಿನಿಮಯ ಮಾಡಿಕೊಳ್ಳುತ್ತಾರೆ. ಆ ಮೂಲಕ ಬಂಧುತ್ವವನ್ನು ನವೀಕರಣಗೊಳಿಸುವ, ಒಂದುಗೂಡಿಸುವ ಪ್ರಕ್ರಿಯೆಯೂ ನಡೆಯುತ್ತದೆ. ಕಾದಂಬರಿಯಲ್ಲಿಯೂ ಮೊಗಸಾಲೆಯವರು ಇಂತಹ ಸಂದರ್ಭಗಳನ್ನು ಚಿತ್ರಿಸಿದ್ದಾರೆ.

‘ಉಲ್ಲಂಘನೆ’ ಕಾದಂಬರಿಯಲ್ಲಿ ಮೊಗಸಾಲೆಯವರು ಸಾಂತೇರುಗುತ್ತಿನ ಮೊದಲ ಎರಡು ಪೀಳಿಗೆಗಳನ್ನು ಕುಲಮರ್ಯಾದೆಗಳು ನಿಯಂತ್ರಿಸುತ್ತವೆ ಎಂಬುದನ್ನು ಚಿತ್ರಿಸುತ್ತಾರೆ. ವೆಂಕಪ್ಪ ಹೆಗ್ಡೆಯ ಕಾಲದಲ್ಲಿ ಬ್ರಿಟಿಷ್ ಅಧಿಕಾರಿ ಕೋಚ್‌ಮನ್ ಗುತ್ತಿನ ಹೆಣ್ಣನ್ನು ಮದುವೆಯಾಗುವ ಮೂಲಕ ಕುಲಮರ್ಯಾದೆಗೆ ಸ್ವಲ್ಪ ಮಟ್ಟಿನ ಆಘಾತ ಉಂಟಾಗುತ್ತದೆ. ಆದರೆ ಇತರ ಆಚರಣೆಗಳು, ಕ್ರಮಗಳು ಹಿಂದಿನಂತೆ ನಡೆದುಕೊಂಡು ಬಂದಿವೆ. ಶೀನಪ್ಪ ಹೆಗ್ಡೆ ಮತ್ತು ಶಾಂತಕ್ಕೆಯ ಕಾಲದಲ್ಲಿ ಹಿಂದಿನ ಸಂಪ್ರದಾಯಗಳು, ಆರಾಧನೆಗಳು, ಕೃಷಿ ಸಂಬಂಧಿ ಅಚರಣೆಗಳು, ಜೀವನಾವರ್ತನದಲ್ಲಿ ಕಂಡುಬರುವ ಹುಟ್ಟು, ಮೈನೆರೆಯುವುದು, ಮದುವೆ, ಸಾವು ಮೊದಲಾದ ಕ್ರಮಗಳು ಯಾವುದೇ ಬದಲಾವಣೆಗಳಿಲ್ಲದೆ ಮುಂದುವರಿದಿದೆ. ಆದರೆ ಸಂಕಪ್ಪ ಹೆಗ್ಡೆ ಮತ್ತು ಅಂಬಕ್ಕೆಯ ಕಾಲದಲ್ಲಿ ಗುತ್ತಿನ

ಸಂಪ್ರದಾಯಗಳನ್ನು ಮುಂದುವರಿಸಲು ಸಾಧ್ಯವಾಗುವುದಿಲ್ಲ. ಸ್ವಾತಂತ್ರ್ಯ ಚಳವಳಿ, ಕರ್ನಾಟಕದ ಭೂಮಸೂದೆ ಕಾನೂನುಗಳು, ಆಧುನಿಕ ಶಿಕ್ಷಣ ಇವುಗಳ ಕಾರಣದಿಂದ ಗುತ್ತಿನಲ್ಲಿಯೂ ಊಹಿಸಲಸಾಧ್ಯವಾದಷ್ಟು ಪರಿವರ್ತನೆಗಳಾಗುತ್ತವೆ. ಹೊಸ ಹೊಸ ಆವಿಷ್ಕಾರಗಳು ಸಾಮಾಜಿಕ ಸುಧಾರಣೆಯ ದೃಷ್ಟಿಯಿಂದ ಅನಿವಾರ್ಯವಾದರೂ ಇದು ಗುತ್ತಿನ ನೆಮ್ಮದಿಯ ಜೀವನದ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ. ಒಂದು ಕಡೆ ಗುತ್ತಿನ ಮನೆ ಮತ್ತು ಗೇಣಿದಾರರು, ಮೂಲದಾಳುಗಳ ಮಧ್ಯೆ ಅನ್ಯೋನ್ಯ ಸಂಬಂಧವಿದ್ದರೆ, ಇನ್ನೊಂದು ಕಡೆ ಅನಿವಾರ್ಯವಾಗಿ ಉಂಟಾಗಬೇಕಾದ ಸಾಮಾಜಿಕ ಬದಲಾವಣೆ ಮತ್ತು ಅದರ ಪರಿಣಾಮಗಳನ್ನು ಗುತ್ತು ಅರಗಿಸಿಕೊಳ್ಳಲೇಬೇಕಾದ ಪರಿಸ್ಥಿತಿ ಒದಗಿಬರುತ್ತದೆ.

ಮೂರನೆಯ ಪೀಳಿಗೆಯ ಸಂಕಪ್ಪ ಹೆಗ್ಡೆ ಗಾಂಧೀಜಿಯವರ ಕರೆಗೆ ಓಗೊಟ್ಟು ತನ್ನ ಕಾಲೇಜು ಶಿಕ್ಷಣಕ್ಕೆ ವಿರಾಮ ನೀಡುತ್ತಾರೆ. ಅಪ್ಪಟ ಗಾಂಧಿವಾದಿಯಾದ ಅವರು ಸಾಮಾಜಿಕ ಸಮಾನತೆಯ ಹಲವು ವಿಚಾರಗಳನ್ನು ಹೊತ್ತು ಸಾಂತೇರುಗುತ್ತಿಗೆ ಹಿಂತಿರುಗುವುದರಿಂದ ಗುತ್ತಿನ ಮನೆಯ ಹಲವು ಸಂಪ್ರದಾಯಗಳನ್ನು ಉಲ್ಲಂಘಿಸುತ್ತಾರೆ. ಅದೇ ಸಮಯದಲ್ಲಿ ಬಂದ ಸರಕಾರದ ಭೂಮಸೂದೆ ಕಾಯಿದೆಯಿಂದ ಗುತ್ತಿನ ಯಜಮಾನಿಯಾದ ಅಂಬಕ್ಕೆ ಸಾಕಷ್ಟು ವಿಪ್ಲವಕ್ಕೆ ಒಳಗಾಗುತ್ತಾರೆ. ಸಂಕಪ್ಪ ಹೆಗ್ಡೆಯ ಆಲೋಚನೆಗಳಿಗೆ, ಚಿಂತನೆಗಳಿಗೆ ಅಂಬಕ್ಕೆ ಹೊಂದಿಕೊಂಡು ಹೋಗಬೇಕಾಗುತ್ತದೆ. ಅಪ್ಪಟ ಸಂಪ್ರದಾಯವಾದಿಯಾದ ಅಂಬಕ್ಕೆ ತನ್ನ ಮೊಮ್ಮಕ್ಕಳ ಕಾಲದಲ್ಲಿ ಪೂರ್ತಿಯಾಗಿ ಬದಲಾವಣೆ ಹೊಂದುತ್ತಾರೆ. ಈ ರೀತಿಯ ಹೊಂದಿಕೊಳ್ಳುವಿಕೆ ಮೊದಲಿಗೆ ಅವರಿಗೆ ಸವಾಲಾಗಿ ಕಾಣಿಸಿಕೊಂಡರೂ ಕೊನೆಗೆ ಅದರಲ್ಲಿರುವ 'ಸತ್ಯ'ವನ್ನು ಕಂಡುಕೊಳ್ಳುವ ಮೂಲಕ 'ಗುತ್ತಿನ ಮನೆ'ಯ 'ಬಂಟ ಜನಾಂಗ'ದ ಕೆಲವು ನಿಯಮಗಳನ್ನು ಉಲ್ಲಂಘಿಸುತ್ತಾರೆ.

ಅಧ್ಯಾಯ ೫

ವಿಕಾಸದ ಪರಿಕಲ್ಪನೆ ಮತ್ತು ಗುತ್ತಿನ ಸವಾಲುಗಳು

ಅಧ್ಯಾಯ – ೫ ವಿಕಾಸದ ಪರಿಕಲ್ಪನೆ ಮತ್ತು ಗುತ್ತಿನ ಸವಾಲುಗಳು:

ಬಂಟ ಜನಾಂಗವು ಬಹಳ ಹಿಂದಿನಿಂದಲೂ ಕೃಷಿಯ ಜೊತೆಗೆ ಅವಿನಾಭಾವವಾದ ಸಂಬಂಧವನ್ನಿಟ್ಟುಕೊಂಡು ಆ ಮೂಲಕವೇ ತಮ್ಮ ಅಸ್ಮಿತೆ (Identity)ಯನ್ನು ದಾಖಲಿಸಿಕೊಂಡಿದ್ದಾರೆ. ಕರಾವಳಿ ಪ್ರದೇಶ ಮತ್ತು ಮಲೆನಾಡಿನ ಕೃಷಿಯ ಕುರಿತು ಅವಲೋಕನ ಮಾಡಿದಾಗ ಆ ಅಂಶವು ಖಚಿತವಾಗುತ್ತದೆ. ವಿಸ್ತಾರವಾದ ಭತ್ತದ ಗದ್ದೆಗಳನ್ನು ಕೃಷಿಕರು ಹೆಚ್ಚು ಇಷ್ಟಪಡುತ್ತಾರೆ. ಕಟ್ಟಪುಣಿ(ಗದ್ದೆ ಹುಣಿ)ಗಳೇ ಇಲ್ಲದ ದೊಡ್ಡ ಹಿಡುವಳಿ ಬಂಟರ ಜಮೀನ್ದಾರಿತನದ ಪ್ರತೀಕವಾಗಿದೆ. ಇಂದಿಗೂ ಆ ಸಮಾಜದಲ್ಲಿ ವ್ಯಕ್ತಿ, ಗುತ್ತು ಮನೆಗಳ ಪ್ರತಿಷ್ಠೆಯನ್ನು ಅಕ್ಕಿಯ ಮಾನವಾದ 'ಮುಡಿ'ಯಿಂದಲೇ ಅಳೆಯುವ ಕ್ರಮವಿದೆ. ಹಿಂದಿನ ಕಾಲದಲ್ಲಿ ನೂರು, ಸಾವಿರ ಮುಡಿಯ ಹಿಡುವಳಿ ಹೊಂದಿದ ಬಂಟ ಮನೆ, ಗುತ್ತುಗಳು ಪ್ರತಿಯೊಂದು ಊರು, ಗ್ರಾಮಗಳಲ್ಲಿ ಇರುತ್ತಿದ್ದವು.

ಹಿಂದೆ ಬಂಟರು ಜಮೀನ್ದಾರ, ಯಜಮಾನ, ಭೂಮಾಲಿಕ, ಧನಿ ಎಂದೆಲ್ಲಾ ಕರೆಯಿಸಿಕೊಳ್ಳುತ್ತಿದ್ದರು. ಈ ರೀತಿಯ ಸಂಬೋಧನೆಯನ್ನೇ ಅವರು ಹೆಚ್ಚು ಇಷ್ಟಪಡುತ್ತಾರೆ. ಸ್ಥಿರ ಸೊತ್ತಾದ ತಮ್ಮ ಭೂಮಿಯನ್ನು ಉಳಿಸಿಕೊಳ್ಳುವ ಹಂಬಲ ಬಂಟರಿಗೆ ಹೆಚ್ಚು. ಅದರಲ್ಲೂ ಮಹಿಳೆಯರಿಗೆ ಈ ಬಗ್ಗೆ ಹೆಚ್ಚು ಆಸಕ್ತಿ. ಸಂಸ್ಕೃತಿಯ ಸಂರಕ್ಷಣೆಯಲ್ಲಿ ಅವರು ವಿಶೇಷವಾದ ಪಾತ್ರವನ್ನು ನಿರ್ವಹಿಸುತ್ತಾರೆ. ಗದ್ದೆಯನ್ನು ಹದಗೊಳಿಸುವ, ದುಡಿಸುವ ಜವಾಬ್ದಾರಿ ಗಂಡಸರದ್ದಾದರೆ, ನೇಜಿ ನೆಟ್ಟು, ಕೊಯ್ದು, ಅಂಗಳಕ್ಕೆ ಬಂದ ಭತ್ತವನ್ನು ಜತನದಿಂದ ರಕ್ಷಿಸುವ ಪೂರ್ತಿ ಜವಾಬ್ದಾರಿ ಮಹಿಳೆಯರದ್ದು. ಮುಂದಿನ ಕೃಷಿಗೆ ಬೇಕಾಗುವ ಬೀಜಗಳನ್ನು

ಭದ್ರವಾಗಿಟ್ಟುಕೊಳ್ಳುತ್ತಾರೆ. ನರೇಂದ್ರ ರೈಯವರು ತಮ್ಮ ಒಂದು ಲೇಖನದಲ್ಲಿ, "'ಬೀಜ ಸಂರಕ್ಷಣೆ' ಎಂದರೆ ಒಂದು ಸಮುದಾಯದ ಸಂಸ್ಕೃತಿಯ ಕಾಪಿಡುವಿಕೆಯೂ ಹೌದು" ಎನ್ನುತ್ತಾರೆ. (ಲೇಖನ, ಕೃಷಿ ಮತ್ತು ಬಂಟ ಮಹಿಳೆ, ಪುಟ ೮)

ಆಧುನಿಕ ಶಿಕ್ಷಣ, ಕೈಗಾರಿಕಾ ಕ್ರಾಂತಿ, ಭೂಮಸೂದೆ, ಜಾಗತೀಕರಣ ಮುಂತಾದ ಅಂಶಗಳು ಬಂಟರ ಸಂಸ್ಕೃತಿಯ ಮೇಲೆ ವಿಶೇಷವಾದ ಪರಿಣಾಮ ಬೀರಿವೆ. ಇವೆಲ್ಲ ಪದಾರ್ಥ ಸಂಸ್ಕೃತಿಯ (Material Culture) ಉಪ ಉತ್ಪನ್ನಗಳೆಂದೇ ಭಾವಿಸಬಹುದು. ನಗರಗಳಲ್ಲಿ ಮಾತ್ರವಲ್ಲ ಹಳ್ಳಿಯ ಜನರ ಜೀವನದಲ್ಲೂ ತುಂಬಾ ಬದಲಾವಣೆಗಳು ಆಗಿವೆ. ಗುತ್ತಿನ ಮನೆ, ಭೂಮಿಯನ್ನು ಉಳಿಸುವ ಬದಲಾಗಿ ಸುಲಭದ ಮತ್ತು ಹೆಚ್ಚು ಲಾಭ ತರುವ ಉದ್ದಿಮೆಗಳತ್ತ ಜನರು ವಾಲುತ್ತಾರೆ. ನಗರ ಪ್ರದೇಶಗಳಲ್ಲಿ ಜೀವನ ಮಾಡಿದ ಜನರಿಗೆ ಮತ್ತೆ ಹಳ್ಳಿಯ ಕೃಷಿಯ ಕಡೆಗೆ ಒಲವು ಕಡಿಮೆಯಾಗುತ್ತದೆ. ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಗುತ್ತಿನ ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗುವುದು ತುಂಬಾ ಕಷ್ಟದ ಕೆಲಸವಾಗಿದೆ. ಗುತ್ತಿನ ಮನೆಗೆ ಯಾವ ರೀತಿಯ ಆಘಾತಗಳಾದುವೆಂಬುದನ್ನು ಈ ಕೆಳಗಿನ ಅಂಶಗಳನ್ನಿಟ್ಟುಕೊಂಡು ಕಾದಂಬರಿಯ ಹಿನ್ನೆಲೆಯಲ್ಲಿ ಗಮನಿಸಬಹುದು.

೫.೧ ಗಾಂಧಿವಾದ ಮತ್ತು ಮಾತೃರೂಪಿ ಸಂಸ್ಕೃತಿಯ ಮುಖಾಮುಖಿ:

'ಸರ್ವೋದಯ' ಎನ್ನುವ ಕಲ್ಪನೆಯೊಂದಿಗೆ ಗಾಂಧೀಜಿಯವರು ಸಮಾಜಮುಖಿಯಾಗಿ ಚಿಂತನೆ ಮಾಡುತ್ತಾರೆ. ಅವರು 'ವ್ಯಕ್ತಿಯ' ಹಾಗೂ

'ಸಮಾಜದ' ಪ್ರಗತಿಗೆ ಸಾಮೂಹಿಕ ಪ್ರಯತ್ನ ಮತ್ತು ಸಹಕಾರ ಅನಿವಾರ್ಯ ಎಂಬ ತತ್ವವನ್ನು ನಿರೂಪಿಸಿದರು. ಸರ್ವೋದಯದ ನೆಲೆ ಮತ್ತು ಹಾದಿಯು ಪಾರಮಾರ್ಥಿಕವಾದುದು. ಅವರ ಪ್ರಕಾರ ವ್ಯಕ್ತಿಗಳು ಕರ್ತವ್ಯಪರರಾಗಬೇಕೇ ಹೊರತು ಹಕ್ಕುಗಳನ್ನು ಕುರಿತು ವಿಶೇಷ ಕಾಳಜಿ ವಹಿಸಬಾರದು. ಸತ್ಯ, ಅಹಿಂಸೆ, ಶೀಲತ್ವ, ಭಯ ರಹಿತತೆ, ಕಳ್ಳತನ ಮಾಡದಿರುವುದು, ಆಹಾರ ಸೇವನೆಯಲ್ಲಿ ನಿಯಂತ್ರಣ, ಸ್ವಹಿತಾಸಕ್ತಿಗಳ ತ್ಯಾಗ, ದುಡಿಮೆ, ಸ್ವದೇಶೀಯತೆ, ಸರ್ವಧರ್ಮ ಸಹಿಷ್ಣುತೆ, ಅಸ್ಪೃಶ್ಯತೆಯನ್ನು ಆಚರಿಸದಿರುವುದು ಮುಂತಾದ ಮೌಲ್ಯಗಳು ನಮ್ಮ ಬದುಕನ್ನು ಉತ್ತಮ ರೀತಿಯಲ್ಲಿ ರೂಪಿಸಬಲ್ಲವು ಎಂಬ ಅಭಿಪ್ರಾಯ ಅವರದು. ಬಂಡವಾಳಶಾಹಿ ಆರ್ಥಿಕತೆಯು ಕಾರ್ಮಿಕರು ಮತ್ತು ಬಳಕೆದಾರರು ಇಬ್ಬರನ್ನೂ ಶೋಷಿಸುತ್ತದೆ. ಹೀಗಾಗಿ ಅದನ್ನು ತಪ್ಪಿಸಲು ಈ ಎರಡು ವರ್ಗಗಳು ಸಂಘಟಿತವಾಗುತ್ತವೆ. ಆದರೆ ಇದರಿಂದ ಉತ್ಪಾದಕರು–ಬಳಕೆದಾರರು ಹಾಗೂ ಮಾಲಿಕರು–ಕಾರ್ಮಿಕರ ನಡುವೆ ಸಂಘರ್ಷವೇರ್ಪಡುತ್ತದೆ. ಇಂತಹ ಸಂಘರ್ಷವನ್ನು ತಪ್ಪಿಸಬೇಕೆಂದೇ ಗಾಂಧೀಜಿಯವರು ನ್ಯಾಯೋಚಿತ ಕೂಲಿ, ಆದಾಯ ಮತ್ತು ಆರ್ಥಿಕ ಅವಕಾಶಗಳ ಸಮಾನ ವಿತರಣೆಯ ವಿಷಯವನ್ನು ಪ್ರತಿಪಾದಿಸಿದರು.

ತ್ಯಾಗದ ಮೂಲಕ ಅಹಿಂಸೆ ಸಾಧ್ಯವೆಂಬುದನ್ನು ಗಾಂಧಿವಾದ ಪ್ರತಿಪಾದಿಸುತ್ತದೆ. "ಶೂದ್ರರು, ಗುಲಾಮರು, ಸೇವಕರು ಮತ್ತು ಕಾರ್ಮಿಕರನ್ನು ಸ್ತುತಿಸಲು ಗಾಂಧಿವಾದ ಸಿದ್ಧವಾಗಿದೆ; ಅದಕ್ಕಿರುವ ಒಂದೇ ಒಂದು ಷರತ್ತೆಂದರೆ ಒಡೆಯರಾಗುವ ಅಪೇಕ್ಷೆಯನ್ನು ಅವರೆಂದೂ ವ್ಯಕ್ತಪಡಿಸಕೂಡದು. ಶೂದ್ರರು ಸ್ವತಃ ಒಪ್ಪಿಕೊಂಡಿರುವ ಈ ದಾಸ್ಯವೇ ಒಡೆಯರ ಹಕ್ಕುಗಳಿಗೆ ಲಭಿಸಿರುವ ಮಹತ್ತರವಾದ ರಕ್ಷಣೆಯಾಗಿದೆ" (ಯಶ್‌ಪಾಲ್, ೧೯೯೮, ಪುಟ ೮೩)

ಗಾಂಧೀಜಿಯವರು ಸ್ತ್ರೀಯಲ್ಲಿರುವ ಅಪರಿಮಿತ ಶಕ್ತಿಯ ಕುರಿತಾಗಿ ತಿಳಿಸುತ್ತಾರೆ. ಸತ್ಯ, ಅಹಿಂಸೆ, ತ್ಯಾಗ, ಪ್ರೀತಿ, ಇವೆಲ್ಲ ಆಕೆಯಲ್ಲಿ ಸಾಕಾರಗೊಂಡಿದೆ ಎನ್ನುತ್ತಾರೆ.

'ಉಲ್ಲಂಘನೆ' ಕಾದಂಬರಿಯಲ್ಲಿ ಗಾಂಧೀಜಿಯವರ ನಾನಾ ಚಿಂತನೆಗಳ ರಸಪಾಕವನ್ನು ಗಮನಿಸಬಹುದು. ಇಲ್ಲಿ ಬರುವ ಪ್ರಮುಖ ಪಾತ್ರವಾದ ಅಂಬಕ್ಕೆ

ತನ್ನ ಹಿರಿಯರ ಕಾಲದಿಂದ ನಡೆದುಕೊಂಡು ಬಂದಿರುವ ಯಾವುದೇ ಸಂಪ್ರದಾಯಗಳಲ್ಲಿ ಬದಲಾವಣೆ ಮಾಡಿಕೊಳ್ಳಲು ಇಷ್ಟಪಡುವುದಿಲ್ಲ. ಜೀವನದಲ್ಲಿ ಬದಲಾವಣೆ ಬೇಕು. ಆದರೆ ಅದು ನಮ್ಮ ಪುರಾತನ ಸಂಪ್ರದಾಯಗಳನ್ನು ಉಳಿಸಿಕೊಂಡೇ ಆಗಬೇಕೆಂಬ ನಿಲುವು ಆಕೆಯದು. ಸಂಕಪ್ಪನ ಸರ್ವೋದಯ, ಸಮಾನತೆಯ ಧೋರಣೆಗಳು ಅಂಬಕ್ಕಗೆ ದೊಡ್ಡ ಸವಾಲಾಗಿ ಪರಿಣಮಿಸುತ್ತವೆ.

ಯಾವಾಗಲೂ ಮನೆಯ ಹೊರಗಡೆಯೇ ಊಟ ಮಾಡುತ್ತಿದ್ದ ಕೆಲಸದಾಳುಗಳನ್ನು ಸಂಕಪ್ಪ ಹೆಗ್ಡೆ ಮನೆಯೊಳಗಡೆ ಕರೆದು ಊಟ ಮಾಡುವಂತೆ ವ್ಯವಸ್ಥೆ ಮಾಡುತ್ತಾರೆ. ಮನೆಯೊಳಗೆ ಬರಲು ಅಂಜಿದವರಿಗೆ ಗದರಿಸಿ ಒಳಗೆ ಕರೆದು ಕುಳ್ಳಿರಿಸಿದರು. ಕೆಲಸದಾಳುಗಳಿಗೆ ಅನಾರೋಗ್ಯವಾದಾಗ ಅವರು ಕೇಳಿದಷ್ಟು ಹಣವನ್ನು ಕೊಡುತ್ತಾರೆ. ನಿಗದಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ಮಾಡಿದರೆ ಫ್ಯಾಕ್ಟರಿ, ಕಛೇರಿಗಳಲ್ಲಿ ಎರಡರಷ್ಟು ಸಂಬಳ ಕೊಡುವಂತೆ ತಾನೂ ಕೊಡುವುದಾಗಿ ಹೇಳುತ್ತಾರೆ. ಅವರಿದ್ದರೇ ತಾವು ಎಂದು ಭಾವಿಸಿಕೊಂಡ ಸಂಕಪ್ಪ ಹೆಗ್ಡೆ ತಾನು ಮಾಡಿದುದರಲ್ಲಿ ಏನೂ ತಪ್ಪಿಲ್ಲವೆಂದಂದುಕೊಳ್ಳುತ್ತಾರೆ. ಆದರೆ ಅಂಬಕ್ಕಗೆ ಅದು ಇಷ್ಟವಾಗುವುದಿಲ್ಲ. "ನೋಡು, ನಮಗೆ ಇನ್ನೊಂದು ಗುತ್ತಿನ ಅಥವಾ ಬೀಡಿನ ಮಾದರಿ ಬೇಡ. ನಮ್ಮ ಹಿರಿಯರು ಹೇಗೆ ಬದುಕಿ ಬಾಳಿದ್ದಾರೋ, ಆ ರೀತಿ ನಡೆದುಕೊಳ್ಳದಿದ್ದರೆ ನಮ್ಮ ದೈವ ದೇವರು, 'ಸಯಿತಿನಾಕುಳು'(ಸತ್ತುಹೋದ ಹಿರಿಯರು) ಮುನಿದಾರು! ನಿನ್ನ ಗಾಂಧಿ ಸಿದ್ಧಾಂತ ಏನಿದ್ದರೂ ನಿನಗೆ ಮತ್ತು ಈ ಮನೆಯ ಹೊರಗೇ ಇರಲಿ, ಒಳಗೆ ಬೇಡ" (ಉಲ್ಲಂಘನೆ, ಪುಟ ೨೪) ಎಂದು ಕಡ್ಡಿ ತುಂಡು ಮಾಡಿದಂತೆ ಹೇಳಿದರು.

ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟದ ಕರೆ ಅಂಬಕ್ಕಯ ಅಣ್ಣ, ಕಾಲೇಜು ವಿದ್ಯಾಭ್ಯಾಸ ಮಾಡುತ್ತಿದ್ದ ಸಂಕಪ್ಪನ ಮೇಲೆ ಪ್ರಭಾವ ಬೀರಿತು. ಅವರು ವಿದ್ಯಾಭ್ಯಾಸವನ್ನು ಅಲ್ಲಿಗೇ ಮೊಟಕುಗೊಳಿಸಿ ಮನೆ ಬಿಟ್ಟು ಹೋಗುತ್ತಾರೆ. ತಂದೆ ತಾಯಿ ಒಂದು ಕುಟುಂಬಕ್ಕೆ, ಗುತ್ತಿನ ಮನೆಗೆ ಸಲ್ಲಿಸುವ ಸೇವೆಗಿಂತ ದೇಶಕ್ಕಾಗಿ, ದೇಶದ ಕೋಟಿ ಜನರಿಗಾಗಿ ಮಾಡುವ ಸೇವೆ ಶ್ರೇಷ್ಠವಾದುದು ಎಂಬುದು ಸಂಕಪ್ಪನ ನಿಲುವಾಗಿತ್ತು.

ಅವರು ಗಾಂಧೀಜಿಯವರ ಚಳವಳಿಗಳ ನೀತಿಗಳಿಗೆ ಬದ್ಧರಾಗಿದ್ದರು. ಶೀನಪ್ಪ ಹೆಗ್ಡೆಗೆ ಮತ್ತು ಅಂಬಕ್ಕಗೆ ಇದು ದೊಡ್ಡ ಸವಾಲಾಗಿ ಪರಿಣಮಿಸುತ್ತದೆ. ಬ್ರಿಟಿಷರಿಂದ ತಾವು ಈಗಾಗಲೇ ಪಡೆದಿರುವ ಪಠೇಲಿಕೆಯ ಪಟ್ಟ ಮತ್ತು ನಾಡಕೋವಿ ತಮ್ಮ ಮನೆತನದ ಘನಸ್ಥಿಕೆ ಎಂದು ಭಾವಿಸಿಕೊಂಡಿದ್ದು, ಈಗ ಅವುಗಳನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದಾಗ ಸಂಕಪ್ಪನೂ ತುಂಬಾ ಆವೇಶದಿಂದ ಮಾತನಾಡುತ್ತಾನೆ. "ಸ್ವಾತಂತ್ರ್ಯ ಇಲ್ಲದ ಈ ದೇಶದಲ್ಲಿ, – ಬ್ರಿಟಿಷರು ನೀಡಿದ ಸನದಿಗೆ, ಕೋವಿಗೆ ಯಾವ ಗೌರವವೂ ಇಲ್ಲ ಮಾವ! ನಿಮಗೆ ಅದು ದೊಡ್ಡದಿರಬಹುದು, ಆದರೆ ನನಗಲ್ಲ! ನಿಮ್ಮ ನಂತರ, ಖಂಡಿತ, ನನಗೆ ಅದನ್ನು ಕೊಟ್ಟರೂ ಬೇಡ. ನಾನು ಖಂಡಿತ ಅದನ್ನು ಸರಕಾರಕ್ಕೆ ಹಿಂತಿರುಗಿಸುವವನೇ! " ಎಂದ. (ಉಲ್ಲಂಘನೆ, ಪುಟ ೨೭೨).

ತನ್ನದೇ ಗುತ್ತಿನಲ್ಲಿ ಹುಟ್ಟಿದ ಈ ಹುಡುಗ ತನ್ನ ಗುತ್ತಿನ ಮನೆಯನ್ನು ಹಿಡಿದು ಅಲ್ಲಾಡಿಸುತ್ತಿರುವಂತೆ 'ಗುತ್ತಿನಾರ್' ಶೀನಪ್ಪ ಹೆಗ್ಡೆಗೆ ಭಾಸವಾಯಿತು. ಗಾಂಧೀಜಿಯವರ ಬಗ್ಗೆ ಅತೀವ ಕೋಪ ಬಂದರೂ, ಅದರ ಜೊತೆಗೆ ಗೌರವದ ಭಾವವೂ ಮೂಡಿಬಂತು, ಕೋಚಣ್ಣ ರೈಗಳು ಸಂಕಪ್ಪ ಹೆಗ್ಡೆಯನ್ನು ಅರ್ಥಮಾಡಿಕೊಳ್ಳುತ್ತಾರೆ. "ಗೌತಮ ಬುದ್ಧ, ಕಾರ್ನಾಡ್ ಸದಾಶಿವರಾಯರು, ಕಿಲ್ಲೆಯವರಂತಹ ಅಸಾಮಾನ್ಯವಾದ ಸಾಧಕರೇ ಗಾಂಧಿ ಪ್ರಭಾವಕ್ಕೆ ಒಳಗಾಗಿರುವಾಗ ನಮ್ಮ ಸಂಕಪ್ಪನದು ಏನು ಮಹಾ?" ಎನ್ನುತ್ತಾರೆ. ಮುಂದೆ ಮನೆಯವರ ಒತ್ತಾಯಕ್ಕೆ ಮಣಿದು ಊರಿಗೆ ಬರುವಾಗ ಸಂಕಪ್ಪ ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಬದಲಾಗಿ ಬರುತ್ತಾನೆ. ಖಾದಿ ಜುಬ್ಬಾ, ಖಾದಿ ಪಂಚೆ, ಹೆಗಲಿಗೊಂದು ಖಾದಿ ಶಾಲು, ಬಗಲಲ್ಲಿ ಒಂದು ಖಾದಿ ಚೀಲ ಹಿಡಿದ ಸಂಕಪ್ಪಣ್ಣ ಮನೆಯ ಚಾವಡಿಯಲ್ಲಿ ಗಾಂಧೀಜಿಯವರ ದೊಡ್ಡ ಭಾವಚಿತ್ರವನ್ನು ತೂಗು ಹಾಕುತ್ತಾರೆ. ಕೂಲಿಯಾಳುಗಳ ಜೊತೆಗೆ ಬಹಳ ಸಲುಗೆ ಮಾತ್ರವಲ್ಲ ಅವರ ಮನೆ ಬಾಗಿಲಿಗೆ ಹೋಗಿ ಕಷ್ಟ ಸುಖಗಳನ್ನು ವಿಚಾರಿಸಿಕೊಳ್ಳಲಾರಂಭಿಸುತ್ತಾರೆ.

ಸಂಕಪ್ಪ ಹೆಗ್ಡೆಯ ಕಾನೂನುಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಹೋದವು. ಮಾವ ಶೀನಪ್ಪ ಹೆಗ್ಡೆ ನಿಧನಾನಂತರ ಗುತ್ತಿನ ಗುರಿಕಾರ ಆಗಲು

ಅಧಿಕೃತವಾಗಿ ನಡೆಯಬೇಕಾಗಿದ್ದ 'ಗಡಿಹಿಡಿಯುವ' ಸಂಪ್ರದಾಯವನ್ನು ಸಂಕಪ್ಪ ತಿರಸ್ಕರಿಸುತ್ತಾರೆ. ಹೊಸ ಹೊಸ ಸುಧಾರಣೆಗಳನ್ನು ಗುತ್ತಿನ ಮನೆಯಲ್ಲಿ ತಂದಾಗ ಅಂಬಕ್ಕೆ ಅಸಹಾಯಕತೆಯಿಂದ ಕೈ ಕೈ ಹಿಸುಕಿಕೊಂಡರು. ಬಂಟ ಜನಾಂಗದಲ್ಲಿ ದೊಡ್ಡ ದೊಡ್ಡ ಹುಂಜಗಳನ್ನು ಸಾಕಿ, ಕೋಳಿ ಅಂಕಕ್ಕೆ ಹೋಗುವುದು ಗುತ್ತಿನ ಮನೆಗೆ ಭೂಷಣವೆಂದಿದ್ದರೂ ಸಂಕಪ್ಪಣ್ಣ ಅದಕ್ಕೆ ಕಡಿವಾಣವನ್ನು ಹಾಕುತ್ತಾರೆ. ಇವೆಲ್ಲದರಿಂದ ಬೇಸರಗೊಂಡ ಅಂಬಕ್ಕೆ ಇದೇ ರೀತಿ ಮುಂದುವರಿದರೆ ತಾನು ಮನೆ ಬಿಟ್ಟು ಹೋಗುವುದಾಗಿ ಬೆದರಿಕೆ ಹಾಕುತ್ತಾರೆ. ಕೊನೆಗೆ ಇಬ್ಬರೂ ಒಂದು ಒಪ್ಪಂದ ಮಾಡಿಕೊಂಡು ಇಬ್ಬರ ಆಶಯಗಳೂ ನೆರವೇರುವ ರೀತಿಯಲ್ಲಿ ನಡೆದುಕೊಳ್ಳುತ್ತಾರೆ.

ಗಾಂಧೀಜಿಯವರ ಸಹಕಾರ ಪದ್ಧತಿಯನ್ನು ಸಂಕಪ್ಪ ಹೆಗ್ಡೆ ಗುತ್ತಿನ ಮನೆಯಲ್ಲಿ ಅಳವಡಿಸಲು ಯೋಚಿಸುತ್ತಾರೆ. ನಮ್ಮ ಮೂಲದಾಳುಗಳು, ಗೇಣಿದಾರರು ಕೃಷಿಯಲ್ಲಿ ತಮಗೆ ಸಹಕರಿಸುವಂತೆ ತಾವೂ ಅವರ ಕೃಷಿಯಲ್ಲಿ ನೆರವಾಗಬೇಕೆಂದು ಸೂಚಿಸುತ್ತಾರೆ. ಅಂಬಕ್ಕೆ "ಬಾಕಿಮಾರು ಗದ್ದೆಯಲ್ಲಿ ತೋಟ ಮಾಡಿದರೂ ಆಗಬಹುದು ಆದರೆ ಇದು ಸಲ್ಲ" ಎಂದು ವಿರೋಧಿಸುತ್ತಾರೆ. "ನಿನ್ನ ಗಾಂಧಿ ಸಿದ್ಧಾಂತಗಳನ್ನೆಲ್ಲಾ ನನ್ನ ಪಾಲಿನ ಭೂಮಿಯಲ್ಲಿ ಪ್ರಯೋಗಿಸುವುದು ಬೇಡ- ನಿನ್ನ ಹೆಂಡತಿಯ ಪಾಲಿಗೆ ಬಂದ ಭೂಮಿ ಇದೆಯಲ್ಲಾ, ಅಲ್ಲಿಗೆ ಹೋಗಿ ಅದನ್ನೆಲ್ಲಾ ಪ್ರಯೋಗಿಸಿ ನೋಡು" (ಉಲ್ಲಂಘನೆ, ಪುಟ ೩೭) ಎಂದು ತಾಕೀತು ಮಾಡುತ್ತಾರೆ.

ಸಮಾಜದಲ್ಲಿ ಅಸ್ಪೃಶ್ಯತೆ ಎನ್ನುವುದು ದೊಡ್ಡ ಶಾಪ ಎಂಬ ಭಾವನೆ ಬಾಲ್ಯದಿಂದಲೇ ಸಂಕಪ್ಪನಲ್ಲಿ ಮೂಡಿತ್ತು. ಗೇಣಿದಾರ ಬಾಬು ಪೂಜಾರಿಯ ಜೊತೆಗೆ ತುಂಬಾ ಖುಷಿಯಿಂದಲೇ ಶಾಲೆಗೆ ಹೋಗುತ್ತಾನೆ. ಅವನ ಮನೆಗೂ ಹೋಗಿ ಆ ಮನೆಯವರು ಕೊಟ್ಟ ಸೀಯಾಳ ಮತ್ತು ಬಾಳೆಹಣ್ಣನ್ನು ಸ್ವೀಕರಿಸುತ್ತಾನೆ. ನೂರು ವರ್ಷಗಳಿಂದ ತನ್ನ ಗುತ್ತಿನ ಒಕ್ಕಲಾಗಿದ್ದರೂ ಒಂದು ಒಳ್ಳೆಯ ಮನೆಯನ್ನು ಕರಿಯ ಪೂಜಾರಿಗೆ ಕಟ್ಟಲಾಗಿಲ್ಲವಲ್ಲಾ ಎಂದು ದುಃಖಿಸುತ್ತಾನೆ. ಬಾಬು ಪೂಜಾರಿ ತನ್ನ ಹಾಗೆ ಕಾಲೇಜು ಶಿಕ್ಷಣ ಪಡೆಯಬೇಕೆಂಬ ಆಸೆ ಸಂಕಪ್ಪನಿಗೆ. ಆದರೆ ಶಾಂತಕ್ಕಗೆ ಅದನ್ನು ಸಹಿಸಲಾಗಲಿಲ್ಲ. ಆತನನ್ನು ಸಂಕಪ್ಪನಿಂದ ದೂರಮಾಡುವ ಉದ್ದೇಶದಿಂದ ಮುಂಬಯಿಗೆ ಕಳುಹಿಸುತ್ತಾರೆ. ಅದನ್ನು ಸಂತೋಷವಾಗಿಯೇ ಒಪ್ಪಿಕೊಂಡ ಬಾಬು

ಪೂಜಾರಿ ಮುಂಬಯಿಗೆ ಹೋಗಿ ಬಂದ ಬಳಿಕ 'ಕಾಮ್ರೆಡ್ ಬಾಬು'ವಾಗಿ ಪರಿವರ್ತಿತನಾಗುತ್ತಾನೆ. ಕರ್ನಾಟಕ ಸರಕಾರ ಭೂಮಸೂದೆಯನ್ನು ಜ್ಯಾರಿಗೊಳಿಸಿದಾಗ ಆತ ಎಲ್ಲಾ ಗೇಣಿದಾರರ ಮನೆಗಳಿಗೂ ಓಡಾಡಿ ಅವರನ್ನು ಜಮೀನ್ದಾರರ ವಿರುದ್ಧ ಹುರಿದುಂಬಿಸುತ್ತಾನೆ. ಅಂಬಕ್ಕೆಗೆ ಆತನನ್ನು ಮುಗಿಸಿಬಿಡಬೇಕೆನಿಸುವಷ್ಟು ಸಿಟ್ಟು ಬರುತ್ತದೆ. ಸಂಕಪ್ಪ ಹೆಗ್ಡೆಗೆ ಇದು ತಪ್ಪು ಅನಿಸಲಿಲ್ಲ. ನಾವು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಂತೆ, ಅವರು ತಮ್ಮ ಹಕ್ಕಿಗಾಗಿ ಹೋರಾಡುವುದು ತಪ್ಪಲ್ಲ ಎಂದು ಸುಮ್ಮನಿದ್ದರು. ಇದರಿಂದ ನೊಂದ ಅಂಬಕ್ಕೆ, ಹೆಗ್ಡೆಯವರನ್ನು ಆಗಾಗ ಚುಚ್ಚುತ್ತಿದ್ದರು. ಆದರೆ ತನ್ನದು ತಪ್ಪು ಯೋಚನೆಯೆಂದು ಕೊನೆಗೆ ಅಂಬಕ್ಕೆ ಪಶ್ಚಾತ್ತಾಪ ಪಡುತ್ತಾರೆ.

ಅಂಬಕ್ಕೆಯದು ಒಂದು ರೀತಿಯ ದ್ವಂದ್ವವಾದ ಚಿಂತನೆ. ಒಂದು ಕಡೆಯಲ್ಲಿ ಗುತ್ತಿನ ಸಂಪ್ರದಾಯ, ಒಡೆತನಗಳ ವಿನಾಶದ ಕುರಿತು ಚಿಂತಿಸಿದರೆ ಇನ್ನೊಂದು ಕಡೆಯಲ್ಲಿ ಸಂಕಪ್ಪಣ್ಣನ ವಿಚಾರಗಳನ್ನು ಶ್ಲಾಘಿಸುತ್ತಾರೆ. ಸಂಕಪ್ಪ ಹೆಗ್ಡೆಗೆ ಗಾಂಧೀಜಿಯವರ ತತ್ವಗಳನ್ನು ಅಳವಡಿಸಿಕೊಳ್ಳಲು ಅವರ ತಂದೆ ಕೋಚಣ್ಣ ರೈಗಳು ಸದಾ ಬೆಂಬಲ ನೀಡುತ್ತಿದ್ದರು. ಪ್ರತಿಯೊಂದು ಹಂತದಲ್ಲೂ ಮಗನ ಭಾವನೆಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ಗುತ್ತಿನ ಯಜಮಾನಿಯೂ ಆ ವಿಚಾರವನ್ನು ಸ್ವೀಕರಿಸುವಂತೆ ಮಾಡುತ್ತಿದ್ದರು. ಗಾಂಧೀಜಿಯವರ ಸಿದ್ಧಾಂತಗಳನ್ನು ನಾವು ಅಳವಡಿಸುತ್ತಾ ಹೋದರೆ ಇಡಿ ದೇಶದ ಜನರು ಉತ್ತಮ ಬದುಕನ್ನು ಅನುಭವಿಸಬಹುದು ಎಂಬುದು ಇಲ್ಲಿ ವ್ಯಕ್ತವಾಗುತ್ತದೆ. ಆದರೆ ಪರಂಪರಾಗತವಾಗಿ ಬೆಳೆದು ಬಂದ ರೀತಿ–ನೀತಿಗಳನ್ನು ಅಷ್ಟು ಸುಲಭವಾಗಿ ಬಿಟ್ಟುಬಿಟ್ಟು ಹೊಸತನಕ್ಕೆ ಒಗ್ಗಿಕೊಳ್ಳುವುದು ಬಹು ಕಷ್ಟವೂ ಹೌದು. ಆದರೆ ಅನಿವಾರ್ಯವಾಗಿ ಕೊನೆಗೆ ಒಪ್ಪಿಕೊಳ್ಳಲೇಬೇಕಾಗುತ್ತದೆ.

ಸಂಕಪ್ಪ ಹೆಗ್ಡೆ ಧನಿ–ಒಕ್ಕಲು ಎಂಬ ಪ್ರಕ್ರಿಯೆಯೇ ಇರಕೂಡದು ಎಂದು ಚಿಂತಿಸಿದರೆ, ಅಂಬಕ್ಕೆ ಆ ಸಂಬಂಧ ಇಷ್ಟು ಬೇಗ ಕಡಿದು ಹೋಯಿತಲ್ಲಾ ಎಂದು ಚಿಂತಿಸುತ್ತಾರೆ. ತಮ್ಮ ಜಮೀನಿನ ನೆಲೆ, ಬೆಲೆಯನ್ನು ಅರಿತುಕೊಳ್ಳದೆ ಹಂಚಿದ ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸುತ್ತಾರೆ. ಕಾಂಗ್ರೆಸ್ ಮುಖಂಡರಿಬ್ಬರು ಸಂಕಪ್ಪ ಹೆಗ್ಡೆಯನ್ನು ಭೂ ನ್ಯಾಯ ಮಂಡಳಿಯ ಸದಸ್ಯನಾಗಲು ಒಪ್ಪಿಸಬೇಕೆಂದು

ಕೇಳಿಕೊಳ್ಳಲು ಬಂದಾಗ ತೀವ್ರವಾಗಿ ಸಿಟ್ಟುಗೊಂಡ ಅಂಬಕ್ಕೆ ಸಂಕಪ್ಪನಿಂದ ನಮ್ಮ ಗುತ್ತಿನ ಮನೆಗೆ ಅನ್ಯಾಯವಾಗಬಹುದೇ ವಿನಃ ಒಳಿತಾಗಲಿಕ್ಕಿಲ್ಲ ಎಂದು ತಿರಸ್ಕರಿಸಿಬಿಡುತ್ತಾರೆ. ಸಂಕಪ್ಪ ಹೆಗ್ಡೆಗೆ ದಾಖಲೆಗಳ ಕೊರತೆಯಿಂದ ಗೇಣಿದಾರರಿಗೆ ನ್ಯಾಯ ಒದಗಿಸುವುದು ಕಷ್ಟ ಮತ್ತು ಬಂಧುಗಳಿಂದಲೂ ಅಸಹನೆಯ ಮಾತುಗಳು ಬರಬಹುದೆಂಬ ಪರಿಜ್ಞಾನವಿತ್ತು. ಹಾಗಾಗಿ ಆ ಹುದ್ದೆಯಿಂದ ದೂರವೇ ಸರಿಯುವ ಯೋಚನೆಯನ್ನು ಅವರು ಮಾಡುತ್ತಾರೆ.

ಸಂಕಪ್ಪ ಹೆಗ್ಡೆಯ ಗಾಂಧಿ ತತ್ವಗಳ ಕುರಿತಾಗಿ ಅಳಿಯ ಸುಂದರನಿಗೂ ಅಸಮಾಧಾನವಿತ್ತು. ಆತ ಮಾವನಿಂದ ಗಾಂಧೀಜಿಯವರ ವಿಚಾರವಾಗಿ ಕೇಳುತ್ತಾ ಕೇಳುತ್ತಾ "ಮಾವನ ಆದರ್ಶ ತೀರಾ ಅತಿಯಾಯಿತು. ಗಾಂಧಿವಾದ ಈ ಕಾಲಕ್ಕೆ ಪ್ರಾಕ್ಟಿಕಲ್ ಅಲ್ಲ. ಆ ಬ್ರಿಟಿಷರು ಯಾಕೆ ಈ ಗಾಂಧಿಯಿಂದ ಸೋಲು ಒಪ್ಪಿಕೊಂಡರೋ!". (ಉಲ್ಲಂಘನೆ, ಪುಟ ೩೪೭) ಎಂದು ಯೋಚಿಸುತ್ತಾ ತನಗೂ ಇದಕ್ಕೂ ಏನೂ ಸಂಬಂಧವಿಲ್ಲವೆಂಬಂತೆ ಇದ್ದುಬಿಡುತ್ತಾನೆ. ಸಂಕಪ್ಪನ ನಂತರದ ತಲೆಮಾರಿನಲ್ಲಿ ಗಾಂಧೀಜಿಯವರ ಆದರ್ಶಗಳಿಗೆ ಯಾವ ಮೌಲ್ಯ ಉಳಿಯಿತು ಎಂಬುದಕ್ಕೆ ಸುಂದರನ ವ್ಯಕ್ತಿತ್ವವೇ ಸಾಕ್ಷಿ. ಹಾಗೆಯೇ ಅವರು ಬೆಳೆಸಿದ ಕಾಂಗ್ರೆಸ್ ಪಕ್ಷವು ಕೂಡಾ ಹಿಂದಿನ ಆದರ್ಶಗಳನ್ನು ಕಳೆದುಕೊಳ್ಳುತ್ತದೆ.

ಗಾಂಧೀಜಿಯವರ ಬಗ್ಗೆ ಸಂಕಪ್ಪ ಹೆಗ್ಡೆಗೆ ಎಷ್ಟೊಂದು ಅಭಿಮಾನವೆಂದರೆ ಗಾಂಧೀಜಿಯವರು ಗುಂಡಿನ ದಾಳಿಗೆ ಸಿಕ್ಕು ಸತ್ತಾಗ ತಾವು ಬಿಕ್ಕಿಬಿಕ್ಕಿ ಅತ್ತರು. ತನ್ನ ತಂದೆ ತಾಯಿ ತೀರಿಕೊಂಡಾಗಲೂ ಅಷ್ಟೊಂದು ದುಃಖವಾಗಿರಲಿಲ್ಲ ಅವರಿಗೆ. ಸೂತಕ ಆಚರಿಸುವಂತೆ ತಣ್ಣೀರ ಸ್ನಾನ ಮಾಡುತ್ತಾರೆ. 'ಗಾಂಧಿ ಪ್ರತಿಷ್ಠಾನ'ವನ್ನು ಸ್ಥಾಪಿಸಿ ಗಾಂಧೀಜಿಯವರ ಧ್ಯೇಯೋದ್ದೇಶಗಳನ್ನು ಪ್ರಸ್ತುತ ಪಡಿಸುವ ಯೋಜನೆಯನ್ನು ಕೈಗೊಳ್ಳುತ್ತಾರೆ. ಗಾಂಧೀಜಿಯವರು ಅಧಿಕಾರಕ್ಕಾಗಿ ಆಸೆ ಪಡಲಿಲ್ಲ. ಸಂಕಪ್ಪ ಹೆಗ್ಡೆಯವರದೂ ಅದೇ ಧೋರಣೆ. ತನ್ನಂತಹವರು ಪ್ರತಿ ಗ್ರಾಮದಲ್ಲೂ ಒಂದಿಬ್ಬರು ಇರಬಹುದು ಎನ್ನುವ ಮೂಲಕ ಗಾಂಧೀಜಿಯವರ ಪ್ರಭಾವ ಇನ್ನೂ ಈ ದೇಶದಲ್ಲಿ ಇದೆ ಎಂಬ ಭಾವನೆ ಅವರದು. ಸ್ವಾತಂತ್ರ್ಯ ಹೋರಾಟಗಾರ, ಗಾಂಧಿವಾದಿಯಾದ ಸಂಕಪ್ಪ ಹೆಗ್ಡೆ ಗಾಂಧೀಜಿಯವರು ಸತ್ತ ದಿನವೇ ಸಾಯುತ್ತಾರೆ. ಪತ್ರಿಕೆಯಲ್ಲಿ ಈ

ಸುದ್ದಿಯು ಸಣ್ಣದಾಗಿ ಪ್ರಕಟವಾಯಿತು. ಉತ್ತಮ ವ್ಯಕ್ತಿತ್ವದ ವ್ಯಕ್ತಿಗೆ ಕಡಿಮೆ ಗೌರವ ಸಲ್ಲುತ್ತದೆ ಎಂಬುದನ್ನು ಕಾದಂಬರಿಕಾರರು ಸಂಕಪ್ಪ ಹೆಗ್ಡೆಯವರ ಚಿತ್ರಣದೊಂದಿಗೆ ನೀಡುತ್ತಾರೆ. ಗಾಂಧೀಜಿಯವರ ತತ್ವಗಳಿಗೆ ಬೆಲೆಕೊಡದ ಮನುಷ್ಯರು ಅವರ ಅನುಯಾಯಿಗಳಿಗೆ ಎಷ್ಟೊಂದು ಬೆಲೆ ಕೊಟ್ಟಾರೆಂಬ ವಿಚಾರವು ಇಲ್ಲಿ ಮನದಟ್ಟಾಗುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಗಾಂಧೀಜಿಯವರ ಆದರ್ಶಗಳಿಂದ ಸಂಕಪ್ಪ ಹೆಗ್ಡೆಯ ಮೂಲಕ ಸಾಂತೇರುಗುತ್ತು ಪರಿಸರದಲ್ಲಿ ಬದಲಾವಣೆಯಾಯಿತು. ವಿದ್ಯಾಭ್ಯಾಸದ ಕೊರತೆಯಿಂದಾಗಿ ಅಂಬಕ್ಕೆಗೆ ಗಾಂಧಿ ತತ್ವಗಳನ್ನು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಸಂಕಪ್ಪ ಹೆಗ್ಡೆಯನ್ನು ಗುತ್ತಿನ ಮನೆಯಲ್ಲಿ ಉಳಿಸಿಕೊಳ್ಳಬೇಕೆಂಬ ಕಾರಣಕ್ಕಾಗಿ ಮಾತ್ರ ಅವರು ಸಂದರ್ಭಗಳ ಜೊತೆಗೆ ಹೊಂದಿಕೊಂಡು ಹೋಗುತ್ತಿದ್ದರು.

೫.೨ ಭೂಸುಧಾರಣಾ ಕಾನೂನು ಮತ್ತು ಸಾಮಾಜಿಕ ಸ್ಥಿತ್ಯಂತರ:

ಕರ್ನಾಟಕದಲ್ಲಿ ೧೯೭೪ರಲ್ಲಿ ಭೂಮಸೂದೆ ಕಾಯಿದೆಯು 'ಉಳುವವನೇ ಹೊಲದೊಡೆಯ' ಎಂಬ ಕಾನೂನಿನೊಂದಿಗೆ ಜ್ಯಾರಿಗೊಂಡಾಗ ಬಂಟರ ಪಾಲಿಗೆ ಅದು ಕರಾಳವಾಯಿತು. ಊರೆಲ್ಲಾ ಗೇಣಿದಾರ-ಒಕ್ಕಲಿನವರನ್ನು ಇಟ್ಟುಕೊಂಡು ಬಹಳ ಪ್ರತಿಷ್ಠೆಯಿಂದ ಮೆರೆಯುತ್ತಿದ್ದ ಅವರ ಬದುಕಿನ ಮೇಲೆ ಬಿರುಗಾಳಿ ಬೀಸಿದಂತೆ ಈ ಕಾಯಿದೆಯು ಘೋರವಾದ ಪ್ರಭಾವವನ್ನು ಬೀರಿತು. ಕರಾವಳಿಯ ಪರಂಪರಾಗತ ಜಮೀನ್ದಾರಿ ಬಂಟ ಕುಳಗಳ ಗುತ್ತಿನ, ಭೂ ಅಧಿಕಾರದ ಬೇರು ಇದರಿಂದ ಅಲುಗಾಡಿತು. ಮೊಗಸಾಲೆಯವರು 'ಉಲ್ಲಂಘನೆ' ಕಾದಂಬರಿಯಲ್ಲಿ ಗೇಣಿದಾರರು, ಮೂಲದಾಳುಗಳು ಕಾಯಿದೆಯ ಪ್ರಕಾರ ಭೂಮಿಯ ಹಕ್ಕನ್ನು ಪಡೆದಾಗ ಸಾಂತೇರುಗುತ್ತಿನಲ್ಲಿ ಸಾಮಾಜಿಕ, ಆರ್ಥಿಕ, ಆಡಳಿತಾತ್ಮಕ ಅಸ್ಥಿರತೆಯು ಹೇಗೆ ಎದುರಾಗುತ್ತದೆ ಮತ್ತು ಭೂಮಿಯನ್ನು ಪಡೆದವರ ಬದುಕು ಕೂಡಾ ಹಲವಾರು ರೀತಿಯ ತಾಕಲಾಟಗಳಿಗೆ ಒಳಗಾಗುವ ಚಿತ್ರಣವನ್ನು ನೀಡುತ್ತಾರೆ. ಇಡೀ ಒಂಬತ್ತು ಕೆರೆಯ ಪರಿಸರದಲ್ಲಿ ಎಂದೂ ಕಾಣದ ಬದಲಾವಣೆ ಕಂಡು ಬರುತ್ತದೆ.

ಸರಕಾರವು ಕಾನೂನನ್ನು ಜ್ಯಾರಿಗೊಳಿಸಿದ ತಕ್ಷಣ ಎರಡು ತಲೆಮಾರಿನಿಂದ ಗುತ್ತಿನ ಒಕ್ಕಲಾಗಿರುವ ಪಾಡಿಮನೆ ಬಾಬು ಪೂಜಾರಿ ಎಚ್ಚೆತ್ತುಕೊಳ್ಳುತ್ತಾನೆ. ಇನ್ನು ಮುಂದೆ ತನಗೂ ಗುತ್ತಿನ ಮನೆಗೂ ಯಾವ ಸಂಬಂಧವೂ ಇಲ್ಲವೆನ್ನುತ್ತಾ ಮೂಲದಾಳುಗಳನ್ನೂ ಎಚ್ಚೆತ್ತುಕೊಳ್ಳುವಂತೆ ಪ್ರೇರೇಪಿಸುತ್ತಾನೆ. ಮೂಲದಾಳು ಮಂಗ್ರುವಿನಲ್ಲಿ ಆತ ಹೇಳುತ್ತಾನೆ "ಭೂಮಸೂದೆ ಅಂದರೆ ಉಳುವವನೇ ಹೊಲದೊಡೆಯ ಎಂಬ ಕಾನೂನನ್ನು ಸರಕಾರ ಜ್ಯಾರಿಗೊಳಿಸಿದ್ದು ಗೊತ್ತಿಲ್ವೇನೋ ನಿನಗೆ? ಕಳೆದ ವರುಷವೇ ನಾವು ಗುತ್ತಿನ ಗೇಣಿ-ಒಕ್ಕಲುತನದ ಸಂಬಂಧ ಕಳಕೊಂಡಿದ್ದೇವೆ. ಆದರೂ - ದಾಕ್ಷಿಣ್ಯಕ್ಕೆ ಒಂದು ವರುಷ ಬಿಟ್ಟಿ ಚಾಕರಿ ಮಾಡಿದ್ದು ಹೌದು. ಈ ವರುಷವೂ ಮಾಡಲು ಹೋದರೆ ಅದು ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡ ಹಾಗೆ! ಅದೂ ಅಲ್ಲದೆ- ಎಷ್ಟು ವರುಷಗಳಿಂದ ನಾವು ಅವರನ್ನು ದೇವರ ಹಾಗೆ ತಲೆಯಲ್ಲಿ ಹೊತ್ತು ಬದುಕಿದ್ದೇವೆ! ಈಗ ಸರಕಾರ ನಮ್ಮನ್ನೆಲ್ಲಾ ಬಿಡುಗಡೆಗೊಳಿಸಿದೆ. ಇನ್ನೂ ಈ ಗುಲಾಮಗಿರಿ ಮಾಡುವುದೆಂದರೆ ಏನರ್ಥ?" (ಉಲ್ಲಂಘನೆ, ಪುಟ ೭). ಮುಂದೆ ಯಾವ ಕಾರಣಕ್ಕೂ ಬಾಬು ಪೂಜಾರಿ ಗುತ್ತಿನ ಅಂಗಳಕ್ಕೆ ಹೋಗಲಿಲ್ಲ. ಆದರೆ ಮೂಲದಾಳುಗಳು ಇದನ್ನು ಅಷ್ಟೊಂದು ಸುಲಭದಲ್ಲಿ ಸ್ವೀಕರಿಸುವುದಿಲ್ಲ. ಮಂಗ್ರು, ತೌಡ ಮತ್ತು ಇನ್ನೂ ಕೆಲವು ಮೂಲದಾಳುಗಳು "ಗುತ್ತಿನವರು ನಮಗೇನು ಕಡಿಮೆ ಮಾಡಿದ್ದಾರೆ? ಈ ಸರಕಾರದ ಕಾನೂನು ಕಟ್ಟಿಕೊಂಡು ನಮಗೇನಾಗಬೇಕು?" (ಉಲ್ಲಂಘನೆ, ಪುಟ ೯) ಎಂದು ಮನದೊಳಗೇ ಅಂದುಕೊಳ್ಳುತ್ತಾರೆ. ಮುಂದೆಯೂ ಅವರು ಗುತ್ತಿನ ಋಣ ತಮಗಿದೆ ಎನ್ನುವ ರೀತಿಯಲ್ಲಿ ಗುತ್ತಿಗೆ ಸಹಕರಿಸುತ್ತಾರೆ.

ಸರಕಾದ ಕಾನೂನಿನ ಬಗ್ಗೆ ಗುತ್ತಿನ ಯಜಮಾನ ಮತ್ತು ಯಜಮಾನಿಯಲ್ಲಿ ಅಭಿಪ್ರಾಯ ಭೇದ ಉಂಟಾಗುತ್ತದೆ. ಗುತ್ತಿನ ಒಕ್ಕಲುಗಳು ತಾವು ಉತ್ತು ಬಿತ್ತುತ್ತಿದ್ದ ಜಮೀನಿನ ಹಕ್ಕು ಪತ್ರ ನೀಡಬೇಕೆಂದು ಸರಕಾರಕ್ಕೆ ಅರ್ಜಿ ಸಲ್ಲಿಸಲು ಹೊರಟಾಗ ಅಂಬಕ್ಕೆ "ಅದು ಸಾಧ್ಯವಿಲ್ಲ! ನೀವು ಭೂಮಿಯ ಮೌಲ್ಯ ನೀಡಿ ಸ್ವತಂತ್ರರಾಗಿ ಇಲ್ಲವೇ ಅರ್ಧಾಂಶದಷ್ಟು ಭೂಮಿಯನ್ನು ಗುತ್ತಿನ ಮನೆಗೆ ಬಿಟ್ಟುಕೊಡಿ" ಎಂದು ಆಗ್ರಹಿಸುತ್ತಾರೆ. ಈ ಸಂದರ್ಭದಲ್ಲಿ ಸಂಕಪ್ಪ ಹೆಗ್ಡೆ ಇದನ್ನು

ವಿರೋಧಿಸುತ್ತಾರೆ. ಗೇಣಿದಾರರ ಪರವಾಗಿಯೇ ಮಾತನಾಡುತ್ತಾರೆ. ಮಾತ್ರವಲ್ಲ ಅವರಿಗೆ ನಾನಾ ರೀತಿಯಲ್ಲಿ ಸಹಕರಿಸುತ್ತಾರೆ.

ಸಾಂತೇರುಗುತ್ತಿನಲ್ಲಿ ಕಾರ್ಮಿಕರ ಅಭಾವವು ಗುತ್ತನ್ನು ನಿರ್ಬಲವನ್ನಾಗಿ ಮಾಡುತ್ತದೆ. ಮೂಲದಾಳುಗಳಲ್ಲಿ ಕೆಲವರು ಮಾತ್ರ ಮತ್ತೆ ಕೆಲಸಕ್ಕೆ ಬರುತ್ತಾರೆ. ಇನ್ನು ಮುಂದೆ ಸಂಬಳ ಕೊಡುವುದಾಗಿ ಹೇಳಿದರೂ ಪ್ರಯೋಜನವಾಗಲಿಲ್ಲ. ಮುಂದೆ ಗೇಣಿದಾರರನ್ನು ಸಂಕಪ್ಪ ಹೆಗ್ಡೆ ಮೃದು ಮಾತುಗಳಿಂದ ಒಲಿಸಿಕೊಂಡು ಸುಗ್ಗಿ ಸಾಗುವಳಿಯನ್ನು ಸಕಾಲದಲ್ಲಿ ಮುಗಿಸಿದರು. ಗದ್ದೆ ಉಳುಮೆಗೆ ಇನ್ನು ಮುಂದೆ 'ಟಿಲ್ಲರ್'ನ್ನು ಬಳಸುವ ಯೋಚನೆ ಮಾಡುತ್ತಾರೆ. ಆದರೆ 'ಟಿಲ್ಲರ್'ನ್ನು ಖರೀದಿಸಿದರೂ ಅದನ್ನು ಬಳಸುವುದಕ್ಕೆ ಜನರ ಕೊರತೆಯಾಗಿ, ಮುಂದಿನ ಹೆಜ್ಜೆಯಾಗಿ ಗದ್ದೆಯ ಕೆಲಸಕ್ಕೆ ವಿದಾಯ ಹೇಳಿ ಅಡಿಕೆ ಗಿಡವನ್ನು ಹಾಕುವುದೊಂದೇ ಈ ಸಮಸ್ಯೆಗೆ ಪರಿಹಾರವೆಂದು ಚಿಂತಿಸುತ್ತಾರೆ. ಅದರಂತೆ 'ಬಾಕಿಮಾರು ಗದ್ದೆ' ಹೋಗಿ 'ಬಾಕಿಮಾರು ತೋಟ'ವಾಗುತ್ತದೆ! ಬದಲಾದ ಪರಿಸ್ಥಿತಿಯನ್ನು ಸಮರ್ಥಿಸುವಂತೆ ಈ ಬಗೆಯ ಪರಿವರ್ತನೆ ನಡೆಯುತ್ತಿರುತ್ತದೆ.

ಭೂಮಿಯನ್ನು ಕಳೆದುಕೊಂಡ ಬಳಿಕ ಸಾಂತೇರುಗುತ್ತಿನಲ್ಲಿ ಎಂದೂ ಕಾಣದ ಆರ್ಥಿಕ ಬಿಕ್ಕಟ್ಟು ಕಾಣಿಸಿಕೊಳ್ಳುತ್ತದೆ. ಅಂಬಕ್ಕೆ ತಮ್ಮ ಭೂಮಿಯಲ್ಲಿದ್ದ ಮರಗಳನ್ನು ತಮ್ಮ ಮಕ್ಕಳಂತೆ ಪ್ರೀತಿಸುತ್ತಿದ್ದರು. ಒಮ್ಮೆ ಅವುಗಳನ್ನು ಕೃಷ್ಣ ಶೆಟ್ಟಿ ಕೇಳಿದಾಗ ಆತನಿಗೆ ಚೆನ್ನಾಗಿ ಬೈದು ಕಳುಹಿಸಿದ್ದರು. ಆದರೆ ಮುಂದೆ ಪುನಃ ಕೃಷ್ಣ ಶೆಟ್ಟಿ ಮರದ ವಿಚಾರವಾಗಿ ಮಾತನಾಡಿದಾಗ "ಸರಿ, ಏನು ಬೇಕಾದರೂ ಮಾಡು. ಒಂದಿಷ್ಟು ದುಡ್ಡು ಬರುವುದಾದರೆ ಬರಲಿ ಈ ಗುತ್ತಿನ ಮನೆಗೆ. ಗುತ್ತಿನ ಮನೆಗೆ ಈಗ ಬೇರೆ ಯಾವ ಉತ್ಪತ್ತಿ ಇದೆ, ಹೇಳು? ಹಿಂದೆ ಸಾವಿರ ಮುಡಿ ಗೇಣಿ ಬರುತ್ತಿತ್ತು ಎಂಬ ಘನಸ್ಥಿಕೆ ಇತ್ತು ಗುತ್ತಿನ ಮನೆಗೆ. ಈಗ ಅದೆಲ್ಲಾ ಬರೇ ನೆನಪಿನಲ್ಲಿ ಮಾತ್ರ." (ಉಲ್ಲಂಘನೆ, ಪುಟ ೪೦೭) ಎನ್ನುತ್ತಾರೆ. ತಮ್ಮ ಗದ್ದೆಗಳೆಲ್ಲಾ ಹೋಗಿ ತೋಟ ಮಾಡಲು, ನೀರು ಹಾಯಿಸುವ ಹೊಸ ವ್ಯವಸ್ಥೆಯನ್ನು ಮಾಡಲು ಗುತ್ತಿನ ಮನೆಯವರು ಸಹಕಾರಿ ಸಂಘಗಳು, ರಾಷ್ಟ್ರೀಕೃತ ಬ್ಯಾಂಕುಗಳ ಮೊರೆ

ಹೋಗಬೇಕಾಗುತ್ತದೆ. ಸಂಕಪ್ಪ ಹೆಗ್ಡೆಯ ಈ ಅಭಿಪ್ರಾಯಗಳಿಗೆ ಅಂಬಕ್ಕೆ ಮನ್ನಣೆ ನೀಡುತ್ತಾರೆ.

ಬಂಟ ಸಮಾಜದಲ್ಲಿ ಹಿರಿಯರಿಂದ ಬಂದ ಹೊಲಗಳಲ್ಲಿ ಹೆಣ್ಣುಮಕ್ಕಳಿಗೆ ವಿಶೇಷ ಪ್ರಾಶಸ್ತ್ಯ. ಗದ್ದೆ ಹೋಗಿ ತೋಟ ಬರಬೇಕಾದರೆ ಅಲ್ಲಿ ಆಸ್ತಿಯ ಒಡೆತನದಲ್ಲಿಯೂ ಬದಲಾವಣೆ ಆಗುತ್ತದೆ ಎಂಬ ಅಂಶವನ್ನು ಕಾದಂಬರಿಕಾರರು ಸೂಕ್ಷ್ಮವಾಗಿ ತಿಳಿಸಿದ್ದಾರೆ. ತೋಟದಲ್ಲಿ ದಿನಾ ಸಂತೋಷವಾಗಿ ಸುತ್ತಾಡುತ್ತಿದ್ದ ಸಂಕಪ್ಪಣ್ಣನನ್ನು ಅಂಬಕ್ಕೆ ತಮಾಷೆಯಾಗಿ ಪ್ರಶ್ನಿಸಿದಾಗ ಅವರು "ಹೊಲಗದ್ದೆಗಳನ್ನು ನಮ್ಮ ಹಿರಿಯರು ಕಡಿದು ಮಾಡಿದ್ದು, ಕುಟುಂಬಕ್ಕೆ (ಹೆಣ್ಣುಮಕ್ಕಳಿಗೆ) ಎಂದು! ಇದು ಈಗ ನಾನೇ ಮಾಡುತ್ತಿರುವುದು ನನಗೇ ಎಂದು!" ತಮಾಷೆಯಾಗಿಯೇ ಪ್ರತ್ಯುತ್ತರ ನೀಡುತ್ತಾರೆ. ಗುತ್ತಿನ ಮನೆಯ ಬದಲಾವಣೆಯಲ್ಲಿ ಈ ಅಂಶವೂ ಮುಖ್ಯವಾಗುತ್ತದೆ. ಸಾಂತೇರುಗುತ್ತಿನಲ್ಲಿ ಮುಂದೆ ಗಂಡುಮಕ್ಕಳು ಉಳಿಯುವಂತೆ ಆಸ್ತಿಯನ್ನು ಹಂಚಿಕೊಡುತ್ತಾರೆ. ಹೀಗೆ ಭೂಮಸೂದೆ ಜ್ಯಾರಿಯ ಬಳಿಕ ಮಾತೃ ಪ್ರಾಧಾನ್ಯವು ಪಿತೃ ಪ್ರಾಧಾನ್ಯವಾಗಿ ಬದಲಾಗುತ್ತದೆ.

ಎಸ್. ಎಸ್. ಕೊಸಾಂಬಿಯವರು "ಗುದ್ದಲಿಯಿಂದ ನೇಗಿಲಿಗೆ ಬದಲಾದ ಉತ್ಪಾದನಾ ಸಾಧನೆಯು ಕೃಷಿಯ ಸಾಧ್ಯತೆಗಳನ್ನು ಹಿಂದಿಗಿಂತ ವಿಸ್ತರಿಸಿತು. ಉತ್ಪಾದನಾ ಸಾಮರ್ಥ್ಯ ಹೆಚ್ಚಿದಂತೆಲ್ಲಾ ಅಧಿಕ ಉತ್ಪಾದನೆಯ ನಿಮಿತ್ತವಾಗಿ ಒಡೆತನದ ಪ್ರಶ್ನೆ ಅನಿವಾರ್ಯವಾಗುತ್ತದೆ. ಮಾತೃಪ್ರಾಧಾನ್ಯವನ್ನು ನಿರ್ಮೂಲ ಮಾಡಿ ಪಿತೃಪ್ರಾಧಾನ್ಯ ಜ್ಯಾರಿಗೆ ಬಂತು" (ಪ್ರೀತಿ ಶುಭಚಂದ್ರ, ೨೦೦೨, ಪುಟ ೨೪೨) ಎಂದಿದ್ದಾರೆ.

ಕೊಸಾಂಬಿಯವರ ಅಭಿಪ್ರಾಯದಂತೆ ಗುತ್ತಿನ ಗೇಣಿದಾರರು, ಮೂಲದಾಳುಗಳು ಸ್ವಂತ ಜಮೀನನ್ನು ಪಡೆದ ಬಳಿಕ ಅವರ ಕುಟುಂಬದ ವ್ಯವಹಾರಗಳಲ್ಲಿ ಬದಲಾವಣೆಯಾದಂತೆ ಒಡೆತನದಲ್ಲಿಯೂ ಬದಲಾವಣೆಯಾಯಿತು. ಇದರಿಂದ ಕುಟುಂಬದೊಳಗೆ ಒಡಕುಗಳು ಕಂಡುಬಂದವು.

ಕರಿಯ ಪೂಜಾರಿಯ ಮಗ ಭೋಜ ಬಂಗೇರ ತನ್ನ ಮಾವನ ಕುರಿತು ಗುತ್ತಿನ ಮನೆಯಲ್ಲಿ ದೂರು ನೀಡುತ್ತಾನೆ. ತನ್ನ ಮಾವ, ತನ್ನ ತಾಯಿಯ ಹೆಸರಿನಲ್ಲಿ

ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸುವ ಬದಲು ತನ್ನ ಹೆಸರಿನಲ್ಲೇ ಅರ್ಜಿ ಸಲ್ಲಿಸಿರುವುದು ಮಾತ್ರವಲ್ಲ ಅದರ ಹಕ್ಕುದಾರರೆಂದು ತನ್ನ ಹೆಂಡತಿ, ಮಕ್ಕಳ ಹೆಸರನ್ನು ಮಾತ್ರ ನಮೂದಿಸಿದ್ದಾನೆಂದು ಹೇಳಿಕೊಳ್ಳುತ್ತಾನೆ. ನ್ಯಾಯೋಚಿತವಾಗಿ ತಾಯಿಗೆ ಸಿಗಬೇಕಾದ ಭೂಮಿ ಸಿಗುವುದಿಲ್ಲ. ಮಾವನಲ್ಲಿ ವಿಚಾರಿಸಿದಾಗ ಅವನು "ಈ ಮಣ್ಣಿನಲ್ಲಿ ಕೆಸರು ಮಾಡಿದ್ದು ನಾನು ಮತ್ತು ನನ್ನ ಹೆಂಡತಿ ಮಕ್ಕಳು ಮಾತ್ರ" (ಉಲ್ಲಂಘನೆ, ಪುಟ ೩೯೧) ಎನ್ನುತ್ತಾನೆ. ಮಾವನ ಮಗ ಕುಟ್ಟಿ ಮತ್ತು ಭೋಜರ ಮಧ್ಯೆ ದೊಡ್ಡ ಗಲಾಟೆಯೇ ನಡೆದು, ಕುಟ್ಟಿ ಇದು ಕ್ರಿಮಿನಲ್ ಕೇಸೆಂದು ಸ್ಟೇಷನ್‌ನಲ್ಲಿ ದಾಖಲು ಮಾಡಿದ. ಮುಂದೆ ಕೋರ್ಟಿನ ಮೆಟ್ಟಲೇರುವವರೆಗೆ ಅದು ಬೆಳೆಯಿತು.

ಭೂಮಸೂದೆ ಕಾನೂನಿನಿಂದ ಒಳಿತುಗಳು ಕಂಡುಬಂದಷ್ಟೇ ಕೆಡುಕುಗಳೂ ಕಂಡುಬಂದವು. ಒಗ್ಗಟ್ಟಿನಲ್ಲಿದ್ದ ಅಣ್ಣ-ತಮ್ಮಂದಿರು, ಅಣ್ಣ-ತಂಗಿಯ ಮಕ್ಕಳು ಆಸ್ತಿಗಾಗಿ ಕಾದಾಟ ನಡೆಸಿ ಕೊಲೆ ಮಾಡುವವರೆಗೂ ಮುಂದುವರಿಯುತ್ತಾರೆ. ಸಂಸಾರದ ವಿಘಟನೆ ನಡೆಯಿತು. ಅಪನಂಬಿಕೆಯ ವಿಷಬೀಜ ಮೊಳಕೆಯೊಡೆಯಿತು. ಮಾತ್ರವಲ್ಲ 'ಕೃಷಿ' ಸಂಸ್ಕೃತಿಯು ಕಡಿಮೆಯಾಗಿ 'ವ್ಯಾಪಾರಿ' ಸಂಸ್ಕೃತಿಯು ಬೆಳೆಯುತ್ತದೆ. ನೀಲಯ್ಯ ಪೂಜಾರಿ ಕೇರಳದ ತ್ರಿಶೂರಿನಿಂದ ಪುಷ್ಪಾಕರನ್ ಎಂಬವನನ್ನು ಕರೆಸಿ ತನ್ನ ಭೂಮಿಯಲ್ಲಿ ಕಲ್ಲಿನ ಕೋರೆಯ ವ್ಯಾಪಾರ ಆರಂಭಿಸುತ್ತಾನೆ. ಕ್ರಮೇಣ ಸಾಂತೇರುಗುತ್ತಿನ ಗೇಣಿದಾರರಾಗಿದ್ದವರ ಬೆಟ್ಟು ಗದ್ದೆಗಳೆಲ್ಲಾ ಕೆಂಪು ಕಲ್ಲಿನ ಕೋರೆಗಳಾಗುತ್ತಾ ಹೋದವು. ಅಲ್ಲದೆ ಬೇಗನೇ ಹಣ ಮಾಡುವ ಉತ್ಸಾಹದಲ್ಲಿ ಅವರ ಜಮೀನಿನಲ್ಲಿದ್ದ ಬೃಹತ್ ಮರಗಳನ್ನೆಲ್ಲಾ ಆದಂ ಕುಟ್ಟಿ, ಕೃಷ್ಣ ಶೆಟ್ಟರಿಗೆ ಮಾರಿಬಿಡುತ್ತಾರೆ. ಪ್ರಶಾಂತವಾಗಿದ್ದ ಒಂಬತ್ತುಕೆರೆ ಪರಿಸರದಲ್ಲಿ ಜನರಿಗೆ ಹಣದ ದಾಹ ಹೆಚ್ಚಾಗುತ್ತಾ ಹೋಗಿ ಕಳ್ಳತನ, ಮೋಸ, ವಂಚನೆಗಳು ಹೆಚ್ಚಾಗುತ್ತಾ ಹೋದವು. ಭೋಜ ಶೆಟ್ಟಿಗಾರನ ಹಿತ್ತಲಲ್ಲಿ ಕೃಷ್ಣ ಶೆಟ್ಟಿ ಕಡಿಸಿಹಾಕಿದ್ದ ಮರವನ್ನು ರಾತ್ರಿ ಹೊತ್ತು ಯಾರೋ ಕದ್ದೊಯ್ದರು. ಕಳ್ಳನನ್ನು ಪತ್ತೆಹಚ್ಚಲಾರದೆ ಕೊನೆಗೆ ಭೋಜ ಶೆಟ್ಟಿಗಾರನನ್ನೇ ಸ್ಟೇಷನ್‌ಗೆ ಕರೆಸಿದರು. ಅವನ ಹೆಂಡತಿಯ ನೋವನ್ನು ಅರ್ಥಮಾಡಿಕೊಂಡ ಅಂಬಕ್ಕೆಯ ಆಣತಿಯಂತೆ ಕೊಟ್ಟಂತಹ

ಕಂಪ್ಲೇಂಟನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಾರೆ. ಮೂಲದಾಳುಗಳು ಗುತ್ತಿನ ಹಿಡಿತದಲ್ಲಿದ್ದಾಗ ಕೆಟ್ಟ ಚಟಗಳಿಂದ ಮುಕ್ತರಾಗಿದ್ದರು. ಆದರೆ ಆ ಬಳಿಕ ಅವರ ಬಗ್ಗೆ ಅವರಿಗೇ ಹತೋಟಿ ಇರಲಿಲ್ಲ. ಸ್ವಂತ ಭೂಮಿಯಿಂದ ಆದಾಯ ಪಡೆದುಕೊಂಡರೂ ಇದು ಉತ್ತಮ ರೀತಿಯಲ್ಲಿ ಅವರ ಜೀವನವನ್ನು ಪರಿವರ್ತಿಸಲಿಲ್ಲ. ಮೊದಲೇ ಕುಡಿತದ ಅಭ್ಯಾಸವಿದ್ದ ಅವರಿಗೆ ಆರ್ಥಿಕ ಸುಧಾರಣೆಯು ಮತ್ತಷ್ಟು ಬೆಂಬಲ ಕೊಟ್ಟಿತು. ಗುತ್ತಿನ ಮನೆಯ ಮೇಲೂ ಮೊದಲಿನ ಗೌರವದ ಭಾವ ಇಲ್ಲ. ಆದಂ ಕುಟ್ಟಿಯ ಕಳ್ಳಿನ ವ್ಯಾಪಾರದಿಂದ ಕುಡಿತದ ಅಭ್ಯಾಸ ಮಾಡಿಕೊಂಡ ತೌಡನಿಗೆ ಸಂಸಾರದಲ್ಲಿ ವಿರಸವುಂಟಾಯಿತು. ಎಂದೂ ಗುತ್ತಿನ ಬಗ್ಗೆ ಕೆಟ್ಟ ಮಾತುಗಳನ್ನಾಡದ ಆತ ಏನೇನೋ ಮಾತನಾಡುತ್ತಾನೆ. ಕೊನೆಗೆ ಕಳ್ಳಿನ ಆಸೆಯಿಂದ ತಾಳೆಮರಕ್ಕೆ ಹತ್ತಿ ಬಿದ್ದು ಪ್ರಾಣವನ್ನೇ ಕಳೆದುಕೊಳ್ಳುತ್ತಾನೆ.

ಒಂಬತ್ತುಕೆರೆಯ ಕೆರೆಗಳು ಸದಾ ನೀರಿನಿಂದ ತುಂಬಿಕೊಂಡು ಕೃಷಿ ಕೆಲಸಕ್ಕೆ ನೆರವಾಗುತ್ತಿದ್ದವು. ಆದರೆ ಈಗ ಕೆಲವು ಕೆರೆಗಳೇ ಮಾಯವಾಗಿವೆ. ಸರಕಾರವು ಭೂ ರಹಿತರಿಗೆ ನಿವೇಶನ ಮಾಡಿಕೊಡುವ ಸಂದರ್ಭದಲ್ಲಿ ಮನೆ ಕಟ್ಟುವಾಗ ಬೇಡವಾದ ಮಣ್ಣೆಲ್ಲಾ ಮಳೆಗೆ ಕೊಚ್ಚಿಕೊಂಡು ಬಂದು ಕೆರೆಗಳಲ್ಲಿ ತುಂಬಿ ಕೆರೆಗಳೇ ಇಲ್ಲದಂತೆ ಪರಿವರ್ತಿತವಾದುದು ಇದಕ್ಕೆ ಕಾರಣ. ಆಧುನಿಕ ಪ್ರಗತಿಗಳೊಂದಿಗೆ ಜಲದ ಸಮಸ್ಯೆಯೂ ಕೂಡಾ ಹೇಗೆ ಎದುರಾಗುತ್ತದೆ ಎಂಬುದನ್ನು ಕಾದಂಬರಿಕಾರರು ತಿಳಿಸಿದ್ದಾರೆ.

ಹಿಂದೆ ಸಾಂತೇರುಗುತ್ತಿನ ಕೃಷಿಗೆ ತೋಡಿಗೆ ಕಟ್ಟ ಹಾಕುವ ಕೆಲಸ ಒಂದು ಹಬ್ಬದಂತೆ ಆಗುತ್ತಿತ್ತು. ಈಗ ಅದು ನಿಂತುಹೋಗಿದೆ. ನವಿಲುಪದವಿನಲ್ಲಿ ಎಲ್ಲಾ ಧರ್ಮ ಜಾತಿಯವರೂ ಒಟ್ಟಾಗಿ ಮುಳಿ ಹುಲ್ಲು ಹೆರೆಯುವ ಸಂಭ್ರಮ ಇಂದು ಇಲ್ಲವಾಗಿದೆ. ಬೆಟ್ಟು ಗದ್ದೆಗಳೆಲ್ಲಾ ಕಲ್ಲಿನ ಕೋರೆಗಳಾಗಿ ಒಂಬತ್ತುಕೆರೆಗಳ ಬದಲು ನೂರಾರು ಕೆರೆಗಳಾಗಿವೆ. ವಿಘಟನೆಯ ಫಲ ಸಾಮೂಹಿಕ ಸಹಕಾರಕ್ಕೆ ಚ್ಯುತಿಯಾಯಿತು. ಎಲ್ಲವನ್ನೂ ಪದಾರ್ಥ ಸಂಸ್ಕೃತಿ (ಹಣದ ನೆಲೆ)ಯಿಂದಲೇ ಅಳೆಯುವ ಕೆಟ್ಟ ಸಂಪ್ರದಾಯ ಬಳಕೆಗೆ ಬಂತು.

ಒಟ್ಟಿನಲ್ಲಿ ಹೇಳುವುದಾದರೆ ಸರಕಾರದ ಭೂಮಸೂದೆ ಕಾಯಿದೆಯಿಂದ ಸಾಂತೇರುಗುತ್ತು ಮಾತ್ರವಲ್ಲ ಇಡಿ ಒಂಬತ್ತುಕೆರೆಯೇ ಪಲ್ಲಟಕ್ಕೆ ಒಳಗಾಯಿತು. ಗುತ್ತಿನವರಿಗೆ ಭೂಮಿಯನ್ನು ಕಳೆದುಕೊಂಡು ಅಸಹಾಯಕತೆ, ಚಿಂತೆ ಎದುರಾದರೆ ಗೇಣಿದಾರ, ಮೂಲದಾಳುಗಳಿಗೆ ಜಮೀನನ್ನು ಪಡೆದ ಸಂತೋಷ, ಹುಮ್ಮಸ್ಸು. ಅಂಬಕ್ಕೆ ಪರಿಸ್ಥಿತಿಯಿಂದ ಬೇಸತ್ತರೂ ಅದಕ್ಕೆ ಬೇಕಾದ ಪರ್ಯಾಯ ವ್ಯವಸ್ಥೆಗಳೊಂದಿಗೆ ಹೊಂದಿಕೊಳ್ಳುತ್ತಾರೆ. ಆದರೆ ಒಂಬತ್ತುಕೆರೆಯ ಪರಿಸರ ಮಾತ್ರ ಒಂದು ರೀತಿಯ ವ್ಯಾಪಾರೀ ಮನೋಧರ್ಮದಿಂದ ನಲುಗುತ್ತಿರುವುದನ್ನು ಇಲ್ಲಿ ವಿಶದಪಡಿಸುತ್ತಾರೆ. ಮಾನವನ ಪ್ರಗತಿಯೊಂದಿಗೆ ಸಮಸ್ಯೆಗಳು ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತವೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

೫.೩ ಆಧುನಿಕತೆ ಮತ್ತು ಗುತ್ತಿನ ಸ್ಥಿತ್ಯಂತರಗಳು:

ಭಾರತದಲ್ಲಿ ಬ್ರಿಟಿಷರ ಆಡಳಿತದ ಕಾಲಘಟ್ಟದಲ್ಲಿ ಹೊಸರೀತಿಯ ಶಿಕ್ಷಣ ಕ್ರಮದಿಂದ ಗುತ್ತಿನ ಮನೆಯಲ್ಲಿ ಸಾಕಷ್ಟು ಬದಲಾವಣೆಗಳು ಉಂಟಾದವು. ಕಾಲಚಕ್ರ ಉರುಳಿದಂತೆ ನಮ್ಮ ಸಮಾಜದಲ್ಲಿ, ಜನರ ಭಾವನೆಗಳಲ್ಲಿ ಯಾವ ರೀತಿಯ ಬದಲಾಣೆಗಳಾಗಬೇಕು ಮತ್ತು ಆಗಿವೆ ಎಂಬುದನ್ನು ಕಾದಂಬರಿಕಾರರು ನಿರೂಪಿಸಿರುವ ರೀತಿ ವಿಶಿಷ್ಟವಾಗಿದೆ. ನಗರೀಕರಣ ಮತ್ತು ಆಧುನೀಕರಣ ಇವುಗಳ ಪರಿಣಾಮದಿಂದ ಜನರ ಜೀವನ ಶೈಲಿ ಬದಲಾಯಿತು. ತಮ್ಮದಲ್ಲದ ಸಂಸ್ಕೃತಿಯ ಕಡೆಗೆ ಜನ ಹೆಚ್ಚು ವಾಲತೊಡಗಿದರು. ಪರಂಪರಾಗತವಾಗಿ ಬಂದ ಸಂಸ್ಕೃತಿಗಳು ಹಿಂದೆ ಬಿದ್ದು ನವ ಸಂಸ್ಕೃತಿಯು ಜನರಲ್ಲಿ ಕಾಣಿಸಿಕೊಂಡಿತು. ಕೃಷಿಗೆ ಹೆಚ್ಚು ಪ್ರಾಧಾನ್ಯ ಕೊಡುತ್ತಿದ್ದ ಗುತ್ತಿನ ಮನೆಯಲ್ಲಿ ಶಿಕ್ಷಣಕ್ಕೆ ಅಷ್ಟೊಂದು ಮಹತ್ವವಿರಲಿಲ್ಲ. ಇಂಗ್ಲಿಷ್ ಶಿಕ್ಷಣವನ್ನು ಪಡೆಯುವ ಅವಕಾಶ ಸಂಕಪ್ಪನಿಗೆ ದೊರಕಿತು. ಆದರೆ ಅಂಬಕ್ಕೆಗೆ ಸಿಗಲಿಲ್ಲ. ಹೆಣ್ಣು ಮಕ್ಕಳು ಶಿಕ್ಷಣ ಪಡೆಯಬೇಕೆಂಬ ಅಭಿಪ್ರಾಯವನ್ನು ಅಂಬಕ್ಕೆಗೆ ತಿಳಿಸುತ್ತಾರೆ. ಆಸ್ತಿ, ಅಂತಸ್ತು, ಐಶ್ವರ್ಯ ಎಲ್ಲವೂ ಹಿಂದಿನ ಕಾಲದಲ್ಲಿ ಬೆಲೆ ತರುವಂತಹುದು. ಆದರೆ ಈಗ ಹಾಗಲ್ಲ. ಹೆಣ್ಣುಮಕ್ಕಳು ಹಿಂದಿನಂತೆ ಗುತ್ತಿನ ಮನೆಯಲ್ಲೇ ಉಳಿಯುವವರಲ್ಲ. ಕಾಲ ಕಾಲಕ್ಕೆ ಬದಲಾವಣೆ ಆಗಲೇಬೇಕು

ಎನ್ನುತ್ತಾರೆ. ಅವರ ಮಾತಿನಂತೆ ಅಂಬಕ್ಕೆ ಮಗಳಿಗೆ ಒಳ್ಳೆಯ ಕಾಲೇಜು ಶಿಕ್ಷಣ ಕೊಡಿಸುತ್ತಾರೆ. ಮಗ ರಂಜಿತನಿಗೂ ಇದು ಇಷ್ಟವಾಗುತ್ತದೆ. ಇಂಗ್ಲಿಷ್ ಶಿಕ್ಷಣ ಪಡೆದ ಶಾರದೆಯ ಮನಸ್ಸು ಹಿಂದಿನ ತಲೆಮಾರಿನ ಸಂಪ್ರದಾಯದಂತೆ ಗುತ್ತಿನ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಬಗ್ಗೆ ಯೋಚನೆ ಮಾಡದೆ ಮುಂಬಯಿಯಲ್ಲೇ ನೆಲೆ ನಿಲ್ಲುವ ಬಗ್ಗೆ ಯೋಚನೆ ಮಾಡುತ್ತದೆ. “ಗುತ್ತಿನ ಮನೆಗಳೆಲ್ಲಾ ಇನ್ನು ಇರುವುದು ಹಳ್ಳಿಗಳಲ್ಲಿ ಅಲ್ಲ, ಪೇಟೆಯಲ್ಲಿಯೇ” (ಉಲ್ಲಂಘನೆ, ಪುಟ ೪೪೦) ಎಂದು ಆಕೆಯ ಗಂಡ ಆಗಾಗ ಹೇಳುವ ಮಾತುಗಳು ನಿಜವಾಗುತ್ತಿವೆ ಎಂದೆನಿಸಿತು ಅವಳಿಗೆ. ತನ್ನ ನಂತರ ಶಾರದೆಯೇ ಈ ಗುತ್ತಿನ ಯಜಮಾನಿ ಆಗಬೇಕೆಂಬ ಕನಸು ಹೊತ್ತ ಅಂಬಕ್ಕೆಗೆ ಮುಂದೆ ಅದು ದೊಡ್ಡ ಸವಾಲಾಗಿ ಪರಿಣಮಿಸುತ್ತದೆ.

ಆಧುನಿಕತೆಯಿಂದ ಸಮಾಜದಲ್ಲಿ ಕಂಡುಬಂದ ಇನ್ನೊಂದು ಅಂಶವೆಂದರೆ ಅಂತರ್ಜಾತೀಯ ವಿವಾಹ. ರಂಜಿತ್, ಸಿಂಗ್ ಹುಡುಗಿ ಸ್ಮಿತಾಳನ್ನು ಮದುವೆಯಾದಾಗ ಅವಳ ಜಾತಿ, ವರ್ತನೆ, ಮಾತು ಎಲ್ಲವೂ ಅಂಬಕ್ಕೆಗೆ ದೊಡ್ಡ ಸವಾಲಾಗಿ ಮೂಡಿಬರುತ್ತವೆ. ಈ ವಿವಾಹದ ನಂತರ ಸಾಂತೇರು ಮನೆ–ಮನಗಳೆರಡರಲ್ಲೂ ಹೆಚ್ಚಿನ ಬದಲಾವಣೆ ಕಂಡುಬಂದಿತು. ಇಲ್ಲಿನ ಅನ್ನ, ದೋಸೆಗಳ ಸ್ಥಾನದಲ್ಲಿ ರೋಟಿ, ಪರೋಟಗಳು ರಾರಾಜಿಸಿದವು. ಮನೆಯೊಳಗಡೆಯೇ ಹೊಸರೀತಿಯ ಪಾಯಿಖಾನೆ ಕೊಮೋಡ್‌ಗಳು ನಿರ್ಮಾಣಗೊಂಡವು. ಅದಕ್ಕೆ ಬೇಕಾದ ನೀರಿನ ವ್ಯವಸ್ಥೆಗಾಗಿ ಕಪ್ಪು ಬಣ್ಣದ ಟ್ಯಾಂಕ್ ಒಂದನ್ನು ಎತ್ತರದಲ್ಲಿ ನಿಲ್ಲಿಸಿದರು. ಜಾತಿ ಪದ್ಧತಿಯ ದಟ್ಟ ಛಾಯೆಯಲ್ಲಿ ಮುಳುಗಿದ್ದ ಅಂಬಕ್ಕೆ ಎಚ್ಚೆತ್ತುಕೊಳ್ಳುತ್ತಾರೆ. ರಂಜಿತ್‌ನ ವಿವಾಹದ ಕಹಿ ಹೇಗೆ ಮನಸ್ಸಿನಿಂದ ಮಾಯವಾಯಿತೆಂಬುದು ಅವರಿಗೆ ತಿಳಿಯದಂತಾಯಿತು. “ಆಕೆ ತನ್ನನ್ನು ಗೆದ್ದಳೋ ಅಥವಾ ತಾನೇ ಆಕೆಗೆ ಸೋತೆನೋ ಎಂಬ ತರ್ಕ ಯಾಕೆ?” ಎಂಬ ಭಾವನೆ ಮೂಡಿತು. ಆಕೆಯ ಜಾತಿ ಯಾವುದೆಂದು ಪ್ರಶ್ನಿಸುವುದಕ್ಕೂ ಸಾಧ್ಯವಾಗುವುದಿಲ್ಲ. ಕೆಲವೊಮ್ಮೆ ಆಕೆಯ ಸ್ವಭಾವದಲ್ಲಿ ಬ್ರಾಹ್ಮಣ್ಯವನ್ನು ಕಾಣುತ್ತಾರೆ. ಆ ವಿಚಾರವಾಗಿ ಚಿಂತಿಸುವ ಅಗತ್ಯವಿಲ್ಲವೆಂದು ಭಾವಿಸಿಕೊಂಡರೂ, ಮನದ ಮೂಲೆಯಲ್ಲಿ ಮತ್ತದೇ ವಿಚಾರ ಪ್ರಶ್ನೆಯಾಗಿ ನಿಲ್ಲುತ್ತದೆ. ಸ್ಮಿತಾ ಉತ್ತರ ಪ್ರದೇಶದಲ್ಲಿ ನಮ್ಮ ಹಾಗಿರುವ ಕ್ಷತ್ರಿಯ ಸಮುದಾಯದ

ಹೆಣ್ಣು ಎಂದು ತಿಳಿದಾಗ ರಂಜಿತ್ ತಪ್ಪೇನೂ ಮಾಡಿಲ್ಲ ಎಂದು ಅಂಬಕ್ಕೆ ನೆಮ್ಮದಿಯ ಉಸಿರು ಬಿಡುತ್ತಾರೆ.

ಯಾವ ಕಾಯಿದೆ ಕಾನೂನುಗಳು ಬಂದರೂ ತನ್ನ ಗುತ್ತಿನ ಗೌರವ ಖಂಡಿತಾ ಕಡಿಮೆಯಾಗಲಾರದು ಎಂಬ ವಿಶ್ವಾಸ ಅಂಬಕ್ಕೆಗೆ. ಗುತ್ತನ್ನು ಬಿಟ್ಟು ತನ್ನ ಜೀವನ ಅಸಾಧ್ಯ ಎಂಬಷ್ಟು ಅಚಲ ಪ್ರೀತಿ. ಮುಂಬಯಿಗೆ ಹೋಗಿ ಸ್ವಲ್ಪ ಕಾಲ ತನ್ನ ಮಗಳ ಜೊತೆಗಿದ್ದು ಬರಬೇಕೆಂಬ ಮನಸ್ಸಿದ್ದರೂ ತಾನಿಲ್ಲದಿದ್ದರೆ ಈ ಗುತ್ತಿನ ಮನೆಯಲ್ಲಿ ಏನೋ ಒಂದು ಕೊರತೆ ಕಾಣಲೂ ಬಹುದು ಎಂಬ ಯೋಚನೆ. ದ್ವಂದ್ವ ಮನಸ್ಥಿತಿಯಲ್ಲಿ ಮುಂಬಯಿಗೆ ಹೋದರೂ ತನ್ನ ಭಾವನೆಗಳಿಗೂ ಮಗಳ ಭಾವನೆಗಳಿಗೂ ಮಧ್ಯೆ ದೊಡ್ಡ ಕಂದಕವಿರುವುದನ್ನು ಅವರು ಗಮನಿಸದಿರುವುದಿಲ್ಲ. “ಗುತ್ತು ಅಂದರೆ ತಾನು, ತಾನು ಅಂದರೆ ಗುತ್ತು. ತಾನಿಲ್ಲದೆ ಇದ್ದರೆ ಗುತ್ತು ಇಲ್ಲ” ಎಂದುಕೊಂಡಿದ್ದ ಅಂಬಕ್ಕೆಗೆ ಸಾಂತೇರುಗುತ್ತನ್ನು ಬಿಟ್ಟು ಬದುಕಲು ಸಾಧ್ಯವೇ ಇಲ್ಲ ಅನಿಸಿಬಿಟ್ಟಿತ್ತು. ಆಧುನಿಕತೆಯ ಜೀವನಕ್ಕೆ ಅಂಬಕ್ಕೆ ಬೇಸತ್ತಿದ್ದರೂ ಅದರ ಜೊತೆಗೆ ಹೆಜ್ಜೆ ಹಾಕಲು ಪ್ರಯತ್ನ ಪಡುತ್ತಾರೆ. ಗುತ್ತಿನ ಮನೆಯ ಬಾಣಂತಿಯ ಕೋಣೆಯಲ್ಲೇ ತನ್ನ ಮಗಳ ಹೆರಿಗೆ ಆಗಬೇಕೆಂದು ಬಯಸಿದ ಅವರು ಮುಂಬಯಿಯಲ್ಲಿ ಹೆರಿಗೆಗೆ ಸಂಬಂಧಪಟ್ಟ ಆಧುನಿಕ ವ್ಯವಸ್ಥೆಗಳ ಬಗ್ಗೆ ತುಂಬಾ ಖುಷಿಪಡುತ್ತಾರೆ. ಶಾರದಾಳ ಮಗಳು ಪ್ರಜ್ಞಾಳನ್ನು ಅಂಬಕ್ಕೆ ತನ್ನ ತೊಡೆಯ ಮೇಲೆ ಮಲಗಿಸಿಕೊಂಡು “ಈ ಮಗು ಗುತ್ತಿನ ನಾಳೆಯ ಯಜಮಾನಿ” ಎಂದು ತಮ್ಮೊಳಗೇ ಬೀಗುತ್ತಾರೆ. ಒಬ್ಬಳು ಹೆಣ್ಣುಮಗಳಿಂದಲೇ ಈ ಗುತ್ತಿನ ಮನೆಯ ಸಂತಾನ ವೃದ್ಧಿಯಾಗಬೇಕೆಂಬುದೇ ಅಂಬಕ್ಕೆಯ ನಿಲುವಾಗಿತ್ತು.

ಒಂಬತ್ತು ಕೆರೆಯಲ್ಲಿ ಹಿಂದೆ ಇದ್ದ ಎತ್ತಿನಗಾಡಿಗಳ ವ್ಯವಸ್ಥೆಯ ಬದಲಾಗಿ ಯಂತ್ರ ವ್ಯವಸ್ಥೆ ಮೂಡಿತು. ದಕ್ಷಿಣ ಕನ್ನಡ ಜಿಲ್ಲೆಗೆ ಮೊದಲಿಗೆ ಇದ್ದಲಿನ ಮೂಲಕ ಓಡುವ ಬಸ್ಸುಗಳು ಬಂದಾಗ ಜನ ಅದನ್ನು ತುಂಬಾ ಇಷ್ಟಪಟ್ಟರು. ಬಟ್ಟೆಯೆಲ್ಲಾ ಕೊಳೆಯಾಗುತ್ತಿದ್ದರೂ ಅದರ ವೇಗಕ್ಕೆ ಮಾರು ಹೋಗಿದ್ದರು. ಮನುಷ್ಯ ನಿಯಂತ್ರಿತ ಸಾಂಪ್ರದಾಯಿಕ ವ್ಯವಸ್ಥೆಯು ಎಷ್ಟೇ ಮಾನವೀಯತೆಯಿಂದ ಕೂಡಿದ್ದರೂ

ಆಧುನಿಕತೆಯ ಪರಿಣಾಮವಾಗಿ ಅದು ನಿರರ್ಥಕವಾಗುತ್ತಾ ಹೋಗುತ್ತದೆ ಎಂದು ಕಾದಂಬರಿಕಾರರು ನಿರೂಪಿಸಿದ್ದಾರೆ.

ಸಂಪರ್ಕ ಮಾಧ್ಯಮಗಳಲ್ಲಿ ಬದಲಾವಣೆ ಕಂಡುಬಂದಾಗ ಜನರ ಜೀವನ ಗತಿಯಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತವೆ. ಸಾಂತೇರುಗುತ್ತಿನಲ್ಲಿಯೂ ಇದರ ಪ್ರಭಾವ ಕಂಡು ಬರುತ್ತದೆ. ೧೭ನೆಯ ರಾಷ್ಟ್ರೀಯ ಹೆದ್ದಾರಿಯು ಉದ್ಘಾಟನೆಗೊಳ್ಳುತ್ತದೆ ಎಂಬ ವಿಚಾರ ಕೇಳಿದಾಗಲೇ ಇಡಿ ಕರಾವಳಿಯ ಜನ ಬೇರೆ ಬೇರೆ ರೀತಿಯ ಕನಸುಗಳನ್ನು ಕಾಣತೊಡಗಿದರು. ಒಂಬತ್ತುಕೆರೆಯ ಆದಂಕುಟ್ಟಿ ಬ್ಯಾರಿಯು ತನ್ನ ಜಾತಿಗನುಗುಣವಾಗಿ ವ್ಯಾಪಾರದಲ್ಲಿ ತೊಡಗಿ ಇಡೀ ಒಂಬತ್ತುಕೆರೆಯನ್ನು ಅಡಿಮೇಲಾಗುವಂತೆ ಪರಿವರ್ತಿಸುತ್ತಾನೆ. ಬದಲಾಗುತ್ತಿರುವ ಸಮಾಜದಲ್ಲಿ 'ವ್ಯಾಪಾರೀಕರಣ'ವು ತನ್ನ ಕಪಿಮುಷ್ಠಿಯನ್ನು ಬಲಪಡಿಸಿಕೊಳ್ಳುವುದಕ್ಕೆ ಬ್ಯಾರಿಯು ಸಂಕೇತವಾಗಿ ಇಲ್ಲಿ ಮೂಡಿಬರುತ್ತಾನೆ. ಆ ಪ್ರದೇಶದ ರೈತರು ಬೆಳೆದ ಕೃಷ್ಯುತ್ಪನ್ನಗಳ ವ್ಯಾಪಾರದ ಜೊತೆಗೆ ಬೀಡಿ ಬ್ರಾಂಚನ್ನು ಆರಂಭಿಸುವ ಮೂಲಕ ಹಳ್ಳಿಯ ಜನರ ಜೀವನದಲ್ಲಿ ಒಂದು ಕ್ರಾಂತಿಯನ್ನು ಮಾಡಿದ. ಗಂಡು-ಹೆಣ್ಣು, ಯುವಕರು, ವೃದ್ಧರು, ಅಶಕ್ತರು ಎಲ್ಲರೂ ಇದರ ಕಡೆಗೆ ಆಕರ್ಷಿತರಾಗುವಂತೆ ಮಾಡುತ್ತಾನೆ. ಒಂಬತ್ತುಕೆರೆಯಲ್ಲಿ ಚಿಕ್ಕ ಅಂಗಡಿಯೊಂದರ ಮೂಲಕ ಆರಂಭಗೊಂಡ ಆತನ ವ್ಯಾಪಾರವು ದಿನದಿಂದ ದಿನಕ್ಕೆ ಬೆಳೆಯುತ್ತಾ ಉಳ್ಳಾಲ-ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರಿನಲ್ಲೇ ಓಡಾಡುವ ದೊಡ್ಡ ವ್ಯಾಪಾರಿಯಾಗಿ ಬೆಳೆಯುತ್ತಾನೆ. ಬೀಡಿ ಬ್ರಾಂಚಿನ ಜೊತೆಗೆ ಹೊಸ ದಿನಸಿ, ಶೇಂದಿ, ಶರಾಬು ಅಂಗಡಿಯನ್ನು ತೆರೆಯುತ್ತಾನೆ. ಅದರ ಜೊತೆಗೆ ಕಾಫಿ, ಚಾ, ಚಾಕಣಗಳ ವ್ಯವಸ್ಥೆಯೂ ಆಯಿತು. ಚಹಾ, ಕಾಫಿಗಳ ರುಚಿ ಕಂಡಿರದ ಜನರು ಅವುಗಳ ರುಚಿಗೆ ಬಲಿಬೀಳುತ್ತಾರೆ. ಜೊತೆಗೆ ಕುಡಿತದ ಚಟಕ್ಕೂ ಒಳಗಾಗುತ್ತಾರೆ. ಕುಡಿತದ ಚಟಕ್ಕೆ ಬಲಿಯಾದ ಮೂಲದಾಳು ತೌಡ ಆ ಕಾರಣದಿಂದಲೇ ಪ್ರಾಣ ತೆತ್ತ. ಫಲವತ್ತಾದ ಕೃಷಿ ಭೂಮಿಯೆಲ್ಲಾ ಲಾಭದ ದೃಷ್ಟಿಯಿಂದ ಕಲ್ಲಿನ ಕೋರೆಗಳಾದುವು. ಹೀಗೆ ಇಡಿಯ ಪರಿಸರವೇ ಬದಲಾಗಿಬಿಡುತ್ತದೆ.

ರಾಷ್ಟ್ರೀಯ ಹೆದ್ದಾರಿ ಉದ್ಘಾಟನೆಗೊಂಡಿರುವುದರಿಂದ ಎಲ್ಲರೂ ಸಂತೋಷಗೊಳ್ಳಬೇಕಾದರೆ, ಗುತ್ತಿನ ಮನೆಗೆ ಎಂದೂ ಕಾಣದ ದುರಂತಗಳು

ಆವರಿಸಿಕೊಳ್ಳುತ್ತವೆ ಎಂಬುದನ್ನು ಕಾದಂಬರಿಕಾರರು ಸೂಚ್ಯವಾಗಿ ತಿಳಿಸುತ್ತಾರೆ. "ರಾಷ್ಟ್ರೀಯ ಹೆದ್ದಾರಿಯಲ್ಲಿ ಮೊತ್ತ ಮೊದಲು ನಮ್ಮಲ್ಲಿಗೆ ಬರುವುದು ಸಂತೋಷ ಅಲ್ಲ; ದುಃಖವನ್ನು ಹೊತ್ತು ತರುವ ಆಂಬ್ಯುಲೆನ್ಸ್" (ಉಲ್ಲಂಘನೆ, ಪುಟ ೩೫೪) ಎಂದು ಸಂಕಪ್ಪ ಹೆಗ್ಡೆ ಹೇಳುವ ಮಾತು ಸತ್ಯವಾಗುತ್ತದೆ. ಮಂಗಳೂರಿನ ಆಸ್ಪತ್ರೆಯಿಂದ ಮೂಲದಾಳು ಬೂದೆಯ ಶವವನ್ನು ಹೊತ್ತುಕೊಂಡು ಬರುವ ಮೂಲಕ ಗುತ್ತಿನ ಮನೆಯಲ್ಲಿ ದುಃಖವೇ ಮಡುಗಟ್ಟಿತ್ತು. ಬೂದೆಯ ಸಾವು ಗುತ್ತಿನ ಭವಿಷ್ಯದ ದೃಷ್ಟಿಯಿಂದ ದೊಡ್ಡ ಪೆಟ್ಟು. ಜೊತೆಗೆ ಆಧುನಿಕತೆಗೆ ಮಾರುಹೋದ ಜನರು ಗುತ್ತಿನ ಮನೆಯಿಂದ ದೂರವಾಗುತ್ತಾರೆ. ಕೃಷಿ ಕಾರ್ಯಗಳು ಮೂಲದಾಳುಗಳು ಮತ್ತು ಇನ್ನಿತರ ಬೀಡು ಒಕ್ಕಲುಗಳಿಂದ ಮಾತ್ರ ನಡೆಯಬೇಕಾದ ಸ್ಥಿತಿ ಬಂತು. ಕೂಲಿಕೊಟ್ಟರೂ ಮಾಜಿ ಗೇಣಿದಾರರು ಗುತ್ತಿನ ಅಂಗಳಕ್ಕೆ ಬರುವುದನ್ನೇ ನಿಲ್ಲಿಸಿದರು.

ಆಧುನಿಕತೆಯಿಂದ ಉಂಟಾದ ಇನ್ನೊಂದು ಸಮಸ್ಯೆಯೆಂದರೆ ಧರ್ಮ ವೈರುಧ್ಯ. ಒಂಬತ್ತುಕೆರೆಯಲ್ಲಿ ಮೊದಲು ಅಡಿಕೆ ಕೃಷಿ ಪ್ರಾರಂಭಿಸಿದ ಈಶ್ವರ ಭಟ್ಟರು ವ್ಯಾಪಾರಿ ಆದಂಕುಟ್ಟಿಯ ಜೊತೆ ಗಾಢ ಸ್ನೇಹವನ್ನು ಇಟ್ಟುಕೊಂಡಿದ್ದರು. ಮಂಗಳೂರಿನ ಕಾಲೇಜಿಗೆ ಹೋಗುತ್ತಿದ್ದ ತಮ್ಮ ಮೊಮ್ಮಗಳನ್ನು ಆದಂಕುಟ್ಟಿಯ ಕಾರಿನಲ್ಲೇ ಕಳುಹಿಸುವ ವ್ಯವಸ್ಥೆ ಮಾಡುತ್ತಾರೆ. ಇದನ್ನು ತಮ್ಮ ಜಾತಿಯವರೇ ಆದ ಗೋವಿಂದ ಭಟ್ಟರು ವಿರೋಧಿಸುತ್ತಾರೆ. ಮುಸಲ್ಮಾನರ ಬಗ್ಗೆ ಇದ್ದ ಪರಕೀಯ ಮನೋಭಾವನೆಯಿಂದ ಆದಂಕುಟ್ಟಿಗೆ ಸರಿಯಾಗಿ ಶಾಸ್ತಿ ಮಾಡುವ ಯೋಚನೆ ಮಾಡುತ್ತಾರೆ. ಒಂಬತ್ತುಕೆರೆಯಲ್ಲಿ ಏನೇ ಸಮಸ್ಯೆ ಬಂದರೂ ಅದು ಸಾಂತೇರುಗುತ್ತಿನಲ್ಲೇ ಪರಿಹಾರ ಕಂಡುಕೊಳ್ಳುತ್ತಿತ್ತು. ಸುಂದರ ಹೆಗ್ಡೆ ಈ ವಿಚಾರದಲ್ಲಿ ಭಾಗಿಯಾಗಿ ಆದಂಕುಟ್ಟಿಯನ್ನು ದಬಾಯಿಸಿ "ಗುತ್ತಿನಮನೆ ಸತ್ತುಹೋಗಿದೆ ಅಂತ ಈ ಊರು ತಿಳಿದುಕೊಂಡಿದ್ದರೆ ಅದು ಸುಳ್ಳು. ಗುತ್ತಿನ ಮನೆ ಅಂದರೆ ಏನು ಎಂದು ತೋರಿಸಲು ನಾನು ಹುಟ್ಟಿ ಬಂದಿದ್ದೇನೆ" (ಉಲ್ಲಂಘನೆ, ಪುಟ ೪೮೧) ಎಂದು ಜಾತಿಯ ನಿಜವಾದ ಗುಣವನ್ನು ತೋರಿಸುತ್ತಾನೆ. ಪರಿಸ್ಥಿತಿ ಉಚ್ಛ್ರಾಯ ಸ್ಥಿತಿಗೆ ತಲುಪುವ ಮೊದಲೇ ಗಾಡಿ ಮೂಸಬ್ಬ ಎಂಬ ಮುಸ್ಲಿಂ ವೃದ್ಧನ

ಮೂಲಕ ಎಲ್ಲವೂ ಶಾಂತವಾಗುತ್ತದೆ. ಮೂಸಬ್ಬನ ಮಾತಿನಂತೆ ಸುಂದರನನ್ನು ಗುತ್ತಿನ ಮನೆಯಿಂದ ಮುಂಬಯಿಗೆ ಕಳುಹಿಸುತ್ತಾರೆ.

ಸುಂದರ ಮುಂಬಯಿಗೆ ಹೋಗುವ ಮೂಲಕ ಗುತ್ತಿನ ಒಂದು ಸಮಸ್ಯೆ ಪರಿಹಾರವಾದರೂ ಗುತ್ತಿನ ಭವಿಷ್ಯದ ದೃಷ್ಟಿಯಿಂದ ದೊಡ್ಡ ಆಘಾತವೇ ಆಯಿತು. ಯಜಮಾನನಾಗಿ ಮುಂದುವರಿಯಬೇಕಾಗಿದ್ದ ಕೊಂಡಿಯೇ ಇದರಿಂದ ಕಳಚಿ ಬಿದ್ದಂತಾಯಿತು.

ಒಟ್ಟಿನಲ್ಲಿ ಭಾರತದ ಸ್ವಾತಂತ್ರ್ಯಾನಂತರ ಆಧುನಿಕತೆಯನ್ನು ಸಂತೋಷದಿಂದ ಸ್ವಾಗತಿಸಿದ ಸಾಂತೇರುಗುತ್ತು ಹಲವಾರು ರೀತಿಯ ಸ್ಥಿತ್ಯಂತರಗಳನ್ನು ಎದುರಿಸಬೇಕಾಯಿತು. ಗುತ್ತಿನ ಯಜಮಾನಿಗೆ ಇದು ದೊಡ್ಡ ಸವಾಲಾಗಿ ಎದುರಾಗುತ್ತದೆ.

೫.೪ ಜಾಗತೀಕರಣ, ವಿಶೇಷ ಆರ್ಥಿಕ ವಲಯ ಮತ್ತು ಸ್ತ್ರೀಯ ನೆಲೆ:

ಆಧುನಿಕ ಬದುಕಿನ ಹಲವು ಸಮಸ್ಯೆಗಳನ್ನು ಮೊಗಸಾಲೆಯವರು ಕಾದಂಬರಿಯಲ್ಲಿ ಗುರುತಿಸುತ್ತಾರೆ. ಜಾಗತೀಕರಣದ ಪರಿಣಾಮವಾಗಿ ಜಗತ್ತಿನ ಎಲ್ಲಾ ರಾಷ್ಟ್ರಗಳ ಕುಟುಂಬಗಳಂತೆ ಭಾರತದ ಕುಟುಂಬ ವ್ಯವಸ್ಥೆಯೂ ತೀವ್ರತರವಾದ ಪಲ್ಲಟಗಳನ್ನು ಅನುಭವಿಸಿದೆ. ವಿಜ್ಞಾನದ ಪ್ರಗತಿ, ಕೈಗಾರಿಕೀಕರಣ, ಮತ್ತು ಶಿಕ್ಷಣ ಜನರಲ್ಲಿ ಒಂದು ರೀತಿಯ ಸ್ಪರ್ಧಾತ್ಮಕ ಮನೋಭಾವನೆಯನ್ನು ಬೆಳೆಸಿದೆ. ಪರಸ್ಪರ ದ್ವೇಷ, ಅಸೂಯೆ, ಹಿಂಸೆಗಳಿಂದ ಎಲ್ಲಾ ಕಡೆಗಳಲ್ಲೂ ಯಾಂತ್ರಿಕ ಬದುಕು ರಾರಾಜಿಸುತ್ತಿದೆ. ಅಧಿಕಾರ, ಸಂಪತ್ತುಗಳ ಕೇಂದ್ರೀಕರಣ, ಸಂಯಮವಿಲ್ಲದ ಅತಿಯಾಸೆ ಇವು ಸಮಾಜಕ್ಕೆ ವಿಷಬೀಜವಾಗಿವೆ ಎಂಬುದನ್ನು ಕಾದಂಬರಿಕಾರರು ವಿಶದಪಡಿಸುತ್ತಾ ಅದರಿಂದ ಹೊರಬರುವ ದಾರಿಯನ್ನು ಸೂಚಿಸುತ್ತಾರೆ. ವಸಾಹತೀಕರಣದಿಂದ ಮಾನಸಿಕ ವಿಕೃತಿಗೆ ಒಳಗಾಗದೆ ಆರೋಗ್ಯಪೂರ್ಣವಾಗಿ ಯೋಚಿಸಬಲ್ಲ, ಉತ್ತಮ ಭವಿಷ್ಯದ ಕನಸುಗಳನ್ನು ಕಾಣುವ, ವಾಸ್ತವವನ್ನು ನಿರ್ಲಕ್ಷಿಸದೆ ಆದರ್ಶಗಳನ್ನು ಇಟ್ಟುಕೊಳ್ಳಬೇಕಾದ ಅಗತ್ಯಗಳನ್ನು ಕುರಿತು ಮೊಗಸಾಲೆಯವರು ಚಿಂತಿಸುತ್ತಾರೆ.

ಜಾಗತೀಕರಣದ ಕುರಿತಾಗಿ ಹಿರಿಯ ಸಮಾಜವಾದಿ ಚಿಂತಕ ಕಿಶನ್ ಪಟ್ನಾಯಕ್ ಈ ರೀತಿ ಪ್ರತಿಕ್ರಿಯಿಸಿದ್ದಾರೆ "ಹತ್ತೊಂಭತ್ತನೇ ಶತಮಾನದ ಉತ್ತರಾರ್ಧದಲ್ಲಿ ಜಾಗತೀಕರಣಕ್ಕೆ ಒಳಪಟ್ಟ ಇಂಡಿಯಾದ ಸಂಕೀರ್ಣ ಸನ್ನಿವೇಶ ಮತ್ತು ಆಧುನಿಕ ಮನಸ್ಸಿನ ಸಂಪೃದ್ಧಿ ಕಲ್ಪನೆಯೆಂದರೆ ನಿರ್ಗತೀಕರಣ ಎಂದೇ ಅರ್ಥ. ಏಕೆಂದರೆ ಇದು ಎಲ್ಲರನ್ನು ಒಳಗೊಳ್ಳುವ ಸಿದ್ಧಾಂತವಲ್ಲ, ಕೆಲವರಿಗಾಗಿ ಅನೇಕರನ್ನು ಹೊರಗಿಡುವ ಸಿದ್ಧಾಂತ. (Theory of Exclusion) ತೋರಿಕೆಯ ಮಟ್ಟಿಗೆ ಈ ಮಾದರಿ, 'ಸಮಸುಖಿ ರಾಜ್ಯ'ದ ಆದರ್ಶವಿಟ್ಟುಕೊಂಡಿದೆಯೇ ಹೊರತು ಇಲ್ಲಿ ಸಮಷ್ಟಿ ಹಿತದ ಸಾಮಾಜಿಕ ದರ್ಶನವನ್ನು ಗುರುತಿಸುವುದು ಅಸಾಧ್ಯ" (ಕವಿತಾ ರೈ, ೨೦೦೫, ಪುಟ ೩೨೩).

ಜಾಗತೀಕರಣದ ಭಾಗವಾದ 'ವಿಶೇಷ ಆರ್ಥಿಕ ವಲಯ'ದ ಪರಿಣಾಮವಾಗಿ ಮಂಗಳೂರಿನ ಸುತ್ತಮುತ್ತಣ ಪ್ರದೇಶಗಳಲ್ಲಿ ಊಹಿಸಲಸಾಧ್ಯವಾದ ಏರುಪೇರುಗಳುಂಟಾದವು. ತಮ್ಮ ಸಂಸ್ಕೃತಿಯನ್ನು, ಭೂಮಿಯನ್ನು ಉಳಿಸಿಕೊಳ್ಳುವ ದೊಡ್ಡ ಸವಾಲು ಜನರ ಮುಂದೆ ನಿಂತಿತು. ಸಾಂತೇರುಗುತ್ತಿನ ಭೂಮಿ ಮತ್ತು ಸಂಸ್ಕೃತಿಯನ್ನು ಉಳಿಸುವ ಸವಾಲು ಅಂಬಕ್ಕೆಯದು. 'ತಾನಿದ್ದರೆ ಮಾತ್ರ ಈ ಗುತ್ತು ಉಳಿಯಲು ಸಾಧ್ಯ' ಎಂಬ ಅಂಬಕ್ಕೆಯು ಕಾಲಕ್ಕೆ ತಕ್ಕಂತೆ ಹೆಜ್ಜೆ ಹಾಕುವ ಗಟ್ಟಿ ಮನಸ್ಸನ್ನು ರೂಢಿಸಿಕೊಳ್ಳುತ್ತಾರೆ. ಆಶ್ಚರ್ಯಪಡುವಂತಹ ರೀತಿಯಲ್ಲಿ ಅವರು ಮಾನಸಿಕವಾಗಿ ಬದಲಾಗಿಬಿಡುತ್ತಾರೆ. ತನ್ನನ್ನು ಉಳಿಸಿಕೊಳ್ಳಬೇಕಾದರೆ ಇತರರ ಸಹಾಯ ಬೇಕು. ಮೂಲದಾಳುಗಳಿಗೆ ಹಿಂದೆ ಚಾವಡಿಯವರೆಗೆ ಮಾತ್ರ ಪ್ರವೇಶಕ್ಕೆ ಅವಕಾಶವಿತ್ತು. ಆದರೆ ಅಂಬಕ್ಕೆ ತನ್ನ ಜೀವನದ ಇಳಿಗಾಲದಲ್ಲಿ ಇದೆಲ್ಲ ಅರ್ಥವಿಲ್ಲದ ಸಂಪ್ರದಾಯವೆಂದು ಮನಗಾಣುತ್ತಾರೆ. ತನಗೆ ಪ್ರೀತಿಯ ಜೊತೆಗೆ ಸೇವೆಯನ್ನು ನೀಡುತ್ತಿರುವ ಕೊರಗ ಮತ್ತು ಕರ್ಗಿಯವರನ್ನೇ ತನ್ನವರು ಎಂದು ಭಾವಿಸಿಕೊಳ್ಳುವವರೆಗೆ ಬದಲಾಗಿಬಿಡುತ್ತಾರೆ. ತಾನು ನಂಬಿದ ಜುಮಾದಿ ಭೂತದ ಮೇಲೆ ಎಲ್ಲಾ ಭಾರವನ್ನು ಹಾಕಿ ಪರಿಸ್ಥಿತಿಗೆ ಹೊಂದಿಕೊಳ್ಳುತ್ತಾರೆ.

ಆಧುನಿಕ ಜೀವನದಲ್ಲಿ ಸಂಬಂಧಗಳು ಶಿಥಿಲಗೊಳ್ಳುವ ಮತ್ತು ಮುಗ್ಧ ಜನರನ್ನು ಯಾವ ರೀತಿಯಲ್ಲಿ ಮೋಸದ ಬಲೆಯಲ್ಲಿ ಸಿಲುಕಿಸುತ್ತಾರೆ ಎಂಬ

ಚಿತ್ರಣವನ್ನು ಪ್ರಶಾಂತನ ವ್ಯಕ್ತಿತ್ವದಲ್ಲಿ ಗಮನಿಸಬಹುದು. ಸುಂದರನ ಮಗ ಪ್ರಶಾಂತ ಮುಂಬಯಿಯಲ್ಲೇ ಬೆಳೆದವನು. ಇಂಜಿನಿಯರಿಂಗ್ ಓದಿ 'ಮೆಹ್ತಾ ಅಂಡ್ ಮೆಹ್ತಾ' ಕಂಪೆನಿಯಲ್ಲಿ ಉದ್ಯೋಗಕ್ಕೆ ಸೇರಿದ್ದಾನೆ. ತನ್ನ ಸ್ನೇಹಿತ ಮನು ಮೆಹ್ತಾನನ್ನು (ಕಂಪೆನಿಯ ಯಜಮಾನನ ಮಗ) ಸಾಂತೇರುಗುತ್ತಿಗೆ ಕರೆದುಕೊಂಡು ಬರುತ್ತಾನೆ. ತನ್ನ ಹಿರಿಯರ ಆಸ್ತಿಯ ಬಗೆಗಿನ ಪ್ರೀತಿಯಿಂದಾಗಲೀ, ಅಂಬಕ್ಕೆಯ ಬಗೆಗಿನ ಕಾಳಜಿಯಿಂದಾಗಲೀ ಆತ ಬರಲಿಲ್ಲ. ಮುಗ್ಧತೆಯ ಪ್ರತಿರೂಪವಾದ ಅಂಬಕ್ಕೆಯಲ್ಲಿ ಹಟ್ಟಿಯ ಕುರಿತಾಗಿ, ಇಡಿ ಜಮೀನಿನ ಕುರಿತಾಗಿ ಗತಕಾಲದ ವಿವರಗಳನ್ನು ಅವರಿಬ್ಬರು ತಿಳಿದುಕೊಳ್ಳುತ್ತಾರೆ. ಮೆಹ್ತಾನ ಆಸಕ್ತಿಯನ್ನು ನೋಡಿ ಅಂಬಕ್ಕೆ "ನಮ್ಮ ತುಳುನಾಡಿನ ಮಕ್ಕಳಿಗೆ ಇಲ್ಲದ ಉತ್ಸಾಹ, ಈ ಹುಡುಗನಿಗೆ ಉಂಟಲ್ಲಾ?" (ಉಲ್ಲಂಘನೆ, ಪುಟ ೫೨೫) ಎಂದು ಸಂತೋಷಪಡುತ್ತಾರೆ. ಕೊರಗನ ಮೂಲಕ ಮಾಹಿತಿ ಪಡೆಯುತ್ತಾ ಗುತ್ತಿನ ಜಮೀನನ್ನೆಲ್ಲಾ ಸುತ್ತಾಡಿ ಬಂದರು. ಎಲ್ಲವನ್ನೂ ವ್ಯಾಪಾರೀ ದೃಷ್ಟಿಯಿಂದ ನೋಡಿ ಪ್ರಶಾಂತ ಮತ್ತು ಮೆಹ್ತಾ ಮುಂಬಯಿಗೆ ಹೊರಟು ನಿಂತಾಗ ಮನು ಹೇಳಿದ ಒಂದು ಮಾತಿನಿಂದ ಅಂಬಕ್ಕೆಗೆ ಬೆರಗಾಯಿತು. "ನಮ್ಮ ಅಪ್ಪ ಒಮ್ಮೆ ಇಲ್ಲಿಗೆ ಬಂದು ನೋಡಿದರೆ ಎಷ್ಟು ವಿಶಾಲವಾಗಿದೆ ಈ ಊರು, ಈ ಊರನ್ನೆಲ್ಲಾ ಕೊಂಡುಕೊಳ್ಳಬೇಕು ಎಂದೂ ಅನಿಸೀತು ಅವರಿಗೆ" (ಉಲ್ಲಂಘನೆ, ಪುಟ ೫೨೭) ಎನ್ನುತ್ತಾನೆ.

ಪ್ರಶಾಂತ ಸಾಂತೇರುಗುತ್ತಿನ ಜಮೀನನ್ನು ಅಂಬಕ್ಕೆಗೆ ತಿಳಿಯದ ರೀತಿಯಲ್ಲಿ ವ್ಯವಹಾರ ಕುದುರಿಸುವ ಯೋಚನೆ ಮಾಡುತ್ತಾನೆ. ತನ್ನ ಬಾಸ್ ಅಶೋಕ್ ಮೆಹ್ತಾರನ್ನು ಗುತ್ತಿನ ಮನೆಗೆ ಕರೆತರುತ್ತಾನೆ. "ಇಬ್ಬರೂ ನನ್ನನ್ನು ಮತ್ತು ನನ್ನ ಮನೆಯನ್ನು ನೋಡಲು ಬಂದದ್ದು ನನ್ನ ಭಾಗ್ಯ" (ಉಲ್ಲಂಘನೆ, ಪುಟ ೫೩೬) ಎನ್ನುತ್ತಾರೆ.

ವಿಶೇಷ ಆರ್ಥಿಕ ವಲಯದಲ್ಲಿ ಕಂಪೆನಿಗಳವರು ಬಡಜನರ ಮನಸ್ಸನ್ನು ಆಕರ್ಷಿಸಲು ನಾನಾ ಕುತಂತ್ರಗಳನ್ನು ಆಡುತ್ತಾರೆ. "ನಮ್ಮ ಪ್ರೊಜೆಕ್ಟ್ – ಸಕ್ಸಸ್ ಆಗುವ ಹಾಗಿದ್ದರೆ, ಆಗ ನಾವು ಈ ಗುತ್ತಿನ ಮನೆಯನ್ನು ಅದು ಇರುವ ಹಾಗೆ ಇಲ್ಲಿಂದ ಕಳಚಿ, ನಮ್ಮ ಪ್ರೊಜೆಕ್ಟ್‌ನ ಕೇಂದ್ರ ಸ್ಥಳದಲ್ಲಿ ಮತ್ತೆ ಸ್ಥಾಪಿಸಬೇಕು. ಅಲ್ಲಿ,

ಈ ಕರಾವಳಿಯ ಸಂಸ್ಕೃತಿಗೆ ಸಂಬಂಧಿಸಿದ ಹಾಗೆ ಒಂದು ಮ್ಯೂಸಿಯಂ, ಅದಕ್ಕಿಂತಲೂ ಮುಖ್ಯವಾಗಿ, ಹೂಳು ತುಂಬಿ ಹೋಗಿರುವ ಈ ಒಂಬತ್ತುಕೆರೆಗಳ ಬದಲು ಅಲ್ಲೇ ಒಂಬತ್ತುಕೆರೆಗಳನ್ನೂ ಕಟ್ಟಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಅಲ್ಲಿ ಒಂದು ದೇವಸ್ಥಾನ, ಅದೂ ನವದುರ್ಗೆಯರದ್ದು, ಸ್ಥಾಪಿಸಬೇಕು. ಆಗ ಈ ಒಂಬತ್ತುಕೆರೆಯ ಮಂದಿಯಷ್ಟೇ ಅಲ್ಲ ಕರಾವಳಿ ಜನ ಕೂಡಾ ನಮಗೆ ಖಂಡಿತ ಸಹಕಾರ ಕೊಡುತ್ತಾರೆ" (ಉಲ್ಲಂಘನೆ, ಪುಟ ೫೩೭) ಎಂದುಕೊಳ್ಳುತ್ತಾರೆ. ಮೆಹ್ತಾ ಪ್ರಶಾಂತನಲ್ಲಿ ಗುತ್ತಿನ ಭೂಮಿಯ ಎಲ್ಲಾ ದಾಖಲೆಗಳನ್ನು ಸಂಬಂಧಪಟ್ಟವರ ಒಪ್ಪಿಗೆ ಪತ್ರವನ್ನೂ ಆದಷ್ಟು ಬೇಗನೆ ಸಂಗ್ರಹಿಸಿಕೊಡಲು ತಿಳಿಸುತ್ತಾನೆ. ಪ್ರಶಾಂತ ಅದಕ್ಕೆ ಸಮ್ಮತಿಯನ್ನು ಸೂಚಿಸುತ್ತಾನೆ.

ಆಧುನಿಕ ಶಿಕ್ಷಣವನ್ನು ಯೋಗ್ಯವಾದ ರೀತಿಯಲ್ಲಿ ಬಳಸಿಕೊಳ್ಳದೇ ಹೋದಲ್ಲಿ ಅದು ತನ್ನ ಹಾಗೂ ಸಮಾಜದ ಪ್ರಗತಿಗೆ ಮಾರಕವಾಗಬಲ್ಲದು ಎಂಬುದು ಪ್ರಶಾಂತನ ವ್ಯಕ್ತಿತ್ವದ ಮೂಲಕ ವ್ಯಕ್ತಗೊಂಡಿದೆ. ತನ್ನಜ್ಜಿ ಅಂಬಕ್ಕೆ ಸಾಯದೆ ತಾನು ಯಾವುದೇ ದಾಖಲು ಪತ್ರವನ್ನು ಪಡೆಯಲು ಸಾಧ್ಯವಿಲ್ಲವೆಂದು ಕೊರಗುತ್ತಾನೆ. ಎಂಬತ್ತನಾಲ್ಕು ವರ್ಷ ಆದರೂ ಅವರು ಖಂಡಿತಾ ಬೇಗ ಸಾಯಲಾರರು ಅಂದುಕೊಳ್ಳುತ್ತಾನೆ.

ಸಮಾಜದಲ್ಲಿ ಹೊಸ ವ್ಯವಸ್ಥೆಗಳು ಬಂದಾಗ ಯಾವ ರೀತಿಯಲ್ಲಿ ಲಾಭ ಮಾಡಿಕೊಳ್ಳಬಹುದೆಂದು ಜನರು ಯೋಚಿಸುತ್ತಾರೆ. ಶಂಭು ಶೆಟ್ಟಿ ಬೆಣ್ಣೆಯಿಂದ ಕೂದಲು ತೆಗೆಯುವ ಹಾಗೆ ಬಹಳ ನಾಜೂಕಿನಿಂದ ಜನರ ಮನಸ್ಸನ್ನು ಪರಿವರ್ತಿಸುತ್ತಾನೆ. ಜನ ಅದರ ದುಷ್ಪರಿಣಾಮದ ಬಗ್ಗೆ ಯೋಚಿಸುವುದೇ ಇಲ್ಲ. ದಿಢೀರ್ ಆಗಿ ಶ್ರೀಮಂತರಾಗುವ ಯೋಚನೆಯಿಂದ ಒಂಬತ್ತುಕೆರೆಯ ಹಲವಾರು ಮಂದಿ ತಮ್ಮ ಭೂಮಿಯನ್ನು ಮಾರಿಬಿಡುತ್ತಾರೆ.

ನಮ್ಮ ಸಂಸ್ಕೃತಿಯನ್ನು, ಪರಂಪರೆಯನ್ನು ಉಳಿಸಿಕೊಂಡು ಹೋಗುವುದು ತುಂಬಾ ಕಷ್ಟ ಎನ್ನುವ ವಿಚಾರವನ್ನು ಕಾದಂಬರಿಕಾರರು ತಿಳಿಸುತ್ತಾರೆ. ಅಂಬಕ್ಕೆಯ ಇಬ್ಬರು ಮಕ್ಕಳಾದ ಸುಂದರ ಮತ್ತು ರಂಜಿತ್ ಇಬ್ಬರಲ್ಲೂ ವಿಭಿನ್ನ ವ್ಯಕ್ತಿತ್ವಗಳು ಕಾಣಿಸಿಕೊಳ್ಳುತ್ತವೆ. ಉತ್ತಮ ವ್ಯಕ್ತಿತ್ವದ ಸುಂದರ ಮುಂಬಯಿಯಲ್ಲಿ ಹೋಟೆಲ್ ಉದ್ಯಮವನ್ನು ಯಶಸ್ವಿಯಾಗಿ ನಡೆಸುತ್ತಿದ್ದ. ಕೈತುಂಬಾ ಹಣವಿದ್ದರೂ ಗುತ್ತಿನ

ಮನೆಯ ಬಗ್ಗೆ ತುಂಬಾ ಗೌರವ. ಆತನ ಹೋಟೆಲ್ ಉದ್ಯಮದ ಬಗ್ಗೆ ಅಂಬಕ್ಕೆ ಸಂತೋಷಗೊಂಡು ಹಳ್ಳಿಯ ಜೀವನಕ್ಕಿಂತ ನಗರ ಜೀವನವೇ ಶ್ರೇಷ್ಠ ಎನ್ನುವ ನಿಲುವಿಗೆ ಬರುತ್ತಾರೆ. ತನ್ನ ಹಿರಿಯರ ಕಾಲದಲ್ಲಿ ನಡೆಸಿಕೊಂಡು ಬರುತ್ತಿದ್ದ ನಾಗಮಂಡಲ ಸೇವೆಯನ್ನು ಬಹಳ ಭಕ್ತಿ ಶ್ರದ್ಧೆಯಿಂದ ನೆರವೇರಿಸಿದ ಸುಂದರನ ಬಗ್ಗೆ ಅಂಬಕ್ಕೆಗೆ ಬಹಳ ಅಭಿಮಾನ. ಅಲ್ಲದೆ ಮುಂಬಯಿಯಲ್ಲೂ ತನ್ನ ಗುತ್ತಿನ ಹೆಸರು ರಾರಾಜಿಸುವಂತೆ 'ಸಾಂತೇರ್ ಗ್ರೂಪ್ ಆಫ್ ಹೋಟೆಲ್ಸ್' ಎಂದು ಹೋಟೆಲ್‌ಗಳ ಸಮೂಹ ಸಂಸ್ಥೆಯನ್ನು ಆರಂಭಿಸಿದ. ಭೂಮಸೂದೆಯಿಂದ ಎಲ್ಲವೂ ನಾಶವಾಯಿತೆಂದು ಭಾವಿಸಿದ ಅಂಬಕ್ಕೆ ತುಂಬಾ ಖುಷಿಪಟ್ಟರು. ಚಿನ್ನದಂತಹ ವ್ಯಕ್ತಿತ್ವದ ಸುಂದರ ಹೆಗ್ಡೆ ಭೂಗತ ದೊರೆಗಳ ಗುಂಡಿಗೆ ಬಲಿಯಾಗಿ ಸಾಯುವುದು ಅಂಬಕ್ಕೆಗೆ ಎಂದೂ ಸುಧಾರಿಸಿಕೊಳ್ಳಲಸಾಧ್ಯವಾದ ಆಘಾತವನ್ನುಂಟುಮಾಡಿತು. ಸಾಂತೇರುಗುತ್ತಿನ ಪರಂಪರೆಯನ್ನು ಮುಂದುವರಿಸುವ ಕೊಂಡಿಯೊಂದು ಕಳಚಿ ಬಿದ್ದಂತಾಯಿತು.

ಜಾಗತೀಕರಣ, ಕೈಗಾರಿಕೀಕರಣ ಮುಂತಾದವುಗಳ ಪರಿಣಾಮದಿಂದ ಮಾನವ ಬಹಳ ಶ್ರೀಮಂತನಾಗುತ್ತಾನೆ. ಆದರೆ ಎಷ್ಟೋ ಬಾರಿ ಆ ಶ್ರೀಮಂತಿಕೆ ಮಾನವನಿಗೆ ಆತ್ಮ ಸುಖವನ್ನು ನೀಡಲಾರದು. ಹಳ್ಳಿಯಲ್ಲಿದ್ದು ದುಡಿದು ತಿಂದು ಜೀವನ ನಡೆಸುತ್ತಿದ್ದ ಅಂಬಕ್ಕೆ ಮತ್ತು ಅವರ ಕುಟುಂಬಕ್ಕೆ ಭೂಮಸೂದೆ ಕಾಯಿದೆ ಹೊರತುಪಡಿಸಿ ಬೇರೆ ಯಾವ ಸಮಸ್ಯೆಗಳೂ ಕಾಡಲಿಲ್ಲ. ಆದರೆ ನಗರದ ಜೀವನ ಹಾಗಲ್ಲ. ದುಷ್ಟರ, ಕೆಡುಕರ ಅಟ್ಟಹಾಸದಲ್ಲಿ ಪ್ರಾಣವನ್ನೇ ಉಳಿಸಿಕೊಳ್ಳುವುದು ದುಸ್ತರವಾಗುತ್ತದೆ. ಸುಂದರನ ಸಾವಿನಿಂದ ಗುತ್ತಿನ ಮನೆಯ ವೈಭವ ಮತ್ತೊಮ್ಮೆ ಕುಸಿದು ಬಿದ್ದಂತಾಯಿತು. ಸಂಕಪ್ಪ ಹೆಗ್ಡೆ ಮತ್ತು ಅಂಬಕ್ಕೆ ಮುಂದೆ ಜೀವಚ್ಛವದಂತೆ ಅಲ್ಲಿ ಕಂಡು ಬರುತ್ತಾರೆ.

ಯಾಂತ್ರಿಕ ಯುಗದಲ್ಲಿ ಮಾನವನ ಮನಸ್ಸು, ಮಾತುಗಳೂ ಯಾಂತ್ರಿಕವಾಗುತ್ತವೆ ಎನ್ನುವಂತೆ ರಂಜಿತ್ ಕಂಡು ಬರುತ್ತಾನೆ. ಮಾವ ಸಂಕಪ್ಪ ಹೆಗ್ಡೆ ತೀರಿಕೊಂಡ ಸಂದರ್ಭದಲ್ಲಿ ಆತನ ವರ್ತನೆ ತೀರಾ ವಿಚಿತ್ರವಾಗಿತ್ತು. ಹಣದ ಮದದಿಂದ ಸೊಕ್ಕಿದ ಆತನಿಗೆ ಸಂಬಂಧಗಳು, ಮಾತೃವಾತ್ಸಲ್ಯವೆನ್ನುವುದು ಅರ್ಥಹೀನವೆನಿಸುತ್ತವೆ. ಮಗನನ್ನು ಕಳೆದುಕೊಂಡ ತನ್ನ ತಾಯಿಗೆ ಒಂದು

ಸಾಂತ್ವನದ ಮಾತನಾಡಲು ಆತನಿಗೆ ಬಿಡುವಿಲ್ಲ. ತಾನು, ತನ್ನ ಹೆಂಡತಿ-ಮಕ್ಕಳು ಎಂಬ ಕೋಟೆಯೊಳಗೆ ಆತ ವಿಹರಿಸುತ್ತಿರುತ್ತಾನೆ. ಗುತ್ತು, ಭೂಮಿ, ದೈವ, ದೇವರು ಇವು ಯಾವುದರ ಕಡೆಗೂ ಆತನ ಗಮನವಿಲ್ಲ.

ಮೊಗಸಾಲೆಯವರು ಕಾದಂಬರಿಯಲ್ಲಿ ಹೆಣ್ಣಿಗೆ ಒಂದು ವಿಶೇಷವಾದ ಶಕ್ತಿಯಿದೆ ಎನ್ನುವ ರೀತಿಯಲ್ಲಿ ಚಿತ್ರಿಸುತ್ತಾ ಹೋಗುತ್ತಾರೆ. ಆಧುನಿಕ ಶಿಕ್ಷಣ, ಉದ್ಯೋಗಗಳಿಂದ ಸಂಬಂಧಗಳು ನಾಶವಾಗುತ್ತಿವೆಯೆಂದು ಭಾವಿಸಿದರೂ ಸಂಬಂಧಗಳನ್ನು ಬೆಸೆಯುವ ಕೊಂಡಿಗಳೂ ಇವೆಯೆಂದು ಅವರು ಭಾವಿಸುತ್ತಾರೆ. ಅಲ್ಲದೆ ಆಧುನಿಕ ಶಿಕ್ಷಣವನ್ನು ಪಡೆದರೂ ಅವರು ಮತ್ತೆ ಹಳ್ಳಿಯ ಕಡೆಗೆ ಗಮನ ಕೊಡಬೇಕಾದ ಅನಿವಾರ್ಯತೆಯಿದೆ ಎಂಬುದನ್ನು ಸೂಚಿಸುತ್ತಾರೆ.

ಶಾರದಾಳಿಗೆ ತನ್ನ ಮನೆತನದ ಬಗ್ಗೆ ತುಂಬಾ ಗೌರವದ ಭಾವವಿದೆ. ತಾಯಿಯ ಬಗ್ಗೆ ಪ್ರೀತಿಯಿದೆ. ತನ್ನಿಂದ ಗುತ್ತಿನ ಯಜಮಾನಿಕೆಯನ್ನು ಮುಂದುವರಿಸಲು ಅಸಾಧ್ಯವಾದ ನಷ್ಟವನ್ನು ತನ್ನ ಮಗಳ ಮೂಲಕ ಭರಿಸುವ ಯೋಚನೆ ಮಾಡುತ್ತಾಳೆ. ಮಗಳಿಗೆ ಸಾಂತೇರುಗುತ್ತಿನ ಭೂಮಿ, ಸಂಪ್ರದಾಯಗಳ ಪೂರ್ಣ ಮಾಹಿತಿಯನ್ನು ನೀಡುತ್ತಾಳೆ. ಪ್ರಶಾಂತನ ಕಂಪೆನಿಯ ವಹಿವಾಟುಗಳಿಂದ ಗುತ್ತನ್ನು ಉಳಿಸಿಕೊಳ್ಳುವ ಜವಾಬ್ದಾರಿ ಆಕೆಯ ಪಾಲಿನದು. ಇದು ಆಕೆಯ ಮುಂದೆ ದೊಡ್ಡ ಸವಾಲಾಗಿ ನಿಲ್ಲುತ್ತದೆ.

ಶಾರದಾ ತನ್ನ ಮಗಳು ಪ್ರಜ್ಞಾಳಿಗೆ ಸಾಂತೇರುಗುತ್ತಿನ ವಿಚಾರವಾಗಿ ತಿಳಿಸುತ್ತಾಳೆ. ಇನ್ಫೋಸಿಸ್, ವಿಪ್ರೋ, ಟಾಟಾ ಕನ್ಸಲ್ಟೆನ್ಸಿಯಂತಹ ಕಂಪೆನಿಗಳು ಮತ್ತು ಪಿ.ಸಿ.ಪಿ.ಪಿ.ಆರ್. ಎನ್ನುವ ಸಂಸ್ಥೆಗಳು ಮಂಗಳೂರು ಪರಿಸರವನ್ನು ಎಸ್.ಇ.ಝಡ್. ಯೋಜನೆಗೆ ಸ್ವಾಧೀನ ಪಡಿಸುವ ಪ್ರಕ್ರಿಯೆಯ ಕುರಿತಾಗಿ ತಿಳಿಸುತ್ತಾಳೆ. ಇದರಲ್ಲಿ ಒಂಬತ್ತುಕೆರೆಯೂ ಸೇರುತ್ತದೆ ಮತ್ತು ಪ್ರಶಾಂತ್ ಇದಕ್ಕೆ ಸಹಕರಿಸುತ್ತಿದ್ದಾನೆ ಎಂಬ ವಿಚಾರಗಳನ್ನು ತಿಳಿದು ಪ್ರಜ್ಞಾ ತುಂಬಾ ನೊಂದುಕೊಳ್ಳುತ್ತಾಳೆ. ಕೂಡಲೇ ಸಾಂತೇರುಗುತ್ತಿಗೆ ಬಂದು ಅದರ ವಿರುದ್ಧವಾಗಿ ಕಾರ್ಯಪ್ರವೃತ್ತಳಾಗಲು ತೊಡುಗುತ್ತಾಳೆ. ದುಃಖವೇ ಮಡುಗಟ್ಟಿದ್ದು, ಅಂಬಕ್ಕೆಯನ್ನು ಬಂದು ಅಪ್ಪಿಕೊಂಡಾಗ ಅವಳ ಕಳಾಹೀನ ಮುಖವನ್ನು ನೋಡಿದ ಅವರು ಪ್ರಶ್ನಿಸುತ್ತಾರೆ. ಈ ಸಂದರ್ಭದಲ್ಲಿ ಅಂಬಕ್ಕೆಯ ಮಾತುಗಳು ತುಂಬಾ

ಅರ್ಥಪೂರ್ಣವಾದುದು. "ನಾನು ಹೆಣ್ಣುಮಗಳು ಮಗಳೇ. ಹೆಣ್ಣಿಗೆ ಮಾತ್ರ ಹೆಣ್ಣಿನ ಕಣ್ಣೀರು ಸುಖದ್ದೋ ದುಃಖದ್ದೋ ಎಂದು ಅರ್ಥವಾಗುವುದು. ಗಂಡಿಗಲ್ಲ!" (ಉಲ್ಲಂಘನೆ, ಪುಟ ೩೪೪).

ಅಂಬಕ್ಕೆಯ ಭಾವನೆಗಳನ್ನು ಗುತ್ತಿನ ಮನೆಯಲ್ಲಿ ಅರ್ಥಮಾಡಿಕೊಂಡವರು ಸ್ತ್ರೀಯರು ಮಾತ್ರ, ಮಗನಾಗಲೀ ಮೊಮ್ಮಗನಾಗಲೀ ಅಲ್ಲ. ಆದರೆ ಗುತ್ತಿಗೆ ಬೀಳಬಹುದಾದ ಹೊಡೆತಗಳ ಬಗ್ಗೆ ಅವರು ಅಂಬಕ್ಕೆಗೆ ಹೇಳುವುದಿಲ್ಲ. ಅಜ್ಜಿಗೆ ಮಾತ್ರವಲ್ಲ ಈ ಗುತ್ತಿನ ಒಡೆತನದ ಜವಾಬ್ದಾರಿ ತನಗೂ ಇದೆಯೆಂದು ಪ್ರಜ್ಞಾ ಕಾರ್ಯಪ್ರವೃತ್ತಳಾಗುತ್ತಾಳೆ. ಎಲ್ಲಾ ಸಮಸ್ಯೆಗಳಿಗೆ ತಾನು ಇಷ್ಟಪಟ್ಟ ವ್ಯಕ್ತಿ ಶಾಂತಿರಾಜನಿಂದ ಮಾತ್ರ ಪರಿಹಾರ ಸಿಗಬಹುದೆಂದು ಯೋಚಿಸುತ್ತಾಳೆ.

ಬಿ.ಎಸ್‌ಸಿ. ಎಗ್ರಿಕಲ್ಚರ್ ಓದಿದ್ದ ಶಾಂತಿರಾಜ ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿದ್ದರೂ ಮುಂದೆ ಊರಲ್ಲೇ ಇದ್ದು ಕೃಷಿಯಲ್ಲಿ ಮುಳುಗಿದ್ದ. ಆತನ ರೂಪ, ಮಾತು, ಸ್ವಭಾವ, ವೃತ್ತಿ ಎಲ್ಲವನ್ನೂ ಮೆಚ್ಚಿಕೊಂಡ ಪ್ರಜ್ಞಾಳಿಗೆ ಇದ್ದ ಸಮಸ್ಯೆಯೆಂದರೆ ಆತ ತನ್ನ ಜಾತಿಯವನಲ್ಲ ಎಂಬುದು. ಆದರೆ ಆತನ ಅಮ್ಮನ ಬಾಯಿಯಿಂದಲೇ ಜಾತಿಯ ಕುರಿತಾದ ಅಭಿಪ್ರಾಯಗಳನ್ನು ಕೇಳಿದಾಗ ಆಕೆಗೆ ಧೈರ್ಯ ಬಂದಿತು. "ಬಂಟ ಜೈನ ಎಲ್ಲಾ ಒಂದೇ ಮಗಳೇ. ಜೈನರು ದೊಡ್ಡವಳ ಮಕ್ಕಳಾದರೆ, ಬಂಟರು ಆಕೆಯ ತಂಗಿಯ ಮಕ್ಕಳು ಎನ್ನುತ್ತಿದ್ದರು ನಮ್ಮಮ್ಮ. ಸಸ್ಯಾಹಾರ ಮಾಂಸಾಹಾರ- ಎನ್ನುವ ಪ್ರಭೇದ ಬಿಟ್ಟರೆ ಉಳಿದಹಾಗೆ- ನಾವೂ ನೀವೂ ಒಂದೇ" (ಉಲ್ಲಂಘನೆ, ಪುಟ ೩೩೧). ಹಂತ ಹಂತವಾಗಿ ಆಕೆ ಶಾಂತಿರಾಜನ ಮನೆಯವರ ಸ್ನೇಹವನ್ನು ಗಳಿಸಿಕೊಳ್ಳುತ್ತಾಳೆ.

ಪ್ರಜ್ಞಾಳಿಗೆ ತನ್ನ ಮನಸ್ಸಿನ ಭಾವನೆಗಳಿಗೆಲ್ಲಾ ಜೀವ ತುಂಬುವ ಸವಾಲಿತ್ತು. ಜೊತೆಗೆ ಅದನ್ನು ಸಾಧಿಸಬೇಕೆಂಬ ಛಲವೂ ಇತ್ತು. ಒಂದು ರೀತಿಯ ಭಯ, ಮುಜುಗರ ಅವಳನ್ನು ಹಿಡಿದಿಡುತ್ತಿತ್ತು. ತನ್ನ ವೃತ್ತಿ ಜೀವನವನ್ನು ತಾನು ಸಾಂತೇರುಗುತ್ತಿನಲ್ಲಿಯೇ ಕಳೆಯುವುದಾಗಿ ಹೇಳಿದಾಗ ಅಜ್ಜಿ ಅದನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಶಾಂತಿರಾಜನನ್ನು ತನ್ನ ಅಜ್ಜಿಯ ಅನುಮತಿ ಕೇಳಿ ಗುತ್ತಿಗೆ ಕರೆಸಿಕೊಳ್ಳುತ್ತಾಳೆ. ಯಾವತ್ತೂ ಅವನ ಜೊತೆಗೆ ಗುತ್ತಿನ ಘನತೆಗೆ ಧಕ್ಕೆ ಬರುವಂತೆ

ವರ್ತಿಸುವುದಿಲ್ಲ. ತಾನು ಗೌರವಸ್ಥ ಗುತ್ತಿನ ಮನೆಯ ಹೆಣ್ಮಗಳು ಎಂಬ ಪ್ರಜ್ಞೆ ಅವಳಲ್ಲಿತ್ತು.

ಅಂಬಕ್ಕೆಗೆ ಶಾಂತಿರಾಜನ ಕೃಷಿಯ ಕುರಿತ ಆಸಕ್ತಿ ತುಂಬಾ ಇಷ್ಟವಾಯಿತು. ತನ್ನ ವಂಶವನ್ನು ಮುಂದುವರಿಸಲು ಆತನ ಹಾಗಿರುವ ಒಬ್ಬ ಇರಬೇಕಿತ್ತು ಎಂದೆನಿಸಿತು. “ಅವನಂಥ ಒಬ್ಬ ಹುಡುಗನೂ ಈ ಗುತ್ತಿನಲ್ಲಿ ಹುಟ್ಟಲಿಲ್ಲ. ಆ ಜುಮಾದಿಗೇ ಅದು ಇಷ್ಟ ಇಲ್ಲಾಂತ ಕಾಣುತ್ತದೆ.” (ಉಲ್ಲಂಘನೆ, ಪುಟ ೫೬೦) ಎನ್ನುತ್ತಾರೆ. ಒಂಬತ್ತುಕೆರೆಯು ವಿಶೇಷ ಆರ್ಥಿಕ ವಲಯದ ವ್ಯಾಪ್ತಿಗೆ ಒಳಪಡುತ್ತದೆ ಎಂಬ ವಿಚಾರವನ್ನು ಕೇಳಿದ ಅಂಬಕ್ಕೆ ನೊಂದುಕೊಳ್ಳುತ್ತಾರೆ. ತಾನು ಬೇಡ ಎನ್ನುವ ಹಾಗಿಲ್ಲ. ಕಾರಣ ತನ್ನ ಮಾತಿಗೆ ಈಗ ಮೊದಲಿನ ಬೆಲೆಯಿಲ್ಲ ಎಂಬ ಅರಿವು ಅವರಿಗಿದೆ.

ಜಾಗತೀಕರಣದ ಕುರಿತಾಗಿ ಕಾದಂಬರಿಕಾರರ ನಿಲುವುಗಳು ಶಾಂತಿರಾಜನ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ಪ್ರಜ್ಞಾಳಿಗೆ ಆತ “ಈಗ ಏನು ಆಗುತ್ತಲಿದೆಯೋ ಅದರ ವಿರುದ್ಧ ಹೋರಾಡುವ ಶಕ್ತಿ ನಿಮ್ಮಲ್ಲಾಗಲೀ ನಮ್ಮಲ್ಲಾಗಲೀ ಇಲ್ಲ ಎಂದೇ ನಾವು ಮಾಡಬಹುದಾದದ್ದು ಅಂದರೆ– ಅದನ್ನು ಯಾವ ರೀತಿಯಿಂದಾದರೂ ಎದುರಿಸಲು ಪ್ರಯತ್ನಿಸುವುದು. ಬರೇ ಪ್ರಯತ್ನಿಸುವುದು ಅಷ್ಟೇ. ನಮ್ಮ ಸಂಸ್ಕೃತಿ, ನಮ್ಮ ಭಾಷೆ – ಅಷ್ಟು ಸುಲಭದಲ್ಲಿ ಯಾವತ್ತೂ ಸಾಯುವಂತಹುದಲ್ಲ ಎಂಬ ಧೈರ್ಯ ನನಗಿದೆ. ಒಂದು ವೇಳೆ ಸಾಯುವಾಗಲೂ ಅದು ಇನ್ನೊಂದು ಸಂಸ್ಕೃತಿಯನ್ನು ಹುಟ್ಟುಹಾಕಿ ಅದರೊಳಗೇ ಇರುತ್ತದೆ ಅಂತ ನನಗೆ ಅನಿಸುತ್ತದೆ.” (ಉಲ್ಲಂಘನೆ, ಪುಟ ೫೬೭) ಎನ್ನುತ್ತಾನೆ. ಪ್ರಜ್ಞಾಳಿಗೆ ಶಾಂತಿರಾಜನ ಮಾತನ್ನು ಕೇಳಿ ಗುತ್ತಿನ ಕುರಿತಾಗಿ ಹಲವಾರು ಯೋಚನೆಗಳು ಮೂಡಿದವು. ಈ ಗುತ್ತು, ಈ ಗುತ್ತಿನ ಮನೆ, ಈ ಗುತ್ತಿನ ಸಂಸ್ಕೃತಿ ತನ್ನಿಂದ ತಾನೇ ನಾಶವಾಗುತ್ತದೆ ಎಂದಾದರೆ ಅದನ್ನು ತಾನು ತಡೆಯುವುದು ಸಾಧ್ಯವಿಲ್ಲ ಎಂದು ಯೋಚಿಸುತ್ತಾಳೆ. ತಾನು ಶಾಂತಿರಾಜನನ್ನು ಮದುವೆಯಾದರೆ ಎರಡು ಸಂಸ್ಕೃತಿಗಳ ಮಿಳಿತದಿಂದ ಇನ್ನೊಂದೇ ಸಂಸ್ಕೃತಿಯನ್ನು ಸೃಷ್ಟಿಸಬಹುದೇನೋ, ಆ ಸಂಸ್ಕೃತಿಯಲ್ಲಿ ಈ ಗುತ್ತಿನ ಸಂಸ್ಕೃತಿ ಅಂತರ್ಗತವಾಗಲೂಬಹುದೇನೋ ಎನ್ನುವ ಹೊಸ ವಿಚಾರವೇ ಅವಳಲ್ಲಿ

ಮೂಡಿತು. ಶಾಂತಿರಾಜನ ಜೊತೆಗೆ ಪ್ರಜ್ಞಾಳ ವಿವಾಹಕ್ಕೆ ಅಂಬಕ್ಕೆ ಮತ್ತು ಶಾರದೆಯರ ಸಮ್ಮತಿ ಸಿಗುತ್ತದೆ.

ಬಂಟ ಜನಾಂಗದಲ್ಲಿ ಕುಟುಂಬ ವ್ಯವಸ್ಥೆಯು ಹಿಂದಿನ ರೀತಿಯಲ್ಲಿ ಕಟ್ಟುನಿಟ್ಟಾಗಿ ಉಳಿದಿಲ್ಲ. ಆಧುನಿಕತೆಯ ಪ್ರಕ್ರಿಯೆಯಿಂದ ಮಾತೃರೂಪಿ ವ್ಯವಸ್ಥೆ ತನ್ನ ಸ್ವರೂಪವನ್ನು ಉಳಿಸಿಕೊಳ್ಳಲು ಅಸಾಧ್ಯವಾಗಿದೆ ಎಂಬುದನ್ನು ಕಾದಂಬರಿಕಾರರು ಸೂಚಿಸುತ್ತಾರೆ. ಪ್ರಶಾಂತ ತನ್ನ ಹಕ್ಕಿನ ಭೂಮಿಯನ್ನು ಅಂಬಕ್ಕೆಯಲ್ಲಿ ಕೇಳುತ್ತಾನೆ. ಈ ಕುರಿತಾಗಿ ಶಾರದೆಯ ಗಂಡ ಆಕೆಗೆ "ಈಗ ಕಾಲ ಬದಲಾಗಿದೆ ಶಾರದಾ. ನಮ್ಮ ಸಮಾಜದಲ್ಲೂ ಮಾತೃಪ್ರಧಾನ ಸಂಪ್ರದಾಯವನ್ನು ಯಾರು ಪಾಲಿಸುತ್ತಾರೆ ಹೇಳು? ಎಲ್ಲ ಕುಟುಂಬಗಳೂ ಈಗ ತಾವಾಯಿತು ತಮ್ಮ ಹೆಂಡತಿ ಮಕ್ಕಳಾಯಿತು ಎಂದು ಒಪ್ಪಿಕೊಂಡಿರುವಾಗ ನಮ್ಮ ಸಮಾಜವೂ ಬದಲಾದದ್ದರಲ್ಲಿ ತಪ್ಪಿಲ್ಲ! ಅಲ್ಲದೇ, ನಮ್ಮ ಸಮಾಜದ ಹಿರಿಯರೇ ಈ ಮಾತೃಪ್ರಧಾನ ವ್ಯವಸ್ಥೆಯ ದೋಷಗಳನ್ನೆಲ್ಲಾ ಸರಕಾರದ ಗಮನಕ್ಕೆ ತಂದು ಗಂಡಿಗೂ ಹಿರಿಯರ ಭೂಮಿಯಲ್ಲಿ ಹೆಣ್ಣಿಗೆ ಇರುವಷ್ಟೇ ಹಕ್ಕು ಇರಬೇಕು ಎಂಬ ಬದಲಾವಣೆಯ ಕಾನೂನನ್ನು ಜ್ಯಾರಿಗೊಳಿಸಲು ಕಾರಣರಾಗಿದ್ದಾರೆ ಎನ್ನುವುದು ನಿನಗೂ ಗೊತ್ತು. ಆ ಆಧಾರದಲ್ಲಿ ಈಗ ಪ್ರಶಾಂತ ಸಾಂತೇರುಗುತ್ತಿನ ಭೂಮಿಯಲ್ಲಿ ಹಕ್ಕು ಸ್ಥಾಪನೆಗೆ ಹೊರಟರೆ ತಪ್ಪಿಲ್ಲ ಅನಿಸುತ್ತದೆ ನನಗೆ!"(ಉಲ್ಲಂಘನೆ, ಪುಟ ೫೭೪) ಎಂದು ಹೇಳುತ್ತಾನೆ. ಅದಕ್ಕೆ ಶಾರದೆ "ಗುತ್ತಿನ ಹೆಣ್ಮಕ್ಕಳ ಮನೋಸ್ಥಿತಿ ಅಷ್ಟು ಪಕ್ಕನೆ ಬದಲಾಗುವುದಿಲ್ಲರೀ, ನಿಮಗೆ ಅದು ಅರ್ಥ ಆಗುವಂಥದಲ್ಲ." (ಉಲ್ಲಂಘನೆ, ಪುಟ ೫೭೪) ಎಂದು ಉತ್ತರಿಸುತ್ತಾಳೆ. ಶಾರದೆ ಮುಂಬಯಿಗೆ ಹೋದರೂ ಹಳೆಯ ಕ್ರಮಗಳಿಂದ ಬದಲಾವಣೆ ಪಡೆದಿಲ್ಲ. ಆದರೆ ಅವಳ ತಾಯಿ ಹಳ್ಳಿಯಲ್ಲಿದ್ದರೂ ಸಾಕಷ್ಟು ಬದಲಾಗಿದ್ದಾರೆ ಎಂದು ರಮಾನಂದ ಹೆಂಡತಿಗೆ "ನೀನು ಮತ್ತೆ ಹಳೆಕಾಲಕ್ಕೆ ಹೋಗುತ್ತಿದ್ದಿ. ಆದರೆ ನಿನ್ನಮ್ಮ ಹೊಸಕಾಲಕ್ಕೆ ಒಪ್ಪಿಕೊಳ್ಳಲು ಸಿದ್ಧರಾಗುತ್ತಿದ್ದಾರೆ"(ಉಲ್ಲಂಘನೆ, ಪುಟ ೫೭೪) ಎನ್ನುತ್ತಾನೆ.

ಶಾರದೆಗೆ ತನ್ನ ಗುತ್ತಿನ ಬಗ್ಗೆ ತುಂಬಾ ವಿಶ್ವಾಸ. ಆದರೆ ರಮಾನಂದನಿಗೆ ಆ ವಿಶ್ವಾಸ ಇಲ್ಲ. ಗುತ್ತಿನ ಭವಿಷ್ಯದ ಬಗ್ಗೆ ಅಂಬಕ್ಕೆಯ ನಿಲುವುಗಳನ್ನು ಅವರ

ಮಾತಿನಿಂದ ತಿಳಿಯಬಹುದು. ಕಾಲ ಕಾಲಕ್ಕೆ ಯಾವ್ಯಾವುದು ಆಗಬೇಕೋ ಅದು ಆದಾಗಲೇ ಅಲ್ಲಿ ಸೊಗಸು ಎನ್ನುತ್ತಾರೆ. ಶಾರದೆ ಮುಂಬಯಿಯಿಂದ ಮಧ್ಯಾಹ್ನ ಬರಬೇಕಾದವರು ಸಂಜೆ ಬಂದಾಗ ಅಂಬಕ್ಕೆ, "ನಾನಿಲ್ಲಿ ಅಡಿಗೆ ಮಾಡಿಸಿಟ್ಟಿದ್ದೇನೆ. ಅದೆಲ್ಲ ಸಂಜೆಗೆ ಸಪ್ಪಗಾಗಿ ರುಚಿ ಕೆಡುತ್ತದೆ." (ಉಲ್ಲಂಘನೆ, ಪುಟ ೩೭೭) ಎನ್ನುತ್ತಾರೆ. ತನ್ನ ನಂತರ ಗುತ್ತಿನ ಒಡೆತನವನ್ನು ಶಾರದೆ ಮುಂದುವರಿಸದೇ ಇರುವ ಕೊರಗು ಅವರ ಮನದಲ್ಲಿದೆ. ಶಾರದೆ ಗುತ್ತಿನ ಮನೆಗೆ ಬಂದಾಗ ಅಂಬಕ್ಕೆ ಅವಳನ್ನು ಸ್ವಾಗತಿಸಲು ಮುಂದೆ ಬರುತ್ತಾಳೆ. ಆಗ ಶಾರದೆ ಹೇಳುವ ಮಾತು "ನೀನ್ಯಾಕಮ್ಮಾ ಮುಂದೆ ಬರುತ್ತೀ? ನಾನೇ ಬರುತ್ತಿದ್ದೇನಲ್ಲಾ ನೀನಿದ್ದಲ್ಲಿಗೆ" (ಉಲ್ಲಂಘನೆ, ಪುಟ ೩೭೭) ಎನ್ನುವಲ್ಲಿ ಶಾರದಾಳಿಗೆ ಗುತ್ತನ್ನು ಉಳಿಸಬೇಕೆನ್ನುವ ನಿಲುವು ಇರುವುದು ವ್ಯಕ್ತವಾಗುತ್ತದೆ. ಮಗಳನ್ನು ಸಂಜೆಯಾದರೂ ಊಟ ಮಾಡು ಎಂದು ಹೇಳಿದಾಗ ಶಾರದೆಗೆ ಅದು ಸಮ್ಮತವಾಗಲಿಲ್ಲ. ತಾಯಿಯ ಇಷ್ಟದಂತೆ ನಡೆದುಕೊಳ್ಳಲು ಅವಳಿಗೆ ಸಾಧ್ಯವಾಗುವುದಿಲ್ಲ ಎನ್ನುವುದೂ ಇದರಿಂದ ತಿಳಿದು ಬರುತ್ತದೆ.

ಅಂಬಕ್ಕೆ ಪ್ರಶಾಂತನ ಕುರಿತು ಬಹಳ ಒಳ್ಳೆಯ ಭಾವನೆ ತಾಳಿದ್ದರು. ತನ್ನ ಅಪ್ಪನಿಗೆ ಸಲ್ಲುವ ಜಾಗದಲ್ಲಿ ತಾನು ಸಾಂತೇರುಗುತ್ತಿನಂತಹ ಇನ್ನೊಂದು ಗುತ್ತನ್ನು ಕಟ್ಟುತ್ತೇನೆ ಎಂಬ ಮಾತನ್ನು ಕೇಳಿದ ಅಂಬಕ್ಕೆ ಎಷ್ಟಾದರೂ ತನ್ನ ಮೊಮ್ಮಗನಲ್ಲವೇ ಎಂದು ಅವನ ಬಗ್ಗೆ ಹೆಮ್ಮೆ ಪಟ್ಟುಕೊಂಡರು. ಅವನಿಗೂ ಪಾಲು ಕೊಡುತ್ತೇನೆ ಎಂದು ಯೋಚಿಸುತ್ತಾರೆ.

ಕಾದಂಬರಿಯ ಕೊನೆಯಲ್ಲಿ ಶಾರದಾಳು ತನ್ನ ತಾಯಿಯ ಜೊತೆ ಮಾತನಾಡುತ್ತಿರುವಾಗ ಶಾರದೆಯ ತಲೆಯ ಮೇಲೆ ಗೆದ್ದಲ ಮಣ್ಣು ಬೀಳುತ್ತದೆ. ಚಾವಡಿಗೆ ಹೊದಿಸಿದ ಹಲಗೆಗಳ ನಡುವೆ ಗೆದ್ದಲು ಕಾಣಿಸಿಕೊಂಡಿತು. ಗುತ್ತಿನ ಮನೆಯ ಹಿಂದಿನ ಸಂಪ್ರದಾಯಗಳೆಲ್ಲಾ ಈಗ ಗೆದ್ದಲು ಹಿಡಿದಂತಾಗಿದೆ. ಚಾವಡಿಗೆ ಹೊಸ ಹೊದಿಕೆಯನ್ನು ಇನ್ನು ಮುಂದೆ ಹಾಕಬೇಕಾದುದರ ಸೂಚನೆಯಿದು. ಅದೇ ರೀತಿ ಮಾತೃಪ್ರಧಾನ ಸಂಪ್ರದಾಯಗಳ ನಿಯಮಗಳೂ ಈಗ ಗೆದ್ದಲು ಹಿಡಿದು ಅದರಲ್ಲಿ ಬದಲಾವಣೆಯನ್ನು ಮಾಡಿಕೊಂಡು ಬದುಕುವುದು ಅನಿವಾರ್ಯ.

ಕಾಲಗತಿಯೊಂದಿಗೆ ಬದುಕುತ್ತಾ ನಾವೂ ಹೆಜ್ಜೆಹಾಕಬೇಕಾಗುತ್ತದೆ. ಅಂಬಕ್ಕೆಯಂತಹ ಹೆಣ್ಣು ಬದಲಾಗಬೇಕಾದರೆ ಸಮಾಜದಲ್ಲಿ ಯಾವುದೂ ಬದಲಾಗದೇ ಇರುವುದಕ್ಕೆ ಸಾಧ್ಯವೇ ಇಲ್ಲ. ಇದು ಕಾದಂಬರಿಕಾರರ ಆಶಯವೂ ಹೌದು.

ಅಧ್ಯಾಯ ೭

ಅಧ್ಯಯನದ ಫಲಿತಗಳು

ಅಧ್ಯಾಯ ೩ ಅಧ್ಯಯನದ ಫಲಿತಗಳು:

ಮಾತೃರೂಪಿ ಸಂಸ್ಕೃತಿಯ ಚಿತ್ರಣದೊಂದಿಗೆ ಸ್ತ್ರೀ ಜಗತ್ತು ಏನು ಪ್ರಾಬಲ್ಯವನ್ನು ಪಡೆದುಕೊಂಡಿದೆ ಎಂಬ ವಿವರಗಳೊಂದಿಗೆ ಮಹಿಳಾ ಜಗತ್ತನ್ನು ಕಟ್ಟಿಕೊಡುವ ಕೆಲಸವನ್ನು ಕಾದಂಬರಿಕಾರರು ಬಲು ಸೊಗಸಾಗಿಯೇ ಮಾಡಿದ್ದಾರೆ. ಹೆಣ್ಣು ತನ್ನ ಆತ್ಮಬಲದಿಂದ ಒಂದು ಸಮಾಜದ ಸಂಸ್ಕೃತಿಯನ್ನು ಮುನ್ನಡೆಸಿಕೊಂಡು ಹೋಗುತ್ತಾಳೆ ಮತ್ತು ಪುರುಷ ಪ್ರಭುತ್ವದಿಂದ ಸ್ತ್ರೀ ಬಿಡುಗಡೆಗೊಳ್ಳಬೇಕೆಂಬ ನಿಲುವು ಅವರದು.

ಉಲ್ಲಂಘನೆ ಕಾದಂಬರಿಯಲ್ಲಿ ಬೇರೆ ಬೇರೆ ಜಾತಿಗಳ ಕೌಟುಂಬಿಕ ವಿವರಗಳು ನಿರ್ದಿಷ್ಟವಾದ ಪರಿಸ್ಥಿತಿಯನ್ನು ಅನಾವರಣ ಮಾಡುವ ಸಲುವಾಗಿ ಕಾಣಿಸಿಕೊಳ್ಳುತ್ತವೆ. ಬದುಕಿನಲ್ಲಿ ಎದುರಾಗುವ ಬಿಕ್ಕಟ್ಟಿನ ಸನ್ನಿವೇಶಗಳಿಗೆ ಕುಟುಂಬದ ಸದಸ್ಯರು ಪ್ರತಿಕ್ರಿಯಿಸುವ ರೀತಿ ಕುಟುಂಬದ ಭಾವನಾತ್ಮಕ ಸಂಬಂಧದಲ್ಲಿ ಮುಖ್ಯವಾಗುತ್ತದೆ. ಕುಟುಂಬವು ಎದುರಿಸುವ ಪರಿಸ್ಥಿತಿಯ ಮೇಲೆ ಅದರ ಸಂಬಂಧ ಮೌಲ್ಯಗಳು ನಿರ್ಧಾರವಾಗುತ್ತವೆ. ಈ ಸಂಬಂಧಗಳು ಋಣಾತ್ಮಕವಾಗಿರಬಹುದು ಅಥವಾ ಧನಾತ್ಮಕವಾಗಿರಬಹುದು. ಆದರೆ ಕುಟುಂಬ ಇದನ್ನು ಹಲವು ನೆಲೆಗಳಲ್ಲಿ ಒಪ್ಪಿಕೊಳ್ಳುತ್ತದೆ.

ಪರಂಪರಾಗತ ರೂಢಿ ನಿಯಮಗಳು ಆಚರಣೆಗಳು ಕುಟುಂಬದಿಂದ ಪೋಷಿತವಾಗುತ್ತವೆ. ಕಾದಂಬರಿಯಲ್ಲಿ ಸಮೃದ್ಧವಾದ ಗ್ರಾಮೀಣ ಬದುಕಿನ ಚಿತ್ರಣ ಸಿಗುತ್ತದೆ. ಕೃಷಿ, ದೈವಗಳ ಆರಾಧನೆ, ಕಂಬಳ, ಯಕ್ಷಗಾನ ಮತ್ತು ಇನ್ನೂ ಹಲವಾರು ವಿಚಾರಗಳು ಕಾದಂಬರಿಯುದ್ದಕ್ಕೂ ಬರುತ್ತವೆ. ಬಂಟ ಜನಾಂಗದ ಮಾತ್ರವಲ್ಲ ಇಡಿ ಕರಾವಳಿ ತೀರದ ವಿಶಿಷ್ಟವಾದ ಆಚರಣೆಗಳು ಇಲ್ಲಿ ದಾಖಲಾಗಿವೆ. ಬೀಡಿ ಉದ್ಯಮ, ಕಳ್ಳಿನ(ಸೇಂದಿ) ಉದ್ಯಮಗಳು ಆರಂಭಗೊಂಡು ಕೃಷಿಯ ಹಿನ್ನಡೆಯಾಗುತ್ತದೆ. ಕಾದಂಬರಿಯ ಕೊನೆಯಲ್ಲಿ ವಿಶೇಷ ಆರ್ಥಿಕ ವಲಯದ ಪರಿಣಾಮಗಳು ಮತ್ತು ಜನರ ಸ್ಪಂದಿಸುವಿಕೆಯ ರೀತಿಗಳು ಅನಾವರಣಗೊಂಡಿವೆ.

ಮೊಗಸಾಲೆಯವರು ಪಾತ್ರಗಳನ್ನು ಕೇವಲ ಪ್ರಕೃತಿ ನಿಷ್ಠರನ್ನಾಗಿ ಅಥವಾ ಸಂಸ್ಕೃತಿ, ಸಂಪ್ರದಾಯ ನಿಷ್ಠರನ್ನಾಗಿ ತೋರಿಸುವುದಿಲ್ಲ. ಈ ಎರಡೂ ಕ್ಷೇತ್ರಗಳಲ್ಲಿಯ

ವೈರುಧ್ಯಗಳನ್ನು ತೋರಿಸುವ ಮೂಲಕ ಮಾನವನ ಸ್ವಭಾವದ ಬಗ್ಗೆ, ಅವನ ಸಂಸ್ಕೃತಿಯ ಬಗ್ಗೆ ನಾವು ಚಿಂತಿಸುವಂತೆ ಮಾಡುತ್ತಾರೆ. ರಚನೆಯ ದೃಷ್ಟಿಯಿಂದ ಉಲ್ಲಂಘನೆ ಕಾದಂಬರಿಯಲ್ಲಿ ಮೂರು ಭಾಗಗಳನ್ನು ಗುರುತಿಸಬಹುದು. ಈ ಮೂರೂ ಭಾಗಗಳ ಪ್ರಾರಂಭದಲ್ಲಿಯೂ ಕಾದಂಬರಿಕಾರರು ಒಂದೊಂದು ತುಳು ಪಾಡ್ದನಗಳನ್ನು ಬಳಸಿಕೊಂಡಿದ್ದಾರೆ. ಪಾಡ್ದನಕ್ಕೂ ಆ ಭಾಗಗಳಿಗೂ ಇರುವ ಸಂಬಂಧ ಯಾವ ರೀತಿಯದೆಂದು ಪರೀಕ್ಷಿಸಿದಾಗ ಕಾದಂಬರಿಯ ಆಶಯ ಸ್ಪಷ್ಟವಾಗುತ್ತದೆ. ಮೊದಲನೆಯ ಪಾಡ್ದನದಲ್ಲಿ ಗುತ್ತಿನ ಮನೆಯ ಭೂತಕಾಲದ ವೈಭವಗಳನ್ನು ಮುನ್ನಡೆಸುವ ಪ್ರಯತ್ನವಿದೆ. ಜೊತೆಗೆ ಜುಮಾದಿ ದೈವದ ಬೆಂಬಲವೂ ತಮಗಿದೆ ಎಂಬ ವಿಶ್ವಾಸವಿದೆ. ಎರಡನೆಯ ಪಾಡ್ದನದಲ್ಲಿ ಹಳೆಯ ನೆನಪುಗಳೊಂದಿಗೆ ಹೊರಟ ಜನರಿಗೆ ಮುಂದಿನ ದಾರಿಯ ಕುರಿತು ಖಚಿತತೆ ಇಲ್ಲ. ತಮಗೆ ಬೆಂಗಾವಲಾಗಿ ಇದ್ದ ಜುಮಾದಿ ದೈವದ ಬೆಂಬಲವೂ ದೂರವಾಗಿದೆ. ಮೂರನೆಯ ಪಾಡ್ದನದಲ್ಲಿ ಲಯಬದ್ಧವಾದ ಜೀವನವು ಅಸ್ತವ್ಯಸ್ತಗೊಂಡು ಏಕಾಂಗಿತನದ ಜೀವನ ಎದುರಾಗುತ್ತದೆ. ಆಧುನಿಕತೆಯ ಪ್ರವೇಶವಾಗುತ್ತಾ ಗುತ್ತಿನ ಮನೆಯ ಅನಿವಾರ್ಯವಾದ ಬದಲಾವಣೆಗಳ ಚಿತ್ರಣವು ಇಲ್ಲಿ ಧ್ವನಿತವಾಗಿದೆ.

ಹಲವು ಘಟನೆಗಳ, ವ್ಯಕ್ತಿಗಳ ಲಘುವಾದ ವಿಡಂಬನೆ ಈ ಕಾದಂಬರಿಯಲ್ಲಿದೆ. ನಶಿಸುತ್ತಿರುವ ಹಸಿರು ಸಂಪನ್ಮೂಲದ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸುತ್ತಾರೆ. ಗುತ್ತಿನ ಸಂಸ್ಕೃತಿಯನ್ನು, ಆಚಾರ-ವಿಚಾರಗಳನ್ನು ಮಾತ್ರವಲ್ಲ, ಗುತ್ತಿಗೆ ಸಂಬಂಧಪಟ್ಟ ಆಸ್ತಿ-ಪಾಸ್ತಿಗಳನ್ನು ಉಳಿಸಿಕೊಳ್ಳುವ ಜವಾಬ್ದಾರಿ ಇಂದಿನ ಪೀಳಿಗೆಯದು. ಅದಕ್ಕೆ ಸಂಬಂಧಪಟ್ಟವರು ಆತ್ಮನಿರೀಕ್ಷಣೆ ಮಾಡಿಕೊಡು ತಮ್ಮ ಜವಾಬ್ದಾರಿ ಮತ್ತು ಕರ್ತವ್ಯವನ್ನು ಸರಿಯಾಗಿ ನಿಭಾಯಿಸಬೇಕು, ಇದಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧರಾಗಲೇ ಬೇಕಾಗುತ್ತದೆ ಎಂದು ಕಾದಂಬರಿಕಾರರು ಭಾವಿಸುತ್ತಾರೆ. ಇವೆಲ್ಲಾ ಕಾದಂಬರಿಯ ವಸ್ತುವನ್ನು ಸಮಕಾಲೀನಗೊಳಿಸುವ ಪ್ರಯತ್ನವಾಗಿವೆ.

ಕಾದಂಬರಿಯ ವಸ್ತು ಮತ್ತು ನಿರೂಪಣಾ ಶೈಲಿ ಬಹಳ ಆಪ್ತವಾದುದು. ಸೃಜನಶೀಲ ಪ್ರಕ್ರಿಯೆಯ ಕುರಿತು ಚಿಂತಿಸುವ ರೀತಿಯಲ್ಲಿ ಇದು ಬೆಳೆಯುತ್ತಾ ಹೋಗುತ್ತದೆ, ಓದುಗನಲ್ಲಿ ಕುತೂಹಲವನ್ನು ಉಂಟುಮಾಡುವ ರೀತಿಯಲ್ಲಿ ಇದೆ. ಮೊಗಸಾಲೆಯವರು ಈ ಕಾದಂಬರಿಯಲ್ಲಿ ಕನ್ನಡ ಮತ್ತು ತುಳು ದ್ವಿಭಾಷೆಗಳನ್ನು

ಜೊತೆಯಾಗಿ ಬಳಸಿಕೊಂಡಿದ್ದಾರೆ. ಬಂಟ ಜನಾಂಗದ ಕೆಲವು ಸಂಪ್ರದಾಯಗಳು, ಆಚರಣೆಗಳು, ವಸ್ತುಗಳನ್ನು ತುಳುವಿನಲ್ಲೇ ಹೇಳುವ ಮೂಲಕ ಅದಕ್ಕೆ ಹೆಚ್ಚು ಅರ್ಥ ಬರುವಂತೆ ಮಾಡಿದ್ದಾರೆ. ಪೀಳಿಗೆಯಿಂದ ಪೀಳಿಗೆಗೆ ಭಾಷೆಯು ಬದಲಾಗುತ್ತಾ ಹೋಗುತ್ತದೆ. ಇದು ಕಾದಂಬರಿಕಾರರ ಭಾಷಾ ಪ್ರೌಢಿಮೆಯನ್ನು ಅನಾವರಣಗೊಳಿಸುತ್ತದೆ. ತನ್ನದಲ್ಲದ ಬಂಟ ಜಾತಿಯ ನಂಬಿಕೆ, ಆಚರಣೆ ಮತ್ತು ಕೌಟುಂಬಿಕತೆಗಳ ಆಳಕ್ಕಿಳಿದು ಯಥಾವತ್ತಾಗಿ ಚಿತ್ರಿಸುವ ಮುಖೇನ ಕಾದಂಬರಿಯುದ್ದಕ್ಕೂ ಕಾದಂಬರಿಕಾರರು ಪರಕಾಯ ಪ್ರವೇಶ ಮಾಡಿದ್ದಾರೆ.

ಗುತ್ತಿನ ಒಡತಿಗೆ ಮೂರು ರೀತಿಯ ಸವಾಲುಗಳು ಇಲ್ಲಿ ಕಾಣಿಸಿಕೊಳ್ಳುತ್ತವೆ. ಮೊದಲನೆಯದು ಗುತ್ತಿನ ಸಂಪ್ರದಾಯವನ್ನು ಉಳಿಸಿಕೊಳ್ಳುವುದು. ಎರಡನೆಯದು ಮನೆಗೆ ಬರುವ ಕೂಲಿಯಾಳುಗಳನ್ನು ಒಲಿಸಿಕೊಳ್ಳುವುದು. ಮೂರನೆಯದು ಆಧುನಿಕ ವಿದ್ಯಮಾನಗಳ ಹೊಡೆತವನ್ನು ಎದುರಿಸುವುದು. ಈ ಮೂರು ಸವಾಲುಗಳನ್ನು ಎದುರಿಸುತ್ತಾ ಮುನ್ನಡೆಯಬೇಕಾದ ಸಂದರ್ಭಗಳಲ್ಲಿ ನಾನಾ ರೀತಿಯ ಸಾಂಸ್ಕೃತಿಕ ಏರುಪೇರುಗಳು ಉಂಟಾಗುತ್ತವೆ. ಕಾದಂಬರಿಕಾರರು ಇದನ್ನು ನಿರ್ವಹಿಸಿರುವ ರೀತಿ ಅನನ್ಯವಾದುದು. ಅವರದೇ ಆದ ಛಾಪನ್ನು ಇದು ಒಳಗೊಂಡಿದೆ. ಮಾನವ ಸಂಬಂಧಗಳ ಸಂಕೀರ್ಣತೆಯನ್ನು ಹೇಳುತ್ತಾ ಧರ್ಮ, ಜಾತಿ, ವರ್ಗ ಸಂಘರ್ಷಗಳ ಕುರಿತಾಗಿಯೂ ಇಲ್ಲಿ ಸ್ಪಂದಿಸಿದ್ದಾರೆ. ಈ ಸಮಸ್ಯೆಗಳ ಸೂಕ್ಷ್ಮತೆಗಳ ಕಡೆಗೆ ಗಮನ ನೀಡುತ್ತಾ ಪರಿಹಾರವನ್ನು ಕಂಡುಕೊಳ್ಳುವ ನೆಲೆಯಲ್ಲಿ ಕಾದಂಬರಿಯ ಓಘವಿದೆ.

ಮೊಗಸಾಲೆಯವರು ತಾನು ಬೆಳೆದ ವಾತಾವರಣದ ಚಿತ್ರಣಗಳನ್ನೇ ಈ ಕಾದಂಬರಿಯಲ್ಲಿ ನಿರೂಪಿಸುತ್ತಾರೆ. ತನ್ನ ಅನುಭವಗಳನ್ನು ಕಾದಂಬರಿಯ ವಸ್ತುವಿನೊಂದಿಗೆ ಹೊಸೆಯುತ್ತಾ ಮತ್ತೆ ಹೊಸದನ್ನು ಸೃಷ್ಟಿಸುವುದರಲ್ಲಿ ಅವರ ಆಸಕ್ತಿಯು ಮೂಡಿಬಂದಿದೆ. ಅವರದು ಒಂದು ರೀತಿಯ ಹೋರಾಟದ ಬದುಕು. ಕಾದಂಬರಿಯ ಪ್ರಮುಖ ಪಾತ್ರವಾದ ಅಂಬಕ್ಕೆಯ ಪಾತ್ರವೂ ಅದೇ ರೀತಿ ಕಂಡುಬರುತ್ತದೆ. ಎಂತಹ ಬಿಕ್ಕಟ್ಟಿನ ಸನ್ನಿವೇಶ ಎದುರಾದಾಗಲೂ ತನ್ನ ಘನತೆಯನ್ನೂ ಆತ್ಮ ವಿಶ್ವಾಸವನ್ನೂ ಕಳೆದುಕೊಳ್ಳದೆ ಗುತ್ತಿನ ಜವಾಬ್ದಾರಿಯನ್ನು ಸಸೂತ್ರವಾಗಿ ನಡೆಸುವ ಪ್ರಯತ್ನವನ್ನು ಅಂಬಕ್ಕೆ ಮಾಡುತ್ತಾರೆ.

ಕಾದಂಬರಿಯುದ್ದಕ್ಕೂ, ಸ್ತ್ರೀ ಪಾತ್ರಗಳು ಕಾಲ ಕಾಲಕ್ಕೆ ಉಂಟಾಗುವ ಬದಲಾವಣೆಗಳನ್ನು ಮೊದಲು ವಿರೋಧಿಸಿದರೂ ಕೊನೆಗೆ ಅದನ್ನು ಒಪ್ಪಿ ಅನುಸರಿಸಿಕೊಂಡು ಹೋಗುತ್ತವೆ. ಇಲ್ಲಿ ಸ್ತ್ರೀ ಪ್ರಧಾನವಾದರೂ ಗುತ್ತಿನ ಯಜಮಾನನ ಮಾತುಗಳೇ ಹೆಚ್ಚು ನಿರ್ಣಾಯಕವಾಗಿರುವುದನ್ನು ಗಮನಿಸಬಹುದು. ಒಂದೇ ಕಾಲಘಟ್ಟದಲ್ಲಿ ಜೀವಿಸುತ್ತಿರುವ ಗಂಡಿನ ಚಿಂತನೆಗಳಿಗೂ, ಹೆಣ್ಣಿನ ಚಿಂತನೆಗಳಿಗೂ ಸಾಕಷ್ಟು ವ್ಯತ್ಯಾಸಗಳು ಕಂಡುಬರುತ್ತವೆ. ಹಳೆಯ ಮಾದರಿಯಲ್ಲೇ ಬದುಕಬೇಕೆಂಬ ಹೆಣ್ಣಿನ ಹಂಬಲ ಮತ್ತು ಹೊಸ ಹೊಸದನ್ನು ಅಳವಡಿಸಿಕೊಳ್ಳುತ್ತಾ ಬದಲಾಗಬೇಕೆಂಬ ಗಂಡಿನ ಹಂಬಲಗಳ ಮೇಲಾಟದ ಕೊನೆಯಲ್ಲಿ ಗಂಡಿನ ಚಿಂತನೆಗಳೇ ಶ್ರೇಷ್ಠವೆನಿಸಿಕೊಳ್ಳುತ್ತವೆ. ವಾಸ್ತವದಲ್ಲಿ ಇದು ಒಪ್ಪಿಕೊಳ್ಳಬೇಕಾದ ಸತ್ಯವೂ ಹೌದು.

ಮೊಗಸಾಲೆಯವರು ತಮ್ಮ ಕಾದಂಬರಿಯಲ್ಲಿ ರಾಜಕೀಯ, ಸಾಮಾಜಿಕ ವಿಷಯಗಳು, ಕೌಟುಂಬಿಕ ಅಸ್ಪೃಶ್ಯತೆ ಮುಂತಾದ ಸಮಸ್ಯೆಗಳಿಗೆ ಸ್ಪಂದಿಸುವುದನ್ನು ಕಾಣಬಹುದು. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತದ ಸಾಮಾಜಿಕ ಸ್ಥಿತಿ ಗತಿಗಳಿಗೆ ಪ್ರತಿಕ್ರಿಯಿಸಿದ್ದಾರೆ. ಗಾಂಧಿವಾದಿಯಾದ ಸಂಕಪ್ಪ ಕೆಳವರ್ಗದವರ ಗೇಣಿದಾರರಿಗೆ ಮಾಡುವ ಸಹಾಯ, ನೋಡುವ ದೃಷ್ಟಿಕೋನ ಸಮಾಜಮುಖಿಯಾದುದು. ಕಾದಂಬರಿಕಾರರ ಮಾನವೀಯವಾದ ಚಿಂತನೆ ಇಲ್ಲಿ ಎದ್ದು ಕಾಣುತ್ತದೆ.

ಕಾದಂಬರಿಯಲ್ಲಿ ಸರ್ವಧರ್ಮ ಸಮನ್ವಯದ ಪರಿಕಲ್ಪನೆಯನ್ನು ಕಾಣಬಹುದು. ಹಿಂದು, ಕ್ರೈಸ್ತ, ಮುಸಲ್ಮಾನ ಎಲ್ಲಾ ಧರ್ಮಗಳವರು ಗುತ್ತಿನ ಜೊತೆಗೆ ಇಟ್ಟುಕೊಂಡಿರುವ ಬಾಂಧವ್ಯ ಹಾಗೂ ವಿಶ್ವಾಸ ಇವು ಗುತ್ತಿನ ಶ್ರೇಷ್ಠತೆಯನ್ನು ಸಾರುತ್ತವೆ. ಇದು ಆಧುನಿಕ ಮೌಲ್ಯವಾದ ಸಮಾನತೆಗೆ ಇಂಬುಕೊಡುವ ಅಂಶ ಮಾತ್ರವಲ್ಲದೆ ಕಾದಂಬರಿಕಾರರ ದೃಷ್ಟಿಯೂ ಹೌದು. ಮೂಲದಾಳುಗಳಾಗಲೀ, ಗೇಣಿದಾರರಾಗಲೀ ಗುತ್ತಿನಿಂದ ದೂರವಾದರೂ ಬೇರೆ ಬೇರೆ ಕಾರಣದಿಂದ ಗುತ್ತು ಅವರನ್ನು ಮತ್ತೆ ಆಕರ್ಷಿಸುತ್ತದೆ. ಏನೇ ಸಮಸ್ಯೆಗಳು ಎದುರಾದಾಗಲೂ ಅವರಿಗೆ ಮೊದಲು ನೆನಪಾಗುವುದು ಸಾಂತೇರುಗುತ್ತು. ಈ

ರೀತಿಯಲ್ಲಿ ಗುತ್ತು ಇವರಿಗೆಲ್ಲಾ ಮಾನಸಿಕ ತೃಪ್ತಿಯ ಭಾವಕೇಂದ್ರವಾಗಿ ಕಾರ್ಯಾಚರಿಸುತ್ತದೆ.

ಪ್ರಶಾಂತವಾದ ಪ್ರಕೃತಿ ಸಾನ್ನಿಧ್ಯದ ಸವಿಯನ್ನುಂಡು ಬದುಕುತ್ತಿದ್ದ ಗುತ್ತಿನ ಮನೆಯ ಜೀವನದ ಮೇಲೆ ಉಂಟಾಗುವ ಆಘಾತಗಳೇ ಕಾದಂಬರಿಯ ಮೂಲ ದ್ರವ್ಯ. ಗಾಂಧೀಜಿಯವರಿಂದ ವಿಶೇಷವಾಗಿ ಪ್ರಭಾವಿತರಾದ ಸಂಕಪ್ಪ ಹೆಗ್ಡೆ ಮೊದಲಿಗೆ ಗುತ್ತಿನ ಸಂಪ್ರದಾಯಗಳನ್ನು ಉಲ್ಲಂಘಿಸುತ್ತಾರೆ. ಕ್ರಮೇಣ ಎಲ್ಲಾ ರೀತಿಯ ಬದಲಾವಣೆಗಳಿಗೆ ಹೊಂದಿಕೊಂಡು ಹೋಗುವ ಮೂಲಕ ಅಂಬಕ್ಕೆಯೂ ಗುತ್ತಿನ ಸಂಪ್ರದಾಯಗಳನ್ನು ಮೀರುತ್ತಾರೆ. ತನ್ನ ಭೂಮಿಯನ್ನು ಮಕ್ಕಳು ಮೊಮ್ಮಕ್ಕಳಿಗೆ ಸಮಾನವಾಗಿ ಹಂಚುವ ಯೋಚನೆಯ ಮೂಲಕ ಬಂಟ ಜನಾಂಗದ ಮಾತೃರೂಪಿ ಸಂಸ್ಕೃತಿಯ ಉಲ್ಲಂಘನೆಯೇ ಆಗುತ್ತದೆ. ಜಾತಿಯ ಮಡಿ ಮೈಲಿಗೆಯನ್ನು ಬಿಟ್ಟು ಬಿಟ್ಟು ಮೂಲದಾಳು ಕೊರಗ, ಕರ್ಗಿಯರೇ ತನ್ನವರು ಎನ್ನುವವರೆಗೆ ಪರಿವರ್ತನೆಗೊಳ್ಳುತ್ತಾರೆ. ನಗರ ಜೀವನವೇ ಮೇಲು ಎಂದು ಹೇಳಿಕೊಂಡರೂ ಗುತ್ತನ್ನು ಬಿಟ್ಟು ಬದುಕುವ ಶಕ್ತಿ ಅವರಲ್ಲಿಲ್ಲ. ಜೀವನಾವರ್ತನ ಮತ್ತು ವಾರ್ಷಿಕಾವರ್ತನದಲ್ಲಿ ಆಚರಿಸುತ್ತಿದ್ದ ಹಲವಾರು ಸಂಪ್ರದಾಯಗಳು ಮುಂದಿನ ಪೀಳಿಗೆಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ. ಗಾಂಧಿವಾದದಲ್ಲಿ ಅಡಕಗೊಂಡಿರುವ ಅಸ್ಪೃಶ್ಯತಾ ನಿವಾರಣೆ, ಸಹಕಾರ ಮನೋಭಾವ, ಸಮಾಜ ಸುಧಾರಣೆ ಇವೆಲ್ಲವನ್ನೂ ಗುತ್ತು ಮುಂದೆ ಒಪ್ಪಿಕೊಳ್ಳಲೇಬೇಕಾಗುತ್ತದೆ.

ಯಾವುದೇ ವಿಘಟನೆಯ ಮುಂದಿನ ಹಂತವೆಂದರೆ ಅದು ಹೊಸತರ ಸೃಷ್ಟಿಗೆ ತಳಪಾಯವಾಗುತ್ತದೆ. ಸಂಸ್ಕೃತಿ ಎಂಬುದು ಯಾವತ್ತು ನಶಿಸುವಂತಹುದಲ್ಲ. ಅದು ಕಾಲದ ಪರಿಮಿತಿಯಲ್ಲಿ ಹೊಸ ಹೆಜ್ಜೆಗಳನ್ನು ಮೂಡಿಸುತ್ತಾ ಮುಂದುವರಿಯುತ್ತದೆ. ಕಾದಂಬರಿಕಾರರ ಈ ನಿಲುವಿನಂತೆ ಸಾಂತೇರುಗುತ್ತಿನ ಸಂಸ್ಕೃತಿಯನ್ನೂ ಉಳಿಸುವ ಬಲು ದೊಡ್ಡ ಸವಾಲನ್ನು ಆಧುನಿಕ ಶಿಕ್ಷಣ ಪಡೆದ ಎದುರಿಸುವ ಸಾಹಸಕ್ಕೆ ಪ್ರಜ್ಞಾಳು ಕೈ ಹಾಕುತ್ತಾಳೆ. ಅನ್ಯ ಧರ್ಮದ ಹುಡುಗ ಶಾಂತಿರಾಜನನ್ನು ವಿವಾಹವಾಗುವ ಯೋಜನೆಯೊಂದಿಗೆ ಗುತ್ತಿನ ಸಂಪ್ರದಾಯವನ್ನು ಉಲ್ಲಂಘಿಸುತ್ತಲೇ ಹೊಸ ಸಂಸ್ಕೃತಿಯನ್ನು ಹುಟ್ಟು ಹಾಕುವ ಪ್ರಜ್ಞಾಳ ಪ್ರಜ್ಞೆ ಸ್ವಾಗತಾರ್ಹವಾದುದು. ಒಟ್ಟಿನಲ್ಲಿ ಕಾಲಗತಿಯೊಂದಿಗೆ ಹೊಂದಿಕೊಂಡು ಹೆಜ್ಜೆ

ಹಾಕಿದಾಗ ಮಾತ್ರ ಬದುಕು ಪರಿಪೂರ್ಣವಾಗುವುದಕ್ಕೆ ಸಾಧ್ಯ. ಇಲ್ಲವಾದಲ್ಲಿ ಉಳಿಯುವುದು ಬರಿಯ 'ಬರಡು' ಮಾತ್ರ.

ಪರಾಮರ್ಶನ ಗ್ರಂಥಗಳು

೧. ಅಮೂರ ಜಿ. ಎಸ್., ೨೦೦೬,
ಕನ್ನಡ ಕಥನ ಸಾಹಿತ್ಯ: ಕಾದಂಬರಿ, ಸಪ್ನಾ ಬುಕ್ ಹೌಸ್, ಬೆಂಗಳೂರು
ಇವರ ಪರವಾಗಿ ಶ್ರೀಮತಿ ಭಾನುಮತಿ ಎಸ್. ಶಾ.

೨. ಇಂದಿರಾ ಹೆಗ್ಗಡೆ, ೨೦೦೪
ಬಂಟರು ಒಂದು ಸಮಾಜೋ-ಸಾಂಸ್ಕೃತಿಕ ಅಧ್ಯಯನ,
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೩. ಒಡೆಯರ್ ಡಿ. ಹೆಗ್ಗಡೆ, ೨೦೦೬
ಜಾಗತೀಕರಣ ಮತ್ತು ಗಾಂಧೀಜಿಯವರ ಆರ್ಥಿಕ ವಿಚಾರಧಾರೆ,
ಮಾನವಾಭಿವೃದ್ಧಿ ಅಧ್ಯಯನಗಳ ಕೇಂದ್ರ, ಮೈಸೂರು.

೪. ಕವಿತಾ ರೈ ಬಿ. ಆರ್., ೨೦೦೫
ಮಹಿಳೆ: ಅಸ್ತಿತ್ವದ ಸಂಕಥನ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

೫. ಗಾಯತ್ರೀ ನಾವಡ, ೧೯೯೯
ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು,
ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ, ಸಿರಿ ಪ್ರಕಾಶನ, ಹೊಸಪೇಟೆ.

೬. ಜನಾರ್ದನ ಭಟ್ ಬಿ., ೨೦೦೯
ತುಷಾರ ಮಾಸಪತ್ರಿಕೆಯ ಕೃತಿ ಸಂಪದ ಲೇಖನ.

೭. ನಟರಾಜ್ ಹುಳಿಯಾರ್ (ಸಂ), ೨೦೦೩
ಮಾರ್ಕ್ಸ್, ಗಾಂಧಿ, ಸಮಾಜವಾದ ಭಾಗ-೧,
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೮. ನರಹಳ್ಳಿ ಬಾಲಸುಬ್ರಹ್ಮಣ್ಯ (ಸಂ), ೧೯೯೮
ಸಾಹಿತ್ಯ ಸಂಸ್ಕೃತಿ, (ಸ್ತ್ರೀವಾದಿ ಸಾಹಿತ್ಯವಿಮರ್ಶೆ-ಸಂಪಾದಿತ ಲೇಖನ, ತೇಜಸ್ವಿನಿ ನಿರಂಜನ
ಮತ್ತು ಸೀಮಂತಿನಿ ನಿರಂಜನ), ಅಂಕಿತ ಪುಸ್ತಕ, ಬೆಂಗಳೂರು.

೯. ನರೇಂದ್ರ ರೈ ದೇರ್ಲ (ಅಪ್ರಕಟಿತ ಲೇಖನಗಳು)
ಇಪ್ಪತ್ತನೇ ಶತಮಾನದಲ್ಲಿ ಬಂಟರು,
ಜಾಗತಿಕ ಬಂಟರ ಸಂಘದ ಸಂಶೋಧನೆಯ ಯೋಜನೆಯೊಂದಕ್ಕೆ ಸಲ್ಲಿಸಿದ ಮಾಹಿತಿ.

೧೦. ನಾ. ಮೊಗಸಾಲೆ, ೨೦೦೫
ಬಯಲ ಬೆಟ್ಟ, ಸುಮುಖ ಪ್ರಕಾಶನ, ಬೆಂಗಳೂರು.

೧೧. ನಾ. ಮೊಗಸಾಲೆ, ೨೦೦೮
ಉಲ್ಲಂಘನೆ, ಸುಮುಖ ಪ್ರಕಾಶನ, ಬೆಂಗಳೂರು.

೧೨. ಪೀಟರ್ ಜೆ. ಕ್ಲಾಸ್, ೧೯೮೭
ತುಳುವ ದರ್ಶನ, ಕನ್ನಡಕ್ಕೆ: ಎ.ವಿ. ನಾವಡ, ಸುಭಾಷ್ಚಂದ್ರ,
ಪ್ರಾದೇಶಿಕ ವ್ಯಾಸಂಗ, ಕುಂದಾಪುರ.

೧೩. ಪ್ರೀತಿ ಶುಭಚಂದ್ರ, ೨೦೦೨
ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳವಳಿಗಳು,
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪. ಪುರುಷೋತ್ತಮ ಬಿಳಿಮಲೆ, ೧೯೯೦
ಕರಾವಳಿ ಜಾನಪದ, ಮಂಗಳಗಂಗೋತ್ರಿ, ಮಂಗಳೂರು

೧೫. ಮಾಧವ ಮೂಡುಕೊಣಾಜೆ, ೨೦೦೬
ಡಾ. ನಾ. ಮೊಗಸಾಲೆಯವರ ಸಾಹಿತ್ಯ ಮತ್ತು ಬದುಕು – ಒಂದು ಅಧ್ಯಯನ,
ಪಿ.ಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.

೧೬. ಯಶಪಾಲ್, ೧೯೯೮
ಗಾಂಧಿವಾದದ ಶವಪರೀಕ್ಷೆ, ಡಿ.ವಿ.ಕೆ. ಮೂರ್ತಿ, ಮೈಸೂರು.

೧೭. ರಾಜಶ್ರೀ, ೨೦೦೮
ತುಳು ಜನಪದ ಕಾವ್ಯ – ಇಹ ಪರ ಲೋಕದೃಷ್ಟಿ,
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ, ಮಂಗಳಗಂಗೋತ್ರಿ.

೧೮. ವಿವೇಕ ರೈ ಬಿ.ಎ., ೧೯೮೫
ತುಳು ಜನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೯. ಸುನೀತಾ ಎಂ. ಶೆಟ್ಟಿ, ೨೦೦೦
ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ,
ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ.

೨೦. ಸುಮಿತ್ರಾ ಬಾಯಿ ಬಿ.ಎನ್., ೧೯೯೯,
ಸ್ತ್ರೀವಾದ, ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೧. ಶ್ರೀಮತಿ ಎಚ್. ಎಸ್. (ಸಂ), ೨೦೦೦
ಮಹಿಳಾ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.